ವೀರಶೈವ ಲಿಂಗಾಯತ
ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025
— ಮೈಸೂರು —
Thank you
Mysuru
For the overwhelming response.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 21 ಮಂಗಳವಾರ 2025

ಸಂಪುಟ: 45 | ಸಂಚಿಕೆ: 274 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬೆಳಗಾವಿ ಐತಿಹಾಸಿಕ ಕಾಂಗ್ರೆಸ್ ಅಭಿಯಾನದ ಬಳಿಕ

ಕೆಪಿಸಿಸಿ ಅಧ್ಯಕ್ಷಗಾದಿ ತೊರೆಯಲು ಡಿಕೆಶಿ ತೀರ್ಮಾನ

ವೀರಶೈವ ಸಮುದಾಯದ ಸಿ.ಎಸ್.ನಾಡಗೌಡ ಉತ್ತರಾಧಿಕಾರಿ?

ಬೆಂಗಳೂರು, ಜ.20(ಕೆಎಂಶಿ)– ಬೆಳಗಾವಿಯಲ್ಲಿ ನಡೆಯುತ್ತಿರುವ ಗಾಂಧಿ ಭಾರತ ಸ್ಮರಣಾರ್ಥ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಅಭಿಯಾನದ ಸಲುವಾಗಿ ಏರ್ಪಡಿಸಿರುವ ಬೃಹತ್ ಕಾಂಗ್ರೆಸ್ ಸಮಾವೇಶದ ನಂತರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಲು ತೀರ್ಮಾನಿಸಿದ್ದಾರೆ.


ನಾಡಗೌಡ

ಐತಿಹಾಸಿಕ ಸಮಾವೇಶದ ಪೂರ್ಣ ಉಸ್ತುವಾರಿ ವಹಿಸಿಕೊಂಡಿರುವ ಶಿವಕುಮಾರ್, ಕಳೆದ ಮೂರು ದಿನಗಳಿಂದ ಬೆಳಗಾವಿಯಲ್ಲೇ ಬಿಡಾರ ಹೂಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು, ಡಾ.ಅಂಬೇಡ್ಕರ್ ಕುರಿತು ನೀಡಿದ ಹೇಳಿಕೆ ನಂತರ ಕಾಂಗ್ರೆಸ್ ಈ ಐತಿಹಾಸಿಕ ಸಮಾವೇಶಕ್ಕೆ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಘೋಷವಾಕ್ಯವಾಗಿ ಬಳಸಿಕೊಳ್ಳುತ್ತಿದೆ. ಈ ಕಾರ್ಯಕ್ರಮದ ಮೂಲಕ ರಾಷ್ಟ್ರದ ಗಮನ ಸೆಳೆಯಲು ಕಾಂಗ್ರೆಸ್ ■6ನೇ ಪುಟಕ್ಕೆ

ಕಾಂಗ್ರೆಸ್‌ನಲ್ಲಿ ಯಾವ ಬಂಡಾಯವೂ ಇಲ್ಲ

ಬೆಂಗಳೂರು,ಜ.20(ಕೆಎಂಶಿ)– ಕಾಂಗ್ರೆಸ್‌ನಲ್ಲಿ ಯಾವ ಬಂಡಾಯವೂ ಇಲ್ಲ, ಯಾರ ಜೊತೆಯೂ ವೈಯಕ್ತಿಕ ಭಿನ್ನಾಭಿಪ್ರಾಯವೂ ಇಲ್ಲ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.



ಪಕ್ಷ ಉಳಿಸುವುದು, ಸರ್ಕಾರ ಭದ್ರವಾಗಿಡುವುದೇ ನನ್ನ ಕರ್ತವ್ಯ. ಇದರ ಹೊರತಾಗಿ ನನಗೆ ಬೇರೆ ಯಾವುದೇ ಕರ್ತವ್ಯಗಳಿಲ್ಲ. ಕಾರ್ಯಕರ್ತರ ರಕ್ಷಣೆ ನನ್ನ ಮೊದಲ ಕರ್ತವ್ಯ. ನಾನು ನನ್ನ ಕೆಲಸ ಮಾಡುತ್ತಿದ್ದೇನೆ, ಯಾರೋ ಹೇಳಿದ ಸುಳ್ಳನ್ನು ಮಾಧ್ಯಮದವರು ನಂಬಬಾರದು, ಪಕ್ಷದಲ್ಲಿ ಬಂಡಾಯವಿದೆ ಎಂದೆಲ್ಲಾ ಹೇಳಬೇಡಿ. ನಾನು ಎಲ್ಲರನ್ನು ಸಮಾನವಾಗಿ ಕಾಣುವ ಅಧ್ಯಕ್ಷ ■6ನೇ ಪುಟಕ್ಕೆ



ಉಚಿತ ಟಿ–ಶರ್ಟ್‌ಗಾಗಿ ಯುವಕರ ಸೆಣಸಾಟ

ಯಕಶ್ಚಿತ್ ಒಂದು ಉಚಿತ ಟಿ ಶರ್ಟ್‌ಗಾಗಿ

ಸಾವಿನ ಸನ್ನಿವೇಶ ಕಣ್ಣಿಗೆ ಕಟ್ಟಿದ

ಯುವಕರ ಸೆಣಸಾಟ!



ಮೈಸೂರು, ಜ.20(ಎಸ್‌ಬಿಡಿ)– ಹದಿಹರೆಯದವರ ರೆಡಿಮೇಡ್ ಬಟ್ಟೆ ಮಳಿಗೆಯೊಂದರ ವಾರ್ಷಿಕೋತ್ಸವದಂದು ಉಚಿತ ಟಿ–ಶರ್ಟ್ ಆಫರ್‌ನಿಂದ ಸಂಭವಿಸಬಹುದಾಗಿದ್ದ ಘೋರ ಅಪಾಯ ಅದೃಷ್ಟವಶಾತ್ ತಪ್ಪಿದೆ. ದಿಢೀರ್ ಸಾವಿರಾರು ಯುವಕರು ಜಮಾಯಿಸಿದ್ದರಿಂದ ಭಾರೀ ನೂಕುನುಗ್ಗಲು ಉಂಟಾಗಿದೆ.

ಕೆಲವೇ ಕ್ಷಣದಲ್ಲಿ ಹರಿದು ಬಂದ ಯುವ ಸಮೂಹ ಕಂಡು ಸುತ್ತ–ಮುತ್ತಲ ಜನ ದಂಗಾಗಿದ್ದಾರೆ. ಅಂಗಡಿಯ ರಸ್ತೆಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಸಿಕ್ಕಸಿಕ್ಕಲ್ಲಿ ವಾಹನ ನಿಲ್ಲಿಸಿ ಟಿ ಶರ್ಟ್‌ಗೆ ಮುಗಿಬಿದ್ದಿದ್ದಾರೆ. ಹೀಗೆ ಟಿ ಶರ್ಟ್ ಪಡೆಯುವ ಸಲುವಾಗಿ ನಡೆದ ಪೈಪೋಟಿ ಯಾವುದೇ ಗಳಿಗೆಯಲ್ಲಿ ಅನಾಹುತ ಸಂಭವಿಸುವ ಆತಂಕ ಉಂಟು ಮಾಡಿದೆ. ಟಿ–ಶರ್ಟ್ ಪಡೆಯುವ ಭರದಲ್ಲಿ ಒಬ್ಬರ ಮೇಲೊಬ್ಬರು ಬಿದ್ದು, ಕೆಲವರು ಉಸಿರುಗಟ್ಟಿ ಪೇಚಾಡಿದ್ದಾರೆ. ಮತ್ತೆ ಕೆಲವರು ಸಹಾಯಕ್ಕೆ ಗೋಗರೆದರೂ ಯಾರೂ ಅವರ ಸಹಾಯಕ್ಕೆ ಮುಂದಾಗಲಿಲ್ಲ. ಕೆಲವರು ಅಡ್ಡದಾರಿ ಹಿಡಿದು ಶರ್ಟ್ ಗಿಟ್ಟಿಸುವ ಯತ್ನ ಮಾಡಿದಾಗ ಬ್ಯಾರಿಕೇಡ್ ಭೇದಿಸಲ್ಪಟ್ಟು, ಆಗ ಸಾಮರ್ಥ್ಯ ಇದ್ದವರು ಮುಂದೆ ನುಗ್ಗಿದ್ದಾರೆ. ಕಾಂಪೌಂಡ್ ಹಾರಿದರು, ಗ್ರಿಲ್‌ಗಳ ಮುರಿದರು, ಪರಿಸ್ಥಿತಿ ಮನಗಂಡ ಅಂಗಡಿಯವರು ವಿತರಿಸಲು ಇರಿಸಿದ್ದ ಟಿ ಶರ್ಟ್‌ಗಳನ್ನು ಯುವ ಸಮೂಹದತ್ತ ತೂರಿದರು. ಆಗಲಂತೂ ಮಾರಾಮಾರಿಯೇ ನಡೆದಿದೆ. ಈ ಘಟನೆ ಮೈಸೂರಿನ ಬೋಗಾದಿ ಮುಖ್ಯರಸ್ತೆ ■6ನೇ ಪುಟಕ್ಕೆ

ಅಂಗಡಿ ಮಾಲೀಕನ ವಿರುದ್ಧ ಎಫ್‌ಐಆರ್

ಮೈಸೂರು: ಉಚಿತ ಟಿ–ಶರ್ಟ್ ಹಂಚಿ ಅವಾಂತರ ಸೃಷ್ಟಿಸಿದ 'ಕೆಎ–09 ಫಂಕಿ ವರ್ಲ್ಡ್' ಬಟ್ಟೆ ಅಂಗಡಿ ಮಾಲೀಕ ಎನ್.ಮಂಜುನಾಥ್ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಾತ್ಮೀದಾರರಿಂದ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸರಸ್ವತಿಪುರಂ ಠಾಣೆ ಸಿಬ್ಬಂದಿ ಸಿ.ಕೆ.ನಿತಿನ್, ಸ್ಥಳ ಪರಿಶೀಲನೆ ನಡೆಸಿ ಮಂಜುನಾಥ್ ವಿರುದ್ಧ ದೂರು ದಾಖಲಿಸಿದ್ದಾರೆ. ಸಾರ್ವಜನಿಕರಿಗೆ ಉಚಿತವಾಗಿ ಟಿ–ಶರ್ಟ್ ಹಂಚುವುದಾಗಿ ಆಮಿಷ ನೀಡಿದ್ದರಿಂದ ಹೆಚ್ಚು ಜನ ಜಮಾವಣೆಯಾಗಿ ನೂಕು ನುಗ್ಗಲು ಉಂಟಾಗಿ, ಸಂಚಾರಕ್ಕೆ ಅಡ್ಡಿಯಾಗಿದ್ದಲ್ಲದೆ ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗಿತ್ತು ಎಂದು ದೂರಿನಲ್ಲಿ ವಿವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಜುನಾಥ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) 2023(ಯು/ಎಸ್ 285,292) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಅಂಗಡಿ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಟಿ–ಶರ್ಟ್ ಹಂಚಿದ್ದಾಗಿ ಮಾಲೀಕ ಮಂಜು ನಾಥ್ ಹೇಳಿದ್ದಾನೆ. ಆದರೆ ಅದಕ್ಕೆ ಪೊಲೀಸ್ ಹಾಗೂ ಸಂಬಂಧಿಸಿದ ಯಾವುದೇ ಇಲಾಖೆಗಳಿಂದ ಅನುಮತಿ ಪಡೆದಿರಲಿಲ್ಲ. ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನೂ ಕೈಗೊಂಡಿರಲಿಲ್ಲ. ನಿರ್ಲಕ್ಷ್ಯತೆಯಿಂದ ಟಿ–ಶರ್ಟ್ ಹಂಚಿದ್ದರಿಂದ ಜನಸಂದಣಿ ಉಂಟಾಗಿ ರಸ್ತೆ ಸಂಚಾರಕ್ಕೂ ಅಡ್ಡಿಯಾಗಿತ್ತು. ಅಲ್ಲದೆ ಕಾಲ್ತುಳಿತ ವಾಗುವ ಸಾಧ್ಯತೆಯೂ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಅಂಗಡಿ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್ ತಿಳಿಸಿದ್ದಾರೆ.



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಇಡಿ, ಸಿಬಿಐ ಇದ್ದರೂ ಭಯ ಬೇಕಿಲ್ಲ...!

■ಪುಟ–4

22 ಕ್ಯಾರೆಟ್ ಚಿನ್ನದ ದರ
@ ತೊಳಸಿ
ತೊಳಸಿ ಜ್ಯುಯಲ್ಸ್
THOLASI JEWELS
Fine Jewellers Since Generations
₹ 7450/-
ಹಿಂದಿನ ದಿನದ ಬೆಲೆ
ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221–200926

ಮತ್ತೊಮ್ಮೆ ಅಮೆರಿಕದಲ್ಲಿ ಟ್ರಂಪ್ ಆಡಳಿತ ಆರಂಭ

47ನೇ ಅಧ್ಯಕ್ಷರಾಗಿ ಡೋನಾಲ್ಡ್ ಟ್ರಂಪ್ ಪ್ರಮಾಣವಚನ



ವಾಶಿಂಗ್ಟನ್ ಡಿಸಿ, ಜ. 20–ಅಮೆರಿಕದಲ್ಲಿ ಮತ್ತೊಮ್ಮೆ ಡೊನಾಲ್ಡ್ ಟ್ರಂಪ್ ಆಡಳಿತ ಆರಂಭ. ಈಗ ಜೋ ಬೈಡೆನ್ ಆಡಳಿತ ಅಂತ್ಯಗೊಂಡಿದೆ. ಕಳೆದ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ದಾಖಲಿಸಿದ ಡೋನಾಲ್ಡ್ ಟ್ರಂಪ್ ಇದೀಗ ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಅಮೆರಿಕ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ನ್ಯಾ. ಜಾನ್ ರಾಬರ್ಟ್ಸ್, ನೂತನ ಅಧ್ಯಕ್ಷ ಟ್ರಂಪ್‌ಗೆ ಪ್ರಮಾಣವಚನ ಬೋಧಿಸಿದ್ದಾರೆ. 40 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಅಮೆರಿಕ ಅಧ್ಯಕ್ಷ ಪ್ರಮಾಣ ವಚನ ಸ್ವೀಕಾರ ಸಮಾರಂಭ ವಿಪರೀತ ಚಳಿಯ ಹಿನ್ನೆಲೆಯಲ್ಲಿ ಕ್ಯಾಪಿಟಲ್ ರೊಟುಂಡಾ ಒಳಾಂಗಣ ಸಭಾಂಗಣದಲ್ಲಿ ನಡೆದಿದೆ. ಡೋನಾಲ್ಡ್ ಟ್ರಂಪ್ 2ನೇ ಬಾರಿಗೆ ■5ನೇ ಪುಟಕ್ಕೆ

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಾರಿಗೆ ಬಸ್ ಉರುಳಿ ಬಿದ್ದು

33 ಮಂದಿಗೆ ಗಾಯ

ಮೂವರ ಸ್ಥಿತಿ ಗಂಭೀರ; ನಿಮಾನ್ಸ್‌ಗೆ ಸ್ಥಳಾಂತರ



ಮದ್ದೂರು, ಜ.20–ಚಾಲಕನ ನಿಯಂತ್ರಣ ಕಳೆದುಕೊಂಡು ಕೆಎಸ್‌ಆರ್‌ಟಿಸಿ ಬಸ್ ಉರುಳಿ ಬಿದ್ದ ಪರಿಣಾಮ 33 ಪ್ರಯಾಣಿಕರು ಗಾಯಗೊಂಡಿರುವ ಘಟನೆ ತಾಲೂಕಿನ ಬೆಂಗಳೂರು–ಮೈಸೂರು ಹೆದ್ದಾರಿಯ ರುದ್ರಾಕ್ಷಿಪುರ ಗೇಟ್ ಬಳಿ ಸೋಮವಾರ ಬೆಳಿಗ್ಗೆ ಸಂಭವಿಸಿದೆ.

ಘಟನೆಯಲ್ಲಿ ಗಾಯಗೊಂಡಿರುವ 33 ಮಂದಿ ಪೈಕಿ ಮೂವರ ತಲೆಗೆ ಗಂಭೀರವಾದ ಗಾಯವಾಗಿದ್ದು, ಅವರನ್ನು ಹೆಚ್ಚಿನ ಚಿಕಿತ್ಸೆಗೆ ನಿಮ್ಹಾನ್ಸ್‌ಗೆ ಕರೆದೊಯ್ಯಲಾಗಿದೆ. ಚಾಮರಾಜ ನಗರದಿಂದ ಕೊಳ್ಳೇಗಾಲ, ಮಳವಳ್ಳಿ, ಮದ್ದೂರು ಮಾರ್ಗವಾಗಿ ಬೆಂಗಳೂರಿಗೆ (ಕೆ.ಎ–10 ಎಫ್–0520) ಬಸ್ ತೆರಳುತ್ತಿತ್ತು. ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ■6ನೇ ಪುಟಕ್ಕೆ

ಬಿಜೆಪಿ ಬಂಡಾಯ ಶಮನಕ್ಕೆ ಇಂದು ಮಹತ್ವದ ಕೋರ್ ಕಮಿಟಿ ಸಭೆ

ಬೆಂಗಳೂರು, ಜ.20–ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಬಂಡಾಯ ಬೆಳವಣಿಗೆಯ ನಡುವೆ ಮಂಗಳವಾರ ಸಂಜೆ 7ಗಂಟೆಗೆ ಬಿಜೆಪಿ ರಾಜ್ಯದ ಕೋರ್ ಕಮಿಟಿ ಸಭೆ ನಡೆಯಲಿದೆ. ಈ ಕುರಿತಾಗಿ ಮಾಹಿತಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೋರ್ ಕಮಿಟಿ ಸಭೆಯಲ್ಲಿ ಶಾಸಕರು ಮತ್ತು ಸಂಸದರ ಅಭಿಪ್ರಾಯವನ್ನು ಪಡೆದುಕೊಳ್ಳಲಾಗುವುದು ಎಂದು ವಿವರಿಸಿದರು. ನಾಳೆ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್, ಪೊನ್ನು ರಾಧಾಕೃಷ್ಣ, ಸಹ ಉಸ್ತುವಾರಿ ಸುಧಾಕರ್ ರೆಡ್ಡಿ ಬರುತ್ತಿದ್ದಾರೆ. ಬಿಜೆಪಿ ಕಚೇರಿಯಲ್ಲಿ 3 ಗಂಟೆಗೆ ಚುನಾಯಿತ ಸದಸ್ಯರು, ಸಂಸದರು, ಶಾಸಕರ ಜೊತೆ ಸಭೆ ಕರೆದಿದ್ದಾರೆ. ಅಲ್ಲಿ ಎಲ್ಲರ ಅಭಿಪ್ರಾಯ ಪಡೆಯುತ್ತಾರೆ. 4 ಗಂಟೆಗೆ ಸಂಘಟನಾ ಪರ್ವ, ಜಿಲ್ಲಾ ಅಧ್ಯಕ್ಷರ ಚುನಾವಣೆ ಬಗ್ಗೆ ಸಭೆ ಇದೆ. ರಾಜ್ಯಾಧ್ಯಕ್ಷರ ಚುನಾವಣೆ ಚರ್ಚೆ ಆಗುತ್ತದೆ. ಚುನಾವಣೆ ಆಫೀಸರ್ ಸಭೆ ಕೂಡ ನಡೆಯುತ್ತದೆ. ತದನಂತರ 7 ಗಂಟೆಗೆ ಕೋರ್ ಕಮಿಟಿ ಸಭೆ ■6ನೇ ಪುಟಕ್ಕೆ

ಹೆಚ್.ಡಿ.ಕೋಟೆ ರಸ್ತೆಯ ಜಯಪುರದ ಹಾರೋಹಳ್ಳಿ ಬಳಿ ಕೇರಳದ ಉದ್ಯಮಿಗಳ ಮೇಲೆ ದಾಳಿ

ಹಾಡಹಗಲೇ ಮುಸುಕುಧಾರಿಗಳಿಂದ ಹಣದೊಂದಿಗೆ ಕಾರು ಅಪಹರಣ

ಮೈಸೂರು,ಜ.20(ಆರ್‌ಕೆ)–ಕೇರಳ ಮೂಲದ ಉದ್ಯಮಿಗಳನ್ನು ಅಡ್ಡಗಟ್ಟಿದ ಐವರು ಮುಸುಕುಧಾರಿ ದರೋಡೆ ಕೋರರ ತಂಡ ಅವರ ಮೇಲೆ ಹಲ್ಲೆ ನಡೆಸಿ, 1.5 ಲಕ್ಷ ರೂ. ನಗದಿನೊಂದಿಗೆ ಕಾರನ್ನು ಅಪಹರಿಸಿರುವ ಘಟನೆ ಮೈಸೂರು ಹೊರವಲಯದ ಹಾರೋಹಳ್ಳಿ ಬಳಿ ಹಾಡಹಗಲೇ ಇಂದು ಬೆಳಗ್ಗೆ ಸಂಭವಿಸಿದೆ. ಕೇರಳದ ಸುಲ್ತಾನ್‌ಬತ್ತೇರಿ ನಿವಾಸಿಗಳಾದ ಅಶ್ರಫ್ ಅಹಮದ್ ಮತ್ತು ಸೂಫಿ, ದುಷ್ಕರ್ಮಿಗಳಿಂದ ಹಲ್ಲೆಗೊಳಗಾಗಿ ಗಾಯಗೊಂಡು ಕಾರು, ಹಣ ಕಳೆದುಕೊಂಡವರು.

ಅಡಿಕೆ ಖರೀದಿಸಲೆಂದು ಹೆಚ್.ಡಿ.ಕೋಟೆಗೆ ಫೋರ್ಡ್ ಎಕೋ ಸ್ಪೋರ್ಟ್ ಕಾರಿನಲ್ಲಿ ಹೋಗುತ್ತಿದ್ದಾಗ ಅವರನ್ನು ಇನ್ನೋವಾ ಕಾರಿನಲ್ಲಿ ಹಿಂಬಾಲಿಸಿ ಬಂದ ಐವರು ಮುಸುಕುಧಾರಿಗಳು, ಬೆಳಗ್ಗೆ ಸುಮಾರು 9.15ರಲ್ಲಿ ಸಿನಿಮೀಯ ಶೈಲಿಯಲ್ಲಿ ಕಾರು ಅಡ್ಡಗಟ್ಟಿದ್ದಾರೆ. ಎಕೋ ಸ್ಪೋರ್ಟ್ ಕಾರಿನಿಂದ ಅಶ್ರಫ್ ಮತ್ತು ಸೂಫಿ ಅವರನ್ನು ಹೊರಗೆಳೆದು ಹಣ ಕೊಡುವಂತೆ ಕೇಳಿದ್ದಾರೆ. ಪ್ರತಿರೋಧ ಒಡ್ಡಿದ ಅವರ ಮೇಲೆ ಪೆಪ್ಪರ್ ಸ್ಪ್ರೇ ಸಿಂಪಡಿಸಿದ್ದಲ್ಲದೆ, ತೀವ್ರವಾಗಿ ಹಲ್ಲೆ ನಡೆಸಿದ ದುಷ್ಕರ್ಮಿಗಳು, 1.5 ಲಕ್ಷ ರೂ. ನಗದು ದೋಚಿ ಕಾರಿನೊಂದಿಗೆ ಪರಾರಿಯಾಗಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಕೇರಳ ಉದ್ಯಮಿಗಳು, ಜಯಪುರದ ಆಸ್ಪತ್ರೆಗೆ ತೆರಳಿ ಪ್ರಥಮ ಚಿಕಿತ್ಸೆ ಪಡೆದು, ಅಲ್ಲಿನ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿಡಿಯೋ ವೈರಲ್: ಈ ನಡುವೆ ಹೆಚ್.ಡಿ.ಕೋಟೆ ರಸ್ತೆಯಲ್ಲಿ ಸಂಚರಿಸುತ್ತಿದ್ದ ಬಸ್ ಪ್ರಯಾಣಿಕರೊಬ್ಬರು ದುಷ್ಕರ್ಮಿಗಳು ನಡೆಸಿದ ಹಲ್ಲೆ ದೃಶ್ಯವನ್ನು ಮೊಬೈಲ್ ಫೋನ್‌ನಲ್ಲಿ ಸೆರೆ ಹಿಡಿದು 3 ಸೆಕೆಂಡ್‌ನ ಈ ವಿಡಿಯೋ ಅನ್ನು ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು, ವಿಡಿಯೋ ಸುಳುವಿನ ಜಾಡು ಹಿಡಿದು ತನಿಖೆ ನಡೆಸುತ್ತಿದ್ದಾರೆ.

ತಾವು ಹೆಚ್.ಡಿ.ಕೋಟೆ ಬಳಿ ಬೆಳೆದಿದ್ದ ಅಡಿಕೆ ಖರೀದಿಸಲು 1.5 ಮುಂಗಡ ಹಣದೊಂದಿಗೆ ತೆರಳುತ್ತಿದ್ದೆವು. ಸುಮಾರು 10 ಕಿ.ಮೀ. ದೂರದಿಂದಲೇ ನಮ್ಮ ಕಾರನ್ನು ಹಿಂಬಾಲಿಸಿ ಬರುತ್ತಿದ್ದ ಐವರು ಮುಸುಕುಧಾರಿಗಳು, ಹಾರೋಹಳ್ಳಿ ಸಮೀಪ ಕಾರು ಅಡ್ಡಗಟ್ಟಿ ನಮ್ಮ ಬಳಿ ಇದ್ದ 1.5 ಲಕ್ಷ ರೂ. ಹಣ ದೋಚಿ, ನಮ್ಮ ಫೋರ್ಡ್ ಎಕೋ ಸ್ಪೋರ್ಟ್ ಕಾರನ್ನು ತೆಗೆದುಕೊಂಡು ಪರಾರಿಯಾದರು ಎಂದು ಉದ್ಯಮಿಗಳು ಪೊಲೀಸರಿಗೆ ತಿಳಿಸಿದ್ದಾರೆ. ನಾವು ಪ್ರತಿರೋಧ ವ್ಯಕ್ತಪಡಿಸಿದೆವು.



ಕೇರಳದ ಉದ್ಯಮಿಗಳ ಮೇಲೆ ದರೋಡೆಕೋರರು ಹಲ್ಲೆ ನಡೆಸುವ ಕೃತ್ಯವನ್ನು ಬಸ್ ಪ್ರಯಾಣಿಕರೊಬ್ಬರು ಸೆರೆ ಹಿಡಿದು, ಆ ವಿಡಿಯೋವನ್ನು ವೈರಲ್ ಮಾಡಿದ ಚಿತ್ರವಿದು.

ಆಗಾಗಿ ನಮ್ಮ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ ಎಂದೂ ಅವರು ದೂರಿನಲ್ಲಿ ಆರೋಪಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಎಸ್‌ಪಿ ಎನ್.ವಿಷ್ಣುವರ್ಧನ್, ಎಎಸ್‌ಪಿಗಳಾದ ಸಿ.ಮಲ್ಲಿಕ್, ನಾಗೇಶ್, ಪಿ.ರಘು ಇತರರು ಘಟನಾ ಸ್ಥಳಕ್ಕೆ ತೆರಳಿ, ಪರಿಶೀಲನೆ ನಡೆಸಿದರು. ತನಿಖೆ ನಡೆಸುತ್ತಿರುವ ಪೊಲೀಸರು, ವೈರಲ್ ಆಗಿರುವ ವಿಡಿಯೋ, ಆ ಮಾರ್ಗದ ಸಿಸಿ ಕ್ಯಾಮರಾ ಫುಟೇಜ್‌ಗಳ ಸುಳಿವಿನ ಆಧಾರದ ಮೇಲೆ ತಲೆಮರೆಸಿಕೊಂಡಿರುವ ದರೋಡೆ ಕೋರರ ಪತ್ತೆಗೆ ಬಲೆ ಬೀಸಿದ್ದಾರೆ.

ಮೂರು ತನಿಖಾ ತಂಡ ರಚನೆ


ವಿಷ್ಣುವರ್ಧನ್

ಮೈಸೂರು: ಮೈಸೂರು ಹೊರ ವಲಯದ ಹಾರೋಹಳ್ಳಿ ಬಳಿ ಇಂದು ಬೆಳಗ್ಗೆ ಆರೋಪಿಗಳ ಪತ್ತೆಗೆ 3 ತನಿಖಾ ತಂಡಗಳನ್ನು ರಚಿಸಲಾಗಿದೆ ಎಂದು ಎಸ್ಪಿ ಎನ್.ವಿಷ್ಣುವರ್ಧನ್ ತಿಳಿಸಿದ್ದಾರೆ. ಘಟನೆ ವಿಷಯ ತಿಳಿಯುತ್ತಿದ್ದಂತೆಯೇ ನಾವು ಸ್ಥಳಕ್ಕೆ ತೆರಳಿ ಮಹಜರು ನಡೆಸಿ ಪೂರ್ಣ ಮಾಹಿತಿ ಪಡೆದು, ದುಷ್ಕರ್ಮಿಗಳ ಪತ್ತೆಗೆ ಅಡಿಷನಲ್ ಎಸ್ಪಿ ಸಿ.ಮಲ್ಲಿಕ್ ಮೇಲ್ವಿಚಾರಣೆಯಲ್ಲಿ 3 ತನಿಖಾ ತಂಡ ರಚಿಸಿ, ಸುಳಿವಿನ ಜಾಡು ಹಿಡಿದು ಶೋಧ ಕಾರ್ಯ ನಡೆಸುತ್ತಿದ್ದೇವೆ ಎಂದಿದ್ದಾರೆ. ಈಗಾಗಲೇ ತನಿಖಾ ತಂಡದ ಅಧಿಕಾರಿಗಳು ಮಾಹಿತಿ ಆಧರಿಸಿ ಶೋಧ ಆರಂಭಿಸಿದ್ದಾರೆ. ಒಂದೆರಡು ದಿನದೊಳಗೆ ಪ್ರಕರಣ ಭೇದಿಸುತ್ತೇವೆ ಎಂದು ವಿಷ್ಣುವರ್ಧನ 'ಮೈಸೂರು ಮಿತ್ರ'ನಿಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಪಹರಿಸಿದ ಉದ್ಯಮಿಗಳ ಕಾರು; ಡಕಾಯಿತರ ಕಾರು ಪತ್ತೆ! ಕದ್ದ ಕಾರುಗಳಲ್ಲಿ ದರೋಡೆ ಕರಾಮತ್ತು

ಕೇರಳದ ಉದ್ಯಮಿಗಳ ಮೇಲೆ ಹಲ್ಲೆ ನಡೆಸಿ ಹಣ ಹಾಗೂ ಕಾರು ಅಪಹರಿಸಿದ್ದ ದುಷ್ಕರ್ಮಿಗಳು ಉದ್ಯಮಿಯ ಕಾರು ಹಾಗೂ ತಾವು ತಂದಿದ್ದ ಒಂದು ಕಾರನ್ನು ಪ್ರತ್ಯೇಕ ಸ್ಥಳಗಳಲ್ಲಿ ಬಿಟ್ಟು ಪರಾರಿಯಾಗಿದ್ದಾರೆ. ದುಷ್ಕರ್ಮಿಗಳು ದೆಹಲಿ ಮತ್ತು ಬೆಂಗಳೂರು ನೋಂದಣಿ ಇರುವ ಎರಡು ಕಾರುಗಳಲ್ಲಿ ಬಂದು ಉದ್ಯಮಿಯ ಕಾರನ್ನು ಅಡ್ಡಗಟ್ಟಿ, ಕಾರಿನಲ್ಲಿದ್ದವರ ಕಣ್ಣಿಗೆ ಪೆಪ್ಪರ್ ಸ್ಪ್ರೇ ಸಿಂಪಡಿಸಿ, ಹಲ್ಲೆ ನಡೆಸಿದ್ದಲ್ಲದೆ ಕಾರಿನ ಸಮೇತ ಹಣ ದೋಚಿ ಪರಾರಿಯಾಗಿದ್ದರು. ಸಂಜೆ ವೇಳೆಗೆ ಮಾರ್ಬಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ದುಷ್ಕರ್ಮಿಗಳ ಒಂದು ಕಾರು ಪತ್ತೆಯಾಗಿದ್ದು, ಗೋಪಾಲಪುರ ಬಳಿ ಉದ್ಯಮಿಯ ■6ನೇ ಪುಟಕ್ಕೆ

ಮೈಸೂರು ಮಿತ್ರ

ಮಂಗಳವಾರ 21 ಜನವರಿ 2025

ಮೈಸೂರಿನ ಎಟಿಎಂಇ ಕಾಲೇಜಿಗೆ ರಾಷ್ಟ್ರೀಯ ಮಟ್ಟದ ಮಾನ್ಯತೆ



ಮೈಸೂರಿನ ಪತ್ರಕರ್ತರ ಭವನದಲ್ಲಿ ಬನ್ನೂರು ರಸ್ತೆಯ ಎಟಿಎಂಇ ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಸವರಾಜು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜ.20(ಬಿಎಲ್‌ಯು)– ಮೈಸೂರಿನ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಮತ್ತು ಮ್ಯಾಕಾನಿಕಲ್ ವಿಭಾಗದ ಪ್ರಯೋಗಾಲಯಕ್ಕೆ ಎನ್‌ಎಬಿಎಲ್ ಮಂಡಳಿಯ ರಾಷ್ಟ್ರ ಮಟ್ಟದ ಮಾನ್ಯತೆ ದೊರೆತಿದೆ ಎಂದು ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಸವರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಷ್ಟ್ರೀಯ ಪ್ರಯೋಗಾಲಯಗಳ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ (ಎನ್‌ಎಬಿಎಲ್) ಮಂಡಳಿ ನಾಲ್ಕು ವರ್ಷದ ಅವಧಿಗೆ ಈ ಮಾನ್ಯತೆ ನೀಡಿದೆ ಎಂದರು. ಎನ್‌ಎಬಿಎಲ್ ಮಾನ್ಯತೆ ಪಡೆದಿರುವ ಪ್ರಯೋಗಾಲಯದ ಕೆಲವೇ ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ನಮ್ಮ ಕಾಲೇಜು ಒಂದೆನಿಸಿದ್ದು, ಇದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಎನ್‌ಎಬಿಎಲ್ ಮಾನ್ಯತೆ ಪಡೆದ ಪ್ರಯೋಗಾಲಯದಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯಕ್ಕೆ ಬಳಸುವ ಮಣ್ಣು, ಜಲ್ಲಿ, ಇಟ್ಟಿಗೆ, ಕಬ್ಬಿಣ, ಸಿಮೆಂಟ್ ಸೇರಿದಂತೆ ಬಹುತೇಕ ಸಾಮಗ್ರಿಗಳ ಗುಣಮಟ್ಟವನ್ನು ಅಂತರಾಷ್ಟ್ರೀಯ ಮಾನದಂಡಕ್ಕೆ ಅನುಗುಣವಾಗಿ ನಿರ್ದಿಷ್ಟ ಪರೀಕ್ಷೆ ನಡೆಸಿ ನಿಖರ ವರದಿ ನೀಡಬಹುದಾಗಿದೆ. ಈ ಗುಣಮಟ್ಟದ ವರದಿ ಭಾರತದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲೂ ಮಾನ್ಯತೆ ಪಡೆದಿರುತ್ತದೆ ಎಂದು ಬಸವರಾಜು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಕಾಲೇಜಿನ ಆಡಳಿತಾಧಿಕಾರಿ ಪ್ರೊ. ಸಚ್ಚಿದಾನಂದಮೂರ್ತಿ, ಪ್ರೊ.ಮನುವಿಜಯ್, ಪ್ರೊ.ಚಂದ್ರಶೇಖರ್ ಉಪಸ್ಥಿತರಿದ್ದರು.

ಹದಿನಾರು ಶ್ರೀ ಮಹದೇಶ್ವರ ದೇವಸ್ಥಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ



ಹದಿನಾರು ಗ್ರಾಮದ ಶ್ರೀ ಮಹಾದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿದ ಸಚಿವ ಡಾ.ಮಹದೇವಪ್ಪ, ಜೀರ್ಣೋದ್ಧಾರ ಕಾಮಗಾರಿ ಪರಿಶೀಲಿಸಿದರು.

ಸುತ್ತೂರು,ಜ.20– ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ನಂಜನಗೂಡು ತಾಲೂಕಿನ ಹದಿನಾರು ಗ್ರಾಮದ ಶ್ರೀ ಮಹಾದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ಜೀರ್ಣೋದ್ಧಾರ ಕಾಮಗಾರಿ ಪರಿಶೀಲನೆ ನಡೆಸಿದರು.

ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಗುತ್ತಿಗೆದಾರ ಬಾಪೂಜಿ, ಮಾಲಂಗಿ ನಾಗರಾಜು, ಜಿ.ಪಂ ಮಾಜಿ ಸದಸ್ಯ ಎಚ್.ಎನ್.ನಂಜಪ್ಪ, ಗ್ರಾ.ಪಂ ಮಾಜಿ ಅಧ್ಯಕ್ಷ ಅಭಿ, ಸದಸ್ಯ ರವಿಕುಮಾರ್, ಪ್ರಮೋದ್‌ಕುಮಾರ್, ತಿಬ್ಬಣ್ಣ, ಕುಪೇಂದ್ರ, ದೇವನೂರು ಮಹದೇವಪ್ಪ, ತುಂಬನೇರಳೆ ನಾಗರಾಜು, ನಂದೀಶ್, ಹದಿನಾರು ಗ್ರಾಮದ ಮುಖಂಡರು ಹಾಜರಿದ್ದರು.

ವಿವೇಕಾನಂದರ ಜಯಂತಿ ಆಚರಣೆ



ಮೈಸೂರಿನ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ ವತಿಯಿಂದ ಸಂಘದ ಕಚೇರಿಯಲ್ಲಿ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಆಚರಿಸಲಾಯಿತು. ಸಂಘದ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಉಪಾಧ್ಯಕ್ಷ ಸುರೇಶ್ ಕುಮಾರ್ ಎಂ.ಎಸ್, ನಿರ್ದೇಶಕರಾದ ಚಂದ್ರೇಗೌಡ, ಸಂತೋಷ್ ಕುಮಾರ್, ಯೋಗೇಶ್ ಹೆಬ್ಬಾಳ್ ಸದಸ್ಯರಾದ ಏಜಾಜ್ ಪಾಷ, ಮಹಮ್ಮದ್ ಹಮ್ಜ ಉಪಸ್ಥಿತರಿದ್ದರು.

ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಸಾಹಿಲ್ ಯಾದವ್ ಆಯ್ಕೆ



ಮೈಸೂರು, ಜ. 20– ಮೈಸೂರಿನ ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ತೃತೀಯ ಬಿಸಿಎ ವಿದ್ಯಾರ್ಥಿ ಸಾಹಿಲ್ ಯಾದವ್ ಹೊಸ ದೆಹಲಿಯಲ್ಲಿ ಜನವರಿ 26ರಂದು ನಡೆಯಲಿರುವ ಗಣರಾಜ್ಯೋತ್ಸವದ ಪಥ ಸಂಚಲನಕ್ಕೆ ಮೈಸೂರಿನ ಒಂದನೇ ಕರ್ನಾಟಕ ಆರ್ಟಿಲರಿ ಬ್ಯಾಟರಿ ವತಿಯಿಂದ ಆಯ್ಕೆಯಾಗಿದ್ದಾರೆ. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್ ಮತ್ತು ಕಾಲೇಜು ಪ್ರಾಂಶುಪಾಲ ಡಾ.ಎಂ. ಶಿವಲಿಂಗೇಗೌಡ ಇತರರು ಅವರನ್ನು ಅಭಿನಂದಿಸಿದ್ದಾರೆ.

ಸರಸ್ವತಿಪುರಂನ ವೃದ್ಧ ನಾಪತ್ತೆ



ಮೈಸೂರು,ಜ.20–ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿಯೋರ್ವ ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಸರಸ್ವತಿಪುರಂನ 24/3, 1ನೇ ಕ್ರಾಸ್, ರಾಗಾ ಬಿಲ್ಡಿಂಗ್, ಸಂಜೀವಿನಿ ಪಾರ್ಕ್ ಸಮೀಪದ ನಿವಾಸಿ ರವೀಂದ್ರನಾಥ್ (70) ಕಾಣೆಯಾದವರು. ಇವರು ಕಳೆದ ವರ್ಷದ ಡಿ.13ರಂದು ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಅವರ ಪುತ್ರ ಕೃಷ್ಣ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಸರಸ್ವತಿಪುರಂ ಠಾಣೆಗೆ ಸಂಪರ್ಕಿಸಲು ಕೋರಲಾಗಿದೆ.

ನಿಧನ



ಕೆ.ಕೆ.ಗಂಗಾಧರನ್

ಮೈಸೂರು, ಜ. 20– 'ಮಲೆಯಾಳಂ ಕತೆಗಳು' ಪುಸ್ತಕಕ್ಕೆ ಕಳೆದ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಕರ್ನಾಟಕದಿಂದ ಭಾಜನರಾಗಿದ್ದ ಕೊಡಗಿನ ಸೋಮವಾರಪೇಟೆ ತಾಲೂಕಿನ ಐಗೂರು ಗ್ರಾಮದ ಕೆ.ಕೆ.ಗಂಗಾಧರನ್ ಭಾನುವಾರ (ಜ.19) ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಮೃತರು ಪತ್ನಿ, ಮಗ ಮತ್ತು ಅಪಾರ ಅಭಿಮಾನಿ ಸ್ನೇಹ ಬಳಗವನ್ನು ಅಗಲಿದ್ದಾರೆ.

ಮಲೆಯಾಳಂನ ಪ್ರಸಿದ್ಧ ಲೇಖಕರುಗಳ ಹತ್ತಾರು ಕಾದಂಬರಿಗಳನ್ನು, ನೂರಾರು ಕತೆಗಳನ್ನು ಕನ್ನಡಕ್ಕೆ ತಂದವರು. ಕನ್ನಡದ ಸುಧಾ, ಮಯೂರ, ತರಂಗ, ರೂಪತಾರ, ಮಂಗಳ ಮುಂತಾದ ಸಾಪ್ತಾಹಿಕ, ಮಾಸಿಕಗಳಲ್ಲಿ ಅವರ ಅನುವಾದಿತ ಕತೆ, ಕಾದಂಬರಿಗಳು ಪ್ರಕಟವಾಗುತ್ತಲೇ ಇದ್ದುವು. ಕನ್ನಡಕ್ಕೆ ಮಲೆಯಾಳಂ ಸಾಹಿತ್ಯದ ಹೆಬ್ಬಾಗಿಲಾಗಿದ್ದ ಅವರ ನಿಧನ ಸಾರಸ್ವತ ಲೋಕಕ್ಕೆ ಅತೀ ದೊಡ್ಡ ನಷ್ಟ. ಅಂಚೆ ಇಲಾಖೆಯ ಮೈಸೂರಿನ ಆರ್.ಎಂ.ಎಸ್.ನಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿ ಕೆಲ ವರ್ಷಗಳ ಹಿಂದೆ ಬೆಂಗಳೂರಿಗೆ ವರ್ಗವಾಗಿ ಅಲ್ಲಿಯೇ ನಿವೃತ್ತಿ ಜೀವನ ನಡೆಸುತ್ತಿದ್ದರು. ಕಳೆದ ಕೆಲ ದಿನಗಳಿಂದ ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದ 76 ವರ್ಷದ ಕೆ.ಕೆ. ಗಂಗಾಧರನ್ ಅತ್ಯಂತ ಸಾತ್ವಿಕ ಜೀವನ ನಡೆಸುತ್ತಿದ್ದರು.

ರಾಜ್ಯಾದ್ಯಂತ ಸರಣಿ ದರೋಡೆ ಪ್ರಕರಣ; ಪೊಲೀಸ್ ವ್ಯವಸ್ಥೆ ಬಗ್ಗೆ ಜನತೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿನುಡಿ

ಬೆಂಗಳೂರು, ಜ.20– ರಾಜ್ಯದ ಕಾನೂನು–ಸುವ್ಯವಸ್ಥೆ ಕುಸಿತದಿಂದ ಪೊಲೀಸ್ ವ್ಯವಸ್ಥೆ ಬಗ್ಗೆ ಜನತೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಇಂದು ಮಾತನಾಡಿದ ಅವರು, ಹೊನ್ನಾವರದಲ್ಲಿ ಗೋವಿನ ರುಂಡ ಕತ್ತರಿಸಿ, ಅಮಾನುಷವಾಗಿ ನಡೆದುಕೊಂಡಿದ್ದಾರೆ. ಅದರ ಜೊತೆಗೇ ಬಿಜಾಪುರದಲ್ಲಿ ಹಾಡಹಗಲಲ್ಲೇ ವ್ಯಕ್ತಿಯನ್ನು ಥಳಿಸಿದ ಘಟನೆ ನಡೆದಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಇತ್ತೀಚೆಗೆ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕತ್ತರಿಸಿದ ಘಟನೆ ನಡೆದಿತ್ತು. ಅದು ರಾಜ್ಯಾದ್ಯಂತ ಮಾತ್ರವಲ್ಲದೆ, ದೇಶಾದ್ಯಂತ ಸುದ್ದಿಯಾಗಿದೆ ಎಂದು ಗಮನ ಸೆಳೆದರು.

ಹಿಂದೂ ವಿರೋಧಿ ಕೃತ್ಯ: ಕಾನೂನು–ಸುವ್ಯವಸ್ಥೆ ಸರಿಯಾಗಿದೆ ಎಂಬಂತೆ ರಾಜ್ಯದ ಗೃಹ ಸಚಿವರು ಬಿಂಬಿಸುತ್ತಿದ್ದಾರೆ. ಸಿದ್ದರಾಮಯ್ಯನವರ ಈ ಕಾಂಗ್ರೆಸ್ ಸರ್ಕಾರವು ಎಲ್ಲೋ ಒಂದು ಕಡೆ ಈ ಥರ ಘಟನೆಗಳು ನಡೆದಾಗ ಮೃದು ಧೋರಣೆ ಅನುಸರಿಸುತ್ತದೆ. ದೇಶದ್ರೋಹಿಗಳು, ಹಿಂದೂ ವಿರೋಧಿ ಶಕ್ತಿಗಳು ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದು, ಇವರಿಗೆ ಭಯವೇ ಇಲ್ಲವಾಗಿದೆ ಎಂದು ಟೀಕಿಸಿದರು. ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳು, ಗೃಹ ಸಚಿವರು ಎಚ್ಚೆತ್ತುಕೊಳ್ಳಬೇಕಿದೆ ಎಂದು ಬಿ.ವೈ.ವಿಜಯೇಂದ್ರ ಆಗ್ರಹಿಸಿದರು. ಒಂದೆಡೆ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ.



ಇನ್ನೊಂದೆಡೆ ರಾಜ್ಯದಲ್ಲಿ ಕೋಮು ಸೌಹಾರ್ದತೆ ಹಾಳಾಗುವ ವಾತಾವರಣ ನಿರ್ಮಾಣವಾಗು ತ್ತಿದೆ. ಇದರ ಕುರಿತು ಗೃಹ ಸಚಿವರು, ಮುಖ್ಯಮಂತ್ರಿಗಳು ಈಗಲಾದರೂ ಎಚ್ಚೆತ್ತುಕೊಳ್ಳಲಿ ಎಂದು ಒತ್ತಾಯಿಸಿದರು.

ಈ ಸರಕಾರ ಬಂದ ಮೇಲೆ ಕಳೆದೊಂದು ವರ್ಷದಲ್ಲಿ ಈ ರೀತಿಯ ಘಟನೆ ನಡೆಯುತ್ತಿದೆ. ಗೋಹತ್ಯೆ ನಿಷೇಧ ಸಂಬಂಧ ರಾಜ್ಯ ಸರಕಾರದ ನಿಲುವು ಬಯಲಾಗಿದೆ. ಮತ್ತೊಂದು ಕಡೆ ಬಿಜಾಪುರದಲ್ಲಿ ಕಾರ್ಮಿಕನನ್ನು ಥಳಿಸಿದ್ದು, ಮನುಷ್ಯತ್ವ ಇರುವವರು ಈ ರೀತಿ ನಡೆದುಕೊಳ್ಳಲು ಸಾಧ್ಯವಿಲ್ಲ ಎಂದು ವಿಶ್ಲೇಷಿಸಿದರು. ದುಷ್ಟರನ್ನು ಒದ್ದು ಒಳಗೆ ಹಾಕಿ ಕಾನೂನು ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು.

ಆಡಳಿತ ಪಕ್ಷದ ಶಾಸಕರ ಪರದಾಟ: ಮುಡಾ ವಿಚಾರದಲ್ಲಿನ ಬೆಳವಣಿಗೆಗಳು, ಕಾಂಗ್ರೆಸ್ ಪಕ್ಷದಲ್ಲಿ ಸಿಎಂ ಆಗುವ ಕುರಿತ ಹಪಾಹಪಿ, ಇವರ ಗುದ್ದಾಟ, ಜಗ್ಗಾಟ ಬಹಿರಂಗವಾಗಿದೆ. ದಿನನಿತ್ಯ ಟಿವಿ, ಪತ್ರಿಕೆಗಳಲ್ಲಿ ಇದನ್ನು ನೋಡುತ್ತಿದ್ದೇವೆ. ಅದನ್ನು ಉಳಿಸಿಕೊಂಡರೆ ಸಾಕಾಗಿದೆ. ಅಭಿವೃದ್ಧಿಗೆ ಅನುದಾನವಿಲ್ಲದೇ ಆಡಳಿತ ಪಕ್ಷದ ಶಾಸಕರೇ ಪರದಾಡುತ್ತಿದ್ದಾರೆ. ಇದರ ಮಧ್ಯೆ ಬಿಜೆಪಿ–ಜೆಡಿಎಸ್‌ನಿಂದ ಶಾಸಕರನ್ನು ಅವರ ಪಕ್ಷಕ್ಕೆ ಕರೆದುಕೊಂಡು ಇವರೇನು ಕಡಿಯಲಿಕ್ಕಿದೆ ಎಂದು ಕೇಳಿದರು. ಪಕ್ಷದ ರಾಜ್ಯಾಧ್ಯಕ್ಷನಾಗಿ ಕೆಲಸ ಮಾಡಲು ಬಂದಿದ್ದೇನೆ. ಕೆಲಸ ಮಾಡುತ್ತಿದ್ದೇನೆ. ಕೆಲಸ ಇಲ್ಲದೇ ಮಾತನಾಡುವುದರ ಕುರಿತು ಹೇಳಿಕೆ ಕೊಡಲು ಹೋಗುವುದಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟರು.

ಇಂದಿನಿಂದ ಶಿಕ್ಷಕರ ಸುಧಾರಣಾ ವಿಚಾರ ಸಂಕಿರಣ

ಮೈಸೂರು,ಜ.20–ಆಹಾರ ಮತ್ತು ವಿಜ್ಞಾನ ಮತ್ತು ಪೌಷ್ಠಿಕಾಂಶದ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ ಜ.21 ಮತ್ತು 22 ರಂದು ಎರಡು ದಿನಗಳ ಶಿಕ್ಷಕರ ಸುಧಾರಣಾ ವಿಚಾರ ಸಂಕೀರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 'ಪ್ರಯೋಜಿತ ಬಯೋಸ್ಟ್ಯಾಟಿಸ್ಟಿಕ್ಸ್ ಮತ್ತು ಎಸ್‌ಪಿಎಸ್‌ಎಸ್ ಬಳಸಿ ಸಂಶೋಧನಾ ವಿಶ್ಲೇಷಣೆ' ಕಾರ್ಯಕ್ರಮಸ ಉದ್ಘಾಟನೆಯನ್ನು ಸೆವಿನಾರ್ ಹಾಲ್, ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶದ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಇಲ್ಲಿ ಬೆಳಗ್ಗೆ 9:30 ಗಂಟೆಗೆ ಆಯೋಜಿಸಲಾಗಿದೆ. ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ. ಆರ್.ಗಂಗಾಧರ್ ಉದ್ಘಾಟಿಸಲಿದ್ದಾರೆ.

ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಎಸ್.ಎಸ್. ಮಾಲಿನಿ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದು, ಆಹಾರ ವಿಜ್ಞಾನ ಮತ್ತು ಪೋಷಣಾ ವಿಭಾಗದ ಅಧ್ಯಕ್ಷೆ ಪ್ರೊ. ಕೋಮಲಾ ಅಧ್ಯಕ್ಷತೆ ವಹಿಸಲಿದ್ದಾರೆ.

ಅಯೋಧ್ಯೆಯ ಬಾಲರಾಮನ ಶಿಲೋದ್ಭವ ಕ್ಷೇತ್ರದಲ್ಲಿ ನಾಳೆ ಪೂಜಾ ಕಾರ್ಯ

ಮೈಸೂರು, ಜ.20(ಬಿಎಲ್‌ಯು)– ಉತ್ತರ ಪ್ರದೇಶದ ಅಯೋಧ್ಯೆಯ ಬಾಲರಾಮನ ಶಿಲೋದ್ಭವ ಕ್ಷೇತ್ರ ಮೈಸೂರಿನ ಹಾರೋಹಳ್ಳಿಯಲ್ಲಿ ಜನವರಿ 22 ರಂದು ಧಾರ್ಮಿಕ ಪೂಜಾ ಕಾರ್ಯ ಆಯೋಜಿಸಲಾಗಿದೆ ಎಂದು ದಸರಾ ಅಂಬಾರಿ ಆನೆ ಅರ್ಚಕ ಪ್ರಹ್ಲಾದ್ ರಾವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸೇರಿದಂತೆ ಹಲವು ಗಣ್ಯರು ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಹೇಳಿದರು.

ಬಾಲರಾಮನ ಪ್ರತಿಷ್ಠಾನೆಯ ವಾರ್ಷಿಕೋತ್ಸವದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಬಾಲರಾಮನ ಶಿಲೋದ್ಭವದ ಸ್ಥಳದಲ್ಲಿ ಮಂದಿರ ನಿರ್ಮಾಣ ಮಾಡಲು ಅಂದು ಸಂಕಲ್ಪ ಮಾಡಲಾಗುವುದು ಎಂದರು. ಹಾರೋ ಹಳ್ಳಿ, ಗುಜ್ಜೇಗೌಡನಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ ಎಂದು ಮಾಹಿತಿ ನೀಡಿದರು.

ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆಯಾಗಿ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಮೈಸೂರಿನ ಅಶೋಕ ರಸ್ತೆಯ ವೀರನಗೆರೆಯ ಶ್ರೀ ವೀರಗಣಪತಿ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ ಆಯೋಜಿಸಲಾಗಿದೆ ಎಂದು ಪ್ರಹ್ಲಾದ್ ರಾವ್ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ರಂಗಸ್ವಾಮಿ, ಜಗದೀಶ್, ಮನೋಹರ್, ಬಿ.ಜಿ.ಕೇಶವ್ ಇದ್ದರು.

ಮೈಸೂರಿನ ಕಿರುರಂಗಮಂದಿರದಲ್ಲಿ ನಾಳೆಯಿಂದ ಮಕ್ಕಳ ನಾಟಕೋತ್ಸವ

ಮೈಸೂರು, ಜ.20(ಬಿಎಲ್‌ಯು)– ಸಂಚಲನ ಮೈಸೂರು ರಂಗ ಸಂಸ್ಥೆ ಜ. 22 ರಿಂದ ರಾಜ್ಯ ಮಟ್ಟದ ಸಂಚಲನ ಮಕ್ಕಳ ನಾಟಕೋತ್ಸವ ಆಯೋಜಿಸಿದೆ ಎಂದು ತಂಡದ ಮುಖ್ಯಸ್ಥ ದೀಪಕ್ ಮೈಸೂರು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿನ್ನುದ್ದೇಶಿಸಿ ಮಾತನಾಡಿದ ಅವರು, ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಅಂದು ಸಂಜೆ 6 ಗಂಟೆಗೆ ನಡೆಯುವ ಮಕ್ಕಳ ನಾಟಕೋತ್ಸವವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಲಿದ್ದು, ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ), ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಸಲಹೆಗಾರ ಬಸವರಾಜ ದೇವನೂರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದು ಹೇಳಿದರು.

ಜನವರಿ 22ರಿಂದ 26ರವರೆಗೆ ನಡೆಯುವ ನಾಟಕೋತ್ಸವದಲ್ಲಿ ಭರತ ನಾಟ್ಯ ಸೇರಿದಂತೆ ಮಕ್ಕಳ ಹಲವು ನಾಟಕಗಳು ಪ್ರದರ್ಶನಗೊಳ್ಳಲಿದೆ. ಜನವರಿ 26 ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರುತ್ತಾರೆ ಎಂದು ದೀಪಕ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಬಿ.ಎಂ. ರಾಮಚಂದ್ರ, ಚಂದ್ರಶೇಖರ ಹೆಗ್ಗೋಠಾರ, ಪರಿಕ್ಷೀತ್ ಉಪಸ್ಥಿತರಿದ್ದರು.

ಸಮುದಾಯ ಸಹಕಾರ ಸಂಘಗಳು ರಾಜಕೀಯ ಶಕ್ತಿಯಿಂದ ಕುಂಠಿತ

ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಅಭಿಮತ



ಮೈಸೂರಿನ ಭಗೀರಥ ಉಪ್ಪಾರ ಸೇವಾ ಸಹಕಾರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ನಡೆಯಿತು.

ಮೈಸೂರು,ಜ.20–ಮೈಸೂರಿನ ಭಗೀರಥ ಉಪ್ಪಾರ ಸೇವಾ ಸಹಕಾರ ಸಂಘದ ವತಿಯಿಂದ ಗೋವರ್ಧನ್ ಹೋಟೆಲ್ ಸಭಾಂಗಣದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ನಡೆಯಿತು.

ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿ, ನಮ್ಮ ಸಮುದಾಯ ರಾಜಕೀಯವೂ ಸೇರಿದಂತೆ ಇನ್ನಿತರ ಕ್ಷೇತ್ರದ ಅಭಿವೃದ್ಧಿಯಲ್ಲಿ ಕುಂಠಿತವಾಗಿದೆ. ಇನ್ನು ಮುಂದಾದರೂ ರಾಜಕೀಯ ಶಕ್ತಿಯನ್ನು ಬಳಸಿಕೊಂಡು ದೇಶದ ಅಭಿವೃದ್ಧಿಯತ್ತ ಸಾಗಲು ನಮ್ಮ ಸಂಘಟನೆಗಳಿಂದ ಸಾಧ್ಯವಾಗುತ್ತದೆ ಎಂದು ತಿಳಿಸಿದರಲ್ಲದೆ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕವಾಗಿ ಮುಂದೆ ಬರುವಂತೆ ಮನವಿ ಮಾಡಿದರು.

ನಾಗರಾಜು, ಮಧುವನಹಳ್ಳಿ ಶಿವಕುಮಾರ್ ಮಾತನಾಡಿದರು. ಇದೇ ವೇಳೆ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಸಾಹಿತಿ ಸಿ.ಚಾಮಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಅಯ್ಯನ ಸರಗೂರು ಮಠದಶ್ರೀ ಮಹಾದೇವಸ್ವಾಮಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಚ್.ಎನ್.ವಿಜಯ್, ಮಾಜಿ ಅಧ್ಯಕ್ಷ ಯೋಗೇಶ್, ಮಾಜಿ ಉಪಮೇಯರ್ ಡಾ.ಜಿ.ರೂಪಾ, ಹಿಂದುಳಿದ ವರ್ಗಗಳ ಅಧ್ಯಕ್ಷ ಮಂಗಲ ಶಿವಕುಮಾರ್, ನಿವೃತ್ತ ಪ್ರಾಂಶುಪಾಲ ನಂಜುಂಡಸ್ವಾಮಿ, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಕವನ ವಾಚನ ಸ್ಪರ್ಧೆ



ಮೈಸೂರು,ಜ.20– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2024–25ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ 'ಡಾ.ಬಿ.ಆರ್.ಅಂಬೇಡ್ಕರ್ ಓದು' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದ ನಿಮಿತ್ತ ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು ಬರಹ ಮತ್ತು ಸಾಧನೆ ಕುರಿತು ಕವನ ವಾಚನ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಮೈಸೂರು ಜಿಲ್ಲೆಯ ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜಿನ ವಿದ್ಯಾರ್ಥಿಗಳು ಈ ಕವನ ವಾಚನ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಆಸಕ್ತ ವಿದ್ಯಾರ್ಥಿಗಳು ತಮ್ಮ ಸ್ವ–ವಿವರ ಹಾಗೂ ಕಾಲೇಜಿನ ಗುರುತಿನ ಚೀಟಿಯೊಂದಿಗೆ ಜ.25 ರೊಳಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಕಚೇರಿಯಲ್ಲಿ ತಮ್ಮ ಹೆಸರು ನೊಂದಾಯಿಸಿಕೊಳ್ಳಬಹುದು.

ಡಾ.ಬಿ.ಆರ್.ಅಂಬೇಡ್ಕರ್‌ರವರ ಬದುಕು, ಬರಹ ಮತ್ತು ಸಾಧನೆ ವಿಷಯ ಬಿಟ್ಟು ಬೇರೆ ವಿಷಯಾಧಾರಿತ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ, ಕವಿತೆಯು ಕನಿಷ್ಠ 60 ರಿಂದ ಗರಿಷ್ಠ 100 ಪದಗಳು ಹೊಂದಿರಬೇಕು. (ಸುಮಾರು 12ರಿಂದ 20 ಸಾಲುಗಳು), ಕವನವು ಸ್ವರಚಿತವಾಗಿರಬೇಕು ಹಾಗೂ ಕನ್ನಡ ಭಾಷೆಯಲ್ಲಿರಬೇಕು, ಕವನ ವಾಚನದಲ್ಲಿ ಭಾಗವಹಿಸಲು ಅಪೇಕ್ಷಿಸುವ ಮೈಸೂರು ಜಿಲ್ಲೆಯ ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿನ ಗುರುತಿನ ಚೀಟಿಯನ್ನು ಲಗತ್ತಿಸತಕ್ಕದ್ದು, ಒಬ್ಬರು ಒಂದು ಕವಿತೆಯನ್ನು ಮಾತ್ರ ವಾಚಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–2513225 ಅನ್ನು ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.01.2025 ಮಂಗಳವಾರ, ಮಳೆ ನಕ್ಷತ್ರ: ಉತ್ತರಾಷಾಢ 11.01.2025 ರಿಂದ 23.01.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಹಿಮ್ಮಡಿ ಮುಳ್ಳು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋ ರೂಮ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಪರಂಪರೆ:** ಆಧ್ಯಾತ್ಮಿಕ ಉಪನ್ಯಾಸಗಳು, ಡಾ.ವೀಣಾ ಬನ್ನಂಜೆ ಅವರಿಂದ ಆಧ್ಯಾತ್ಮಿಕ ಉಪನ್ಯಾಸ, ವಿಷಯ: ಅರಿವಿನ ಗುರು ಅಲ್ಲಮ, ಸ್ಥಳ: ಮೈಸೂರು ಕೆ.ವಾಸುದೇವಾಚಾರ್ಯ ಭವನ (ನಾದಬ್ರಹ್ಮ), ಸಂಜೆ 6ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ:** ಎನ್‌ಎಸ್‌ಎಸ್ ಶಿಬಿರ, ಬೆಳಗ್ಗೆ 11.30ರಿಂದ ಪ್ರೊ.ಕೆ.ಎಂ.ವೀರಯ್ಯ ಅವರಿಂದ ಸಾಮಾಜಿಕ ಸಾಮರಸ್ಯದ ಮಹತ್ವ ಕುರಿತು ಉಪನ್ಯಾಸ; ಪ್ರೊ.ಜಿ.ಎಸ್.ಜಯದೇವ ಅವರಿಂದ ಯುವಕರಿಗೆ ಸ್ವಾಮಿ ವಿವೇಕಾನಂದರ ಸಂದೇಶ; ರಾತ್ರಿ 8ಕ್ಕೆ ಪ್ರೊ.ಕೆ.ಎಂ.ವೀರಯ್ಯ ಅವರಿಂದ ಶಿಬಿರ ಜ್ಯೋತಿ ಕುರಿತು ಉಪನ್ಯಾಸ, ಸ್ಥಳ: ಮೈಸೂರು ವಿವಿ ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿವೇಕಾನಂದರ ಜಯಂತಿ, ಬೆಳಗ್ಗೆ 5.15 ರಿಂದ ವೇದಮಂತ್ರ ಪಠನ, ಸಂಜೆ 5.30ಕ್ಕೆ ಮಂಗಳಾರತಿ, ಭಜನೆ, 7.30ಕ್ಕೆ ವಿಶೇಷ ಪೂಜೆ, 8ಕ್ಕೆ ಶಿವಸಹಸ್ರನಾಮ ಪಾರಾಯಣ, 9ಕ್ಕೆ ಭಜನೆ, 10.30ಕ್ಕೆ ಗ್ರಂಥವಾಚನ, 10.45ಕ್ಕೆ ಆರತಿ, 11ಕ್ಕೆ ಹೋಮ, ಮಧ್ಯಾಹ್ನ 12ಕ್ಕೆ ಪ್ರಸಾದ ವಿತರಣೆ, ಸಂಜೆ 4.30 ರಿಂದ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6 ರಿಂದ 'ಸ್ವಾಮಿ ವಿವೇಕಾನಂದ' ಕನ್ನಡದಲ್ಲಿ ಪ್ರವಚನ, ರಾತ್ರಿ 7 ರಿಂದ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಜೆಎಸ್‌ಎಸ್ ಮಹಾವಿದ್ಯಾಪೀಠ :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಅಲಿ ಯುವರ್ ಜಂಗ್ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಡಿಸಾಬಿಲಿಟೀಸ್ ನಿರ್ದೇಶಕ ಡಾ. ಸುಮನ್ ಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ

■ **ಶ್ರೀ ನಟರಾಜ ಹಿರಿಯ ಪ್ರಾಥಮಿಕ ಶಾಲೆ :** ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಪ್ರೊ. ಡಿ.ಎಸ್. ಗುರು, ಸ್ಥಳ: ಶ್ರೀ ನಟರಾಜ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಪ್ರಜಾಪಿತ ಬ್ರಹ್ಮಾರವರ 56ನೇ ಅವ್ಯಕ್ತ ಪುಣ್ಯಸ್ಮೃತಿ ದಿನದ ಪ್ರಯುಕ್ತ ವಿಶ್ವ ಶಾಂತಿ ದಿನಾಚರಣೆ, ಸಾನ್ನಿಧ್ಯ: ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಮುಖ್ಯ ಅತಿಥಿಗಳು : ಮಂಡ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀಮತಿ ಜಯಶ್ರೀ ಎಸ್. ಶೆಣೈ, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಸಿ.ಕೆ.ರೇಣುಕಾರ್ಯ, ಸ್ಥಳ: ಜ್ಞಾನ ಪ್ರಕಾಶಭವನ, ಯಾದವಗಿರಿ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ–ಪಿ. ಸುರಭಿ, ಎ.ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್. ಗಾಯತ್ರಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ. ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ 'ನಾನು ನನ್ನ ಕಂಪನಿ' ವಿವಿಧ ರೀತಿಯ ಉಪ್ಪಿನಕಾಯಿಗಳನ್ನು ಮನೆಯಲ್ಲಿಯೇ ತಯಾರಿಸುವ ಮೀರಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 12.35 ದೇವರ ನಾಮ–ಅಂಜನಾ. ಡಿ. ಕುಂಬ್ಳೆ, 12.45 ಕನ್ನಡದಲ್ಲಿ ಭಾಷಣ–ಕನ್ನಡದ ಶಬ್ದ ಸಂಪತ್ತು, ಮಾತನಾಡು ತ್ತಾರೆ–ಪ್ರೊ. ಕೃಷ್ಣೇಗೌಡ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಕುರಿತು ಮಾಹಿತಿ–ಪಿ.ಕೆ. ರವಿಕುಮಾರ್ ಅವರಿಂದ, 1.20 ಭಾವಗೀತೆಗಳು – ರಮೇಶ್‌ಚಂದ್ರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಇ. ಗಾಯತ್ರಿ–ವೀಣಾವಾದನ, 4.00 ಕಥಾ ಕಾಲಕ್ಷೇಪ–ಸಂಪೂರ್ಣ ರಾಮಾಯಣ–ಅರಣ್ಯಕಾಂಡ, ಪ್ರಸ್ತುತಿ: ವಿದ್ವಾನ್. ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ರೇಷ್ಮೆ ಕೃಷಿಯಲ್ಲಿ ಮಹಿಳೆಯರ ಪಾತ್ರ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಜಿ.ಎಸ್. ಗೀತಾ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ರಾಜೀವ್ ತಾರಾನಾಥ್ – ಸರೋದ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ನೈವೆಲಿ ಸಂತಾನಗೋಪಾಲನ್ – ಹಾಡುಗಾರಿಕೆ, 10.00 ಚೈತ್ರವನ – ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ: ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಆಹಾರ ನೀಡುವುದಕ್ಕೆ ನಿರ್ಬಂಧ

ರಸ್ತೆಗಳಲ್ಲಿ ನಾಯಿಗಳಿಗೆ ಆಹಾರ ನೀಡುವ ಪರಿಸ್ಥಿತಿ ನಿರ್ಮಾಣ



ಕುಕ್ಕರಹಳ್ಳಿ ಕೆರೆ ಪಕ್ಕದ ರಸ್ತೆಯಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲಾಗುತ್ತಿದೆ.

ಮೈಸೂರು, ಜ.20(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯವು ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಾಯಿ, ಪಕ್ಷಿಗಳು ಹಾಗೂ ಜಲಚರಗಳಿಗೆ ಆಹಾರ ನೀಡುವುದನ್ನು ನಿಷೇಧಿಸಿರುವುದರಿಂದ ಪ್ರಾಣಿಪ್ರಿಯರು ಕೆರೆ ಹೊರಗೆ ರಸ್ತೆಬದಿ ಬೀದಿ ನಾಯಿಗಳಿಗೆ ಆಹಾರ ಸಲ್ಲಿಸುವ ಮೂಲಕ ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

'ಕೆರೆಯ ಪ್ರಾಣಿ, ಪಕ್ಷಿ, ಜಲಚರಗಳಿಗೆ ಆಹಾರ ನೀಡುವುದನ್ನು ನಿರ್ಬಂಧಿಸಲಾಗಿದೆ' ಎಂದು ಕುಕ್ಕರಹಳ್ಳಿ ಕೆರೆ ಪ್ರವೇಶ ದ್ವಾರಗಳಲ್ಲಿ ಸೂಚನಾ ಫಲಕ ಅಳವಡಿಸಿದ್ದು, ಈ ಸಂಬಂಧ ಮಾಜಿ ಕೇಂದ್ರ ಸಚಿವೆ ಮತ್ತು ಪ್ರಾಣಿ ಹಕ್ಕುಗಳ ಕಾರ್ಯಕರ್ತೆ ಮನೇಕಾ ಗಾಂಧಿ ಸಹ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರನ್ನು ಇತ್ತೀಚೆಗಷ್ಟೇ ದೂರವಾಣಿ ಮೂಲಕ ಸಂಪರ್ಕಿಸಿ ಬೀದಿ ನಾಯಿಗಳು, ಪಕ್ಷಿಗಳು, ಜಲಚರಗಳಿಗೆ ಆಹಾರ ನೀಡಲು ಅವಕಾಶ ನೀಡುವಂತೆ ಕೋರಿದ್ದರು.

ವಿಶ್ವವಿದ್ಯಾನಿಲಯವು ಇನ್ನೂ ಈ ಬಗ್ಗೆ ಕ್ರಮ ವಹಿಸದ ಕಾರಣ ಅಸಮಾಧಾನಗೊಂಡ ಪ್ರಾಣಿ, ಪಕ್ಷಿ ಪ್ರಿಯರು, ವಿವಿ ಕುಲಪತಿ, ರಿಜಿಸ್ಟ್ರಾರ್‌ಗೆ ಹಲವು ಪತ್ರ ಬರೆದು ನಿಷೇಧವನ್ನು ರದ್ದುಗೊಳಿಸುವಂತೆ ಒತ್ತಾಯಿಸಿದ್ದರು. ನಾಗರಿಕರು, ಪ್ರಾಣಿ ಹಕ್ಕು ಕಾರ್ಯಕರ್ತರು, ಯೋಗ ವಿದ್ಯಾರ್ಥಿಗಳೂ ಸೇರಿದಂತೆ 100ಕ್ಕೂ ಹೆಚ್ಚು ಮಂದಿ 'ಮೈಸೂರು ಮಿತ್ರ' ಕಚೇರಿಗೂ ಪತ್ರಗಳನ್ನು ಇ–ಮೇಲ್ ಮೂಲಕ ರವಾನಿಸಿದ್ದರು. ಸುಮಾರು 70ಕ್ಕೂ ಹೆಚ್ಚು ಬೀದಿ ನಾಯಿಗಳಿಗೆ ಕುಕ್ಕರಹಳ್ಳಿ ಕೆರೆಯೇ ನೆಲೆಯಾಗಿದ್ದು, ವಿಶಾಲ ಜಲ ಮೂಲವನ್ನು ತಮ್ಮ ಆವಾಸ ಸ್ಥಾನವನ್ನಾಗಿಸಿಕೊಂಡಿವೆ. ವಾಯು ವಿಹಾರಿಗಳ ಸುರಕ್ಷತೆ, ಕೆರೆಯ ಸ್ವಚ್ಛತೆ ದೃಷ್ಟಿಯಿಂದ ಆವರಣದಲ್ಲಿ ಆಹಾರ ನೀಡುವುದಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಕ್ರಮವನ್ನು ಸಮರ್ಥಿಸಿಕೊಂಡಿದ್ದರೆ, ಸಾರ್ವಜನಿಕರು, ಎನ್‌ಜಿಓಗಳು ಈ ಕ್ರಮವನ್ನು ವಿರೋಧಿಸುತ್ತಿವೆ.

ಕಾನೂನು ಉಲ್ಲಂಘನೆ: ಕುಕ್ಕರಹಳ್ಳಿ ಕೆರೆ ಒಳಗೆ ನಾಯಿಗಳು, ಪಕ್ಷಿಗಳು ಹಾಗೂ ಜಲಚರಗಳಿಗೆ ಆಹಾರ ನೀಡುವುದನ್ನು ನಿರ್ಬಂಧಿಸಿರುವುದು ಮುಗ್ಧ ಪ್ರಾಣಿಗಳ ಅಸ್ತಿತ್ವದ ಮೇಲೆ ಗದಾ ಪ್ರಹಾರ ಮಾಡಿದಂತಾಗಿದೆ. ಇದು ಕಾನೂನು ಬಾಹಿರ ಏಕಪಕ್ಷೀಯ ತೀರ್ಮಾನ ಎಂದು ಪ್ರಾಣಿ ಪ್ರಿಯರು ಅಭಿಪ್ರಾಯಪಟ್ಟಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಪೀಪಲ್ಸ್ ಫಾರ್ ಅನಿಮಲ್, ವ್ಯವಸ್ಥಾಪಕ ಟ್ರಸ್ಟಿ ಸವಿತಾ ನಾಗಭೂಷಣ್, ವಿವಿ ಕ್ರಮವು ಪ್ರಾಣಿ ಮೇಲಿನ ಕ್ರೌರ್ಯ ತಡೆ ಕಾಯ್ದೆ, ಪ್ರಾಣಿ ಜನನ ನಿಯಂತ್ರಣ ನಿಯಮಗಳು ಹಾಗೂ ಸುಪ್ರೀಂಕೋರ್ಟ್ ಮಾರ್ಗಸೂಚಿಗಳ ಉಲ್ಲಂಘನೆ ಎಂದು ತಿಳಿಸಿದ್ದಾರೆ. ಪ್ರಾಣಿಗಳು, ಅವುಗಳ ಆವಾಸ ಸ್ಥಾನಗಳ ಹಕ್ಕುಗಳನ್ನು ರಕ್ಷಿಸುವ ವಿವಿಧ ಕಾನೂನುಗಳನ್ನು ಎತ್ತಿ ಹಿಡಿಯುವ ಅಧಿಕೃತ ಜ್ಞಾಪನಾ ಪತ್ರವನ್ನೂ ಕುಲಪತಿಗಳಿಗೆ ಸಲ್ಲಿಸಿದ್ದರೂ, ಈವರೆಗೆ ಕ್ರಮ ವಹಿಸಿಲ್ಲ ಎಂದಿರುವ ಅವರು, ಬೀದಿ ನಾಯಿಗಳನ್ನು ನಿಯಂತ್ರಿಸುವ ಉದ್ದೇಶವಿದ್ದರೆ, ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿಸಬೇಕೇ ಹೊರತು, ಹಸಿವಿನಿಂದಲ್ಲ ಎಂದಿದ್ದಾರೆ.

ಬೆಂಬಲ: ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ. ಶೆಣೈ ಅವರು ಪ್ರತಿಕ್ರಿಯೆ ನೀಡಿದ್ದು, ಕೆಲ ಕಾರ್ಯಕರ್ತರು ಗಂಭೀರ ಸಮಸ್ಯೆ ಮರೆತು ತಮ್ಮ ಅಭಿಪ್ರಾಯಕ್ಕನುಗುಣವಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ದಶಕದ ಹಿಂದೆ ನಾಯಿ ಮುಕ್ತವಾಗಿದ್ದ ಕುಕ್ಕರಹಳ್ಳಿ ಕೆರೆ ಆವರಣ, ಪ್ರಾಣಿ ಹಕ್ಕುಗಳ ಕಾರ್ಯಕರ್ತರು ಅತಿಯಾಗಿ ನೀಡುವ ಆಹಾರದಿಂದಾಗಿ ಈಗ ಅವುಗಳ ಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ಗಮನಿಸಬಹುದಾಗಿದೆ. ಅಲ್ಲದೇ, ಒಂದು ಕಾಲದಲ್ಲಿ ಮುಕ್ತವಾಗಿ ವಿಹರಿಸುತ್ತಿದ್ದ ನಾನಾ ಪಕ್ಷಿಗಳು ಬೇರೆಡೆಗೆ ಸ್ಥಳಾಂತರಗೊಂಡಿವೆ ಎಂದು ಅವರು ತಿಳಿಸಿದರು.

ಪರಿಸರ ರಕ್ಷಣೆ ಸಾಂವಿಧಾನಿಕ ಕರ್ತವ್ಯ. ನಾಯಿಗಳ ಸಂಖ್ಯೆ ಹೆಚ್ಚಾದಲ್ಲಿ ಜೀವ ವೈವಿಧ್ಯತೆ ರಕ್ಷಿಸಲು ಸಾಧ್ಯವಾಗದು. ಕೆರೆ ಆವರಣದಲ್ಲಿ ನಾಯಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ಕ್ರಮ ಸಮಂಜಸವಾಗಿದೆ. ಕೆರೆ ಹೊರ ಭಾಗದಲ್ಲಿ ನಾಯಿಗಳಿಗೆ ಆಹಾರ ನೀಡಲು ಸಾಕಷ್ಟು ಜಾಗವಿದೆ ಎಂದಿರುವ ಭಾಮಿ ವಿ. ಶೆಣೈ, ಈ ಕುರಿತು ಮಾನವ ಮತ್ತು ಪ್ರಾಣಿಗಳ ಹಿತ ಕಾಯುವ ನಿರ್ಧಾರವಾಗಬೇಕಿದೆ ಎಂದು ಹೇಳಿದ್ದಾರೆ.

> "ಕಳೆದ ವರ್ಷ ಎನ್‌ಜಿಓಗಳ ನೆರವಿನೊಂದಿಗೆ ಕುಕ್ಕರಹಳ್ಳಿ ಕೆರೆಯಲ್ಲಿ 52 ನಾಯಿಗಳಿಗೆ ಲಸಿಕೆ ಹಾಕಿದ್ದು, 17 ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ. 60ಕ್ಕೂ ಹೆಚ್ಚು ನಾಯಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಅವುಗಳನ್ನು ಆರೋಗ್ಯವಾಗಿರಿಸಲು ಮತ್ತು ರೋಗ ಹರಡುವುದನ್ನು ತಡೆಯಲು ಆಹಾರ ಅತೀ ಮುಖ್ಯ. ಕೆರೆ ಒಳಗೆ ಆಹಾರ ನೀಡುವುದನ್ನು ನಿಷೇಧಿಸಿರುವುದರಿಂದ ಕಳೆದ 11 ದಿನಗಳಲ್ಲಿ ಹಲವು ನಾಯಿಗಳು, 20 ಮರಿಗಳು ಕಣ್ಮರೆಯಾಗಿವೆ. 1 ನಾಯಿ ಸಾವನ್ನಪ್ಪಿರುವುದು ಕಂಡುಬಂದಿದೆ. 20–30 ನಾಯಿಗಳು ಆಹಾರಕ್ಕಾಗಿ ಹೊರಬರುತ್ತಿವೆ.
> – ತಾರಾ ಮಿತ್ರ, ಪಾವ್ಸ್ ಮತ್ತು ಓನ ಪ್ರಾಣಿ ಹಕ್ಕುಗಳ ಕಾರ್ಯಕರ್ತೆ.

> "ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ರಾಣಿ, ಪಕ್ಷಿ ಹಾಗೂ ಜಲಚರಗಳಿಗೆ ಆಹಾರ ನೀಡುವುದನ್ನು ನಿಷೇಧಿಸಿದ್ದು, ಈಗಲೂ ಯಥಾಸ್ಥಿತಿ ಕಾಪಾಡಿಕೊಂಡಿದ್ದೇವೆ. ಪರಿಸರ ರಕ್ಷಣೆ, ಸ್ವಚ್ಛತೆ ಕಾಪಾಡುವುದು, ವಾಯುವಿಹಾರಿಗಳ ಸುರಕ್ಷತೆ ಕಾಪಾಡಬೇಕೆಂದು ಸಾರ್ವಜನಿಕರು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ನಾವು ಈ ನಿರ್ಧಾರ ಕೈಗೊಂಡಿದ್ದೇವೆ. ನಾಯಿಗಳಿಗೆ ಕೆರೆ ಹೊರ ಭಾಗದಲ್ಲೂ ಆಹಾರ ನೀಡಬಹುದಾದರೂ, ಕೆಲವರು ಈ ಕ್ರಮವನ್ನು ವಿರೋಧಿಸುತ್ತಿದ್ದಾರೆ. ಈ ಸಂಬಂಧ ಸಾಧಕ–ಬಾಧಕಗಳನ್ನು ಕೂಲಂಕುಷವಾಗಿ ಚರ್ಚಿಸಿ ಸೂಕ್ತ ಎನಿಸಿದ ಕ್ರಮ ಕೈಗೊಳ್ಳಲಾಗುವುದು.
> – ಪ್ರೊ.ಎನ್.ಕೆ.ಲೋಕನಾಥ್, ಕುಲಪತಿಗಳು, ಮೈಸೂರು ವಿವಿ.





ಮುಡಾ ನಿವೇಶನ ಹಂಚಿಕೆ ಹಗರಣ

ಇಡಿ ಪತ್ರಿಕಾ ಪ್ರಕಟಣೆ ರಾಜಕೀಯ ಪ್ರೇರಿತ: ಸಿದ್ದರಾಮಯ್ಯ ಸಿಡಿಮಿಡಿ



ಬೆಂಗಳೂರು,ಜ.20(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣ ಕುರಿತು ಜಾರಿ ನಿರ್ದೇಶನಾಲಯದ (ಇಡಿ) ಪತ್ರಿಕಾ ಪ್ರಕಟಣೆ ರಾಜಕೀಯ ಪ್ರೇರಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣ ಸಂಬಂಧ ತನಿಖೆ ನಡೆಸುತ್ತಿರುವ ಇಡಿ, ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಪತ್ರಿಕಾ ಹೇಳಿಕೆ ನೀಡಿರುವುದಕ್ಕೂ, ನನಗೂ ಸಂಬಂಧವಿಲ್ಲ ಎಂದರು.

ಬಿಜೆಪಿಯವರ ಒತ್ತಡಕ್ಕೆ ಮಣಿದು ಇ.ಡಿ., ತನಗೆ ಸಂಬಂಧವಿಲ್ಲದ್ದನ್ನು ತನಿಖೆ ನಡೆಸಿ, ಪತ್ರಿಕಾ ಹೇಳಿಕೆಗಳನ್ನು ನೀಡಿ, ಜನರ ದಾರಿ ತಪ್ಪಿಸುತ್ತಿದೆ. ರಾಜಕೀಯವಾಗಿ ನೇರವಾಗಿ ಎದುರಿಸಲಾಗದ ಬಿಜೆಪಿ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ನಮ್ಮನ್ನು ಕಟ್ಟಿಹಾಕುವ ಕೆಲಸಕ್ಕೆ ಮುಂದಾಗಿದೆ.

ಮುಡಾ 50:50ರ ಅನುಪಾತದಲ್ಲಿ ಬಿಡಿ ನಿವೇಶನ ಹಂಚಿರುವುದಕ್ಕೂ ನನಗೂ ಏನು ಸಂಬಂಧ, ಅಲ್ಲಿ ಯಾವುದೇ ಹಣ ಕಾಸಿನ ಅವ್ಯವಹಾರ ನಡೆದಿಲ್ಲ. ಬೇನಾಮಿ ಹೆಸರಿನಲ್ಲಿ ನಿವೇಶನಗಳ ಹಂಚಿಕೆ ಆಗಿದೆ ಎಂದು ಇ.ಡಿ. ತನಿಖೆ ನಡೆಸಿ, ಇಂತಹ ಹೇಳಿಕೆಗಳನ್ನು ಬಿಡುಗಡೆ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾಲಗಾರರಿಗೆ ಕಿರುಕುಳಕ್ಕೆ ಕ್ರಮ: ಮೈಸೂರು, ಚಾಮರಾಜನಗರ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಸಾಲ ನೀಡಿ, ಸಾಲ ಪಡೆದವರಿಗೆ ಕಿರುಕುಳ ನೀಡಿದ್ದರೆ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಪೋಲಿಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬೆಳಗಾವಿಯಲ್ಲಿ ನಡೆಯುತ್ತಿರುವ ಗಾಂಧಿ ಭಾರತ ಸಮಾವೇಶಕ್ಕೆ ಹಣ ದುರುಪಯೋಗ ಆಗಿದೆ ಎಂಬುದನ್ನು ಅಲ್ಲಗಳೆದ ಮುಖ್ಯಮಂತ್ರಿ ಅವರು, ಗಾಂಧಿ ನೇತೃತ್ವದ ಬೆಳಗಾವಿ ಸಮಾವೇಶಕ್ಕೆ 100 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಸರ್ಕಾರವೇ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಸರ್ಕಾರದ ಕಾರ್ಯಕ್ರಮ ಎಂದ ಮೇಲೆ, ಖರ್ಚು–ವೆಚ್ಚಗಳನ್ನು ಬೇರೆಯವರು ಮಾಡಲು ಸಾಧ್ಯವೇ, ಸರ್ಕಾರವೇ ಮಾಡ ಬೇಕು. ಇದರಲ್ಲಿ ಹಣ ದುರುಪಯೋಗ ಆಗಿದೆ ಎಂಬುದು ಸುಳ್ಳು. ವಿಜಯಪುರದಲ್ಲಿ ಕಾರ್ಮಿಕರ ಮೇಲೆ ಹಲ್ಲೆ ಘಟನೆಯ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಮಹಾಬೋಧಿ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಗಳಿಗೆ ಹಣ್ಣು ಹಂಪಲು, ದಿನಸಿ ಸಾಮಗ್ರಿಗಳನ್ನು ವಿತರಿಸಿ ಸ್ವಾಮಿ ವಿವೇಕಾನಂದ ಜಯಂತಿ ಆಚರಿಸಲಾಯಿತು.

ಕನ್ನಡ ಮೀಡಿಯಂ ಹುಡುಗನ ಅದ್ಭುತ ಸಾಧನೆ: ಕಲಬುರಗಿ ಕುವರ ಸಿಬಿಐ ಡಿಐಜಿ



ಕಲಬುರಗಿ: ನಕಾರಾತ್ಮಕ ಸುದ್ದಿಗಳಿಂದಲೇ ಗುರುತಿಸಿಕೊಳ್ಳುತ್ತಿದ್ದ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿಗೆ ಸಿಹಿ ಸುದ್ದಿಯೊಂದು ಸಿಕ್ಕಿದ್ದು, ರಾಷ್ಟ್ರದ ಭೂಪಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ.

ಐಪಿಎಸ್ 2011ನೇ ಬ್ಯಾಚ್ ಅಧಿಕಾರಿ ಮಂಜುನಾಥ ಸಿಂಗೆ ಅವರು ಸಿಬಿಐ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಗೇರುವ ಮೂಲಕ ದೇಶದ ಉದ್ದಗಲಕ್ಕೂ ಕಲಬುರಗಿ ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಿದ್ದಾರೆ. ಇದೇ ಜ.13ರಂದು ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ ಸತ್ಯಂ ಶ್ರೀವಾಸ್ತವ ಈ ಕುರಿತಾಗಿ ಆದೇಶ ಹೊರಡಿಸಿದ್ದು, ಸಿಂಗೆ ಅವರು 2028ರ ಫೆ.28ರ ವರೆಗೆ (5 ವರ್ಷ) ಸಿಬಿಐ ಡಿಐಜಿ ಹುದ್ದೆಯನ್ನು ನಿಭಾಯಿಸಲಿದ್ದಾರೆ.

ಹಳ್ಳಿಯಿಂದ ದಿಲ್ಲಿವರೆಗಿನ ಪಯಣ ಹೇಗಿತ್ತು: ಅಫಜಲಪುರ ತಾಲೂಕಿನ ಗೌರ್(ಬಿ) ಗ್ರಾಮದ ಮಂಜುನಾಥ ಅವರು ನಿವೃತ್ತ ಹೆಡ್ ಕಾನ್ಸ್‌ಟೇಬಲ್ ಹುಚ್ಚಪ್ಪ ಸಿಂಗೆ ಅವರ ಏಕೈಕ ಪುತ್ರ. 3ನೇ ತರಗತಿವರೆಗೆ ಹುಟ್ಟೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಕಲಿತು, ಅಪ್ಪನ ವರ್ಗಾವಣೆಗೆ ಅನುಗುಣವಾಗಿ ಚಿತ್ತಾಪುರದ ಶಿಶು ವಿಹಾರ ಶಾಲೆಯಲ್ಲಿ 4ರಿಂದ 7ನೇ ತರಗತಿ ಮುಗಿಸಿದ್ದಾರೆ. ಇದಾದ ಬಳಿಕ ಯಾದಗಿರಿಯ ನ್ಯೂ ಕನ್ನಡ ಸರ್ಕಾರಿ ಶಾಲೆಯಲ್ಲಿ ಹೈಸ್ಕೂಲು ಮುಗಿಸಿದ್ದಲ್ಲದೆ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಟಾಪರ್ ಆಗಿ ಹೊರಹೊಮ್ಮಿದ್ದರು ಎಂದು ಮಂಜುನಾಥ ಅವರ ಚಿಕ್ಕಪ್ಪ ಮಲ್ಲಿಕಾರ್ಜುನ ಸಿಂಗೆ ಸಂತಸದ ಕ್ಷಣಗಳನ್ನು ಹಂಚಿಕೊಂಡರು.

ಧಾರವಾಡದ ಕರ್ನಾಟಕ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿಯುಸಿ ಮುಗಿಸಿದರು. ಬಳಿಕ ಸಿಇಟಿ ಬರೆದು ಪ್ರತಿಷ್ಠಿತ ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಂಜಿನಿಯರಿಂಗ್ ಪದವಿ ಮುಗಿಸೋದಕ್ಕೆ ಆರೇ ತಿಂಗಳು ಬಾಕಿ ಇತ್ತು. ಆಗ ಅಮೆರಿಕ ಮೂಲದ ಪ್ರತಿಷ್ಠಿತ ಐಬಿಎಂ ಕಂಪನಿಗೆ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಮಂಜುನಾಥ ಸಿಂಗೆ ಅವರು ಆಯ್ಕೆಯಾದರು. ಪಿಯುಸಿ ಹಂತದಿಂದಲೇ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗಳಿಗೆ ಸಿದ್ಧತೆ ಆರಂಭಿಸಿದ್ದ ಇವರು, ಐಬಿಎಂ ಸೇರ್ಪಡೆಗೊಂಡ ಬೆನ್ನಲ್ಲೇ ಯುಪಿಎಸ್ಸಿ ಪರೀಕ್ಷೆ ಎದುರಿಸಲು ಅಗತ್ಯವಿರುವ ಅಧ್ಯಯನವನ್ನು ಮತ್ತಷ್ಟು ಪ್ರಖರಗೊಳಿಸಿದ್ದರು. 2009–10ರಲ್ಲಿ ಐಆರ್‌ಎಸ್ ಉತ್ತೀರ್ಣರಾಗಿ ಗೋವಾದ ಆದಾಯ ತೆರಿಗೆ ಇಲಾಖೆಯಲ್ಲಿ 1 ವರ್ಷ ಸೇವೆ ಸಲ್ಲಿಸುತ್ತಲೇ ಮತ್ತೊಮ್ಮೆ ಯುಪಿಎಸ್ಸಿ ಪರೀಕ್ಷೆಗೆ ಹಾಜರಾಗಿ 2010–11ರಲ್ಲಿ ಐಪಿಎಸ್ ಗುರಿ ಮುಟ್ಟುವಲ್ಲಿ ಯಶಸ್ವಿಯಾದರು.

ಆರಂಭಿಕ ತರಬೇತಿಯ ಬಳಿಕ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಎಎಸ್ಪಿ ಆಗಿ 1 ವರ್ಷ ಸೇವೆ ಸಲ್ಲಿಸಿದರು. ಇದಾದ ನಂತರ ಗಡಚಿರೋಲಿ ವಿಭಾಗದ ನಕ್ಸಲ್ ನಿಗ್ರಹ ಪಡೆಯಲ್ಲೂ ಎಎಸ್ಪಿ ಆಗಿ 2 ವರ್ಷ ಸೇವೆ ಸಲ್ಲಿಸಿದರು. ಆಮೇಲೆ ಪಾಲ್ಘಾರ್ ಎಸ್ಪಿಯಾಗಿ, ನಂತರ ಮುಂಬೈ ವಸಾಯಿ ಪ್ರಾಂತ್ಯದ ಡಿಸಿಪಿ, ನಂತರ ಬಾಂದ್ರಾ ಡಿಸಿಪಿಯಾಗಿ ಕಾರ್ಯನಿರ್ವಹಿಸಿದರು. ಈ ಬೆನ್ನಲ್ಲೇ ಕೋವಿಡ್ ಅವಧಿ ಮುಗಿಯುತ್ತಿದ್ದಂತೆಯೇ ಸಿಬಿಐ ಅಧಿಕಾರಿಯಾಗಿ ಸೇವೆ ಆರಂಭಿಸಿದ ಕೂಡಲೇ ಮಣಿಪುರ ಗಲಭೆಗಳ ಕುರಿತು ತನಿಖೆ ಕೈಗೊಳ್ಳುವ ಅಧಿಕಾರಿಗಳ ತಂಡದಲ್ಲಿ ಕಾರ್ಯನಿರ್ವಹಿಸಿ ಸೈ ಎನಿಸಿಕೊಂಡರು.

ಕಳೆದ ನಾಲ್ಕು ತಿಂಗಳ ಹಿಂದಷ್ಟೇ ಸಿಬಿಐ ಎಸ್ಪಿಯಾಗಿ ಬೆಂಗಳೂರಿನಲ್ಲಿ ಅಧಿಕಾರ ವಹಿಸಿಕೊಂಡಿದ್ದ ಮಂಜುನಾಥ ಸಿಂಗೆ ಅವರಿಗೆ ಇದೀಗ ಸಿಬಿಐ ಡಿಐಜಿ ಹುದ್ದೆ ಒಲಿದು ಬಂದಿದೆ. ಇದು ತವರೂರು ಅಫಜಲಪುರ ಹಾಗೂ ತವರು ಜಿಲ್ಲೆ ಕಲಬುರಗಿ ಸೇರಿದಂತೆ ಇಡೀ ರಾಜ್ಯದ ಯುವಪೀಳಿಗೆಗೆ ಹೆಮ್ಮೆಯಾಗಿದೆ. ಮಣಿಪುರ ಗಲಭೆ, ನೀಟ್ ರಗಳೆ ತನಿಖೆ: ಕೇಂದ್ರೀಯ ತನಿಖಾ ದಳ (ಸಿಬಿಐ) ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ, ಮಣಿಪುರ ಗಲಭೆಗಳ ಕುರಿತು ತನಿಖೆ ಕೈಗೊಳ್ಳುವ ಜವಾಬ್ದಾರಿ ಐಪಿಎಸ್ ಅಧಿಕಾರಿ ಮಂಜುನಾಥ ಸಿಂಗೆ ಅವರ ಹೆಗಲಿಗೇರಿತ್ತು. ಈ ಕುರಿತು ಸಮಗ್ರ ತನಿಖೆ ನಡೆಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕಿದ್ದ ತಂಡದ ಭಾಗವಾಗಿದ್ದ ಸಿಂಗೆ ಅವರಿಗೆ ನೀಟ್ ಪರೀಕ್ಷಾ ರಾದ್ಧಾಂತದ ತನಿಖೆಯ ಹೊಣೆಯನ್ನೂ ಕೇಂದ್ರ ಸರ್ಕಾರ ವಹಿಸಿತ್ತು. ಈ ಎರಡೂ ಜವಾಬ್ದಾರಿಗಳನ್ನು ಅತ್ಯಂತ ಚಾಣಾಕ್ಷತೆಯಿಂದ ನಿಭಾಯಿಸಿದ ಅವರಿಗೆ ಈಗ ಸಿಬಿಐ ಡಿಐಜಿ ಹುದ್ದೆ ಅರಸಿ ಬಂದಿದೆ.

ಕಾರ್ಮಿಕರಿಗೆ ಥಳಿತ ಪ್ರಕರಣ: ಮಾಲೀಕ ಸೇರಿ ಮೂವರು ಅರೆಸ್ಟ್

ವಿಜಯಪುರ: ಜಿಲ್ಲೆಯಲ್ಲಿ ಕಾರ್ಮಿಕರ ಮೇಲೆ ನಡೆದಿದ್ದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಜಿಲ್ಲೆಯ ಎಪಿಎಂಸಿ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರದ ಗಾಂಧಿನಗರ ಏರಿಯಾದಲ್ಲಿರುವ ಇಟ್ಟಂಗಿ ಭಟ್ಟಿಯಲ್ಲಿ ಕಾರ್ಮಿಕರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಖೇಮು ರಾಠೋಡ ಹಾಗೂ ಆತನ ಇಬ್ಬರು ಸಹಚರರನ್ನು ಬಂಧಿಸಲಾಗಿದೆ.

ಈ ಕುರಿತು ವಿಜಯಪುರ ಎಸ್‌ಪಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಲೀಕ ಸೇರಿದಂತೆ ಮೂವರನ್ನು ಬಂಧಿಸಲಾಗಿದ್ದು, ಉಳಿದವರಿಗಾಗಿ ಹುಡುಕಾಟ ನಡೆಸಿದ್ದೇವೆ. ಆದಷ್ಟು ಬೇಗ ಅವರನ್ನು ಬಂಧಿಸುತ್ತೇವೆ ಎಂದು ಸ್ಪಷ್ಟನೆ ನೀಡಿದ್ದಾರೆ. ಸದ್ಯ ಬಿಎನ್‌ಎಸ್ ಸೆಕ್ಷನ್ 109ರ ಅಡಿಯಲ್ಲಿ (ಕೊಲೆಗೆ ಯತ್ನ) ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಏನು: ಕೆಲಸಕ್ಕೆ ಬರುವುದಿಲ್ಲ ಎಂದ ಕಾರ್ಮಿಕರಿಗೆ ಹಿಗ್ಗಾಮುಗ್ಗಾ ಥಳಿಸಿದ ಘಟನೆ ವಿಜಯಪುರದ ಗಾಂಧಿನಗರ ಏರಿಯಾದಲ್ಲಿರುವ ಇಟ್ಟಂಗಿ ಭಟ್ಟಿಯಲ್ಲಿ ನಡೆದಿತ್ತು.

ಬಾಗಲಕೋಟೆ ಜಿಲ್ಲೆಯ ಚಿಕ್ಕಲಗಿ ಗ್ರಾಮದ ನಿವಾಸಿಗಳಾದ ಸದಾಶಿವ ಮಾದರ, ಸದಾಶಿವ ಬಬಲಾದಿ, ಉಮೇಶ ಮಾದರ ಎಂಬ ಕಾರ್ಮಿಕರ ಮೇಲೆ ಖೇಮು ರಾಠೋಡ ಹಾಗೂ ಸಂಬಂಧಿಕರು ಮನಬಂದಂತೆ ಹಲ್ಲೆ ನಡೆಸಿದ್ದರು. ಸದ್ಯ ಕಾರ್ಮಿಕರು ವಿಜಯಪುರ ಜಿಲ್ಲಾಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಾಲೀಕ ಪ್ರತಿದಿನ ಕಾರ್ಮಿಕರಿಗೆ 600 ರೂ. ಕೂಲಿ ನೀಡಲಾಗುತ್ತಿತ್ತು. ಕಳೆದ ಸಂಕ್ರಮಣದಂದು ಮನೆಗೆ ತೆರಳಿದ್ದ ಕಾರ್ಮಿಕರು ಮರಳಿ 16 ರಂದು ಇಟ್ಟಿಗೆ ಭಟ್ಟಿಗೆ ಬಂದಿದ್ದರು. ಬಂದ ಕಾರ್ಮಿಕರು ತಮ್ಮ ಸಾಮಾನುಗಳನ್ನು ಕೊಂಡೊಯ್ಯಲು ಮುಂದಾಗುತ್ತಿದ್ದರು.

ಈ ವಿಚಾರ ತಿಳಿದ ಮಾಲೀಕ ಬೇರೆ ಕಡೆ ಕೆಲಸಕ್ಕೆ ಹೋಗುತ್ತಿರುವುದು ಯಾಕೆ ಎಂದು ಹೇಳಿ ತನ್ನ ಜನರನ್ನು ಕರೆಸಿ ಹಲ್ಲೆ ಮಾಡಿಸಿದ್ದ. ಮೂರು ದಿನ ಕೂಡಿ ಹಾಕಿ ಪೈಪ್‌ನಿಂದ ಬೆನ್ನು, ಕಾಲು, ಸೊಂಟದ ಮೇಲೆ ಮನಬಂದಂತೆ ಥಳಿಸಿದ್ದರು.

ಇಬ್ಬರು ನಾಪತ್ತೆ

ಮೈಸೂರು, ಜ. 20– ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಬ್ಬರು ನಾಪತ್ತೆಯಾಗಿರುವ ಬಗ್ಗೆ ತಡವಾಗಿ ವರದಿಯಾಗಿದೆ. ಈ ಠಾಣಾ ವ್ಯಾಪ್ತಿಯ ಕೆ.ಸಿ. ರಾಜು(54) ಎಂಬುವರು 2022ರ ಡಿ. 15ರಂದು ಬೆಳಗ್ಗೆ ಮನೆಯಿಂದ ಹೊರ ಹೋದವರು ಈವರೆವಿಗೂ ವಾಪಸ್ಸಾಗಿಲ್ಲ.

ನಾಗರಾಜು(70) ಎಂಬುವರು 2023ರ ಅ. 22ರಂದು ಬೆಳಗ್ಗೆ ವಾಕಿಂಗ್ ಹೋದವರು ಈವರೆಗೂ ಹಿಂತಿರುಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.



ಕೆ.ಸಿ. ರಾಜು




ನಾಗರಾಜು

ಇವರ ಬಗ್ಗೆ ಮಾಹಿತಿ ಇರುವವರು ನಜರ್‌ಬಾದ್ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2418308 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

'ಟಾಕ್ಸಿಕ್' ಚಿತ್ರೀಕರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್: ಈಶ್ವರ್ ಖಂಡ್ರೆ





ಬೆಂಗಳೂರು: ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ ಚಲನಚಿತ್ರ 'ಟಾಕ್ಸಿಕ್' ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಸೋಮವಾರ ಹೇಳಿದ್ದಾರೆ.

ನೋಟಿಸ್‌ಗೆ ಅಧಿಕಾರಿಗಳು ನೀಡುವ ಉತ್ತರಗಳನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಹಿಂದೂಸ್ತಾನ್ ಮೆಷಿನ್ ಟೂಲ್ಸ್ (ಎಚ್‌ಎಂಟಿ) ಸ್ವಾಧೀನದಲ್ಲಿರುವ ಅರಣ್ಯ ಭೂಮಿ, ಪ್ರಸ್ತುತ ಅರಣ್ಯ ಸ್ಥಾನ ಮಾನವನ್ನು ಕಳೆದುಕೊಂಡಿದೆ ಎಂದು 2020ರಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಲಾದ ಇಂಟರ್ಲೋಕ್ಯುಟರಿ ಅರ್ಜಿಯಲ್ಲಿ(ಐಎ) ಅಧಿಕಾರಿಗಳು(ತಪ್ಪಾಗಿ) ಮಾಹಿತಿ ನೀಡಿದ್ದಾರೆ ಎಂದು ಸಚಿವರು ಹೇಳಿದ್ದಾರೆ.

ಸಂಪುಟದ ಅನುಮತಿಯನ್ನು ಪಡೆಯದೆ ಅಕ್ರಮವಾಗಿ ಡಿನೋಟಿಫಿಕೇಶನ್ ಅನುಮೋದನೆ ಕೋರಲಾಗಿದೆ. ಈ IA ಅನ್ನು ಹಿಂಪಡೆಯಲು ಈಗಾಗಲೇ ಸೂಚಿಸಲಾಗಿದೆ. ಕಳೆದ ಕ್ಯಾಬಿನೆಟ್ ಸಭೆಯಲ್ಲಿ, IA ಅನ್ನು ಹಿಂಪಡೆಯಲು ಪೋಸ್ಟ್ ಫ್ಯಾಕ್ಟೋ ಅನುಮೋದನೆ ನೀಡಿದೆ ಎಂದು ಸಚಿವರು ತಿಳಿಸಿದರು.

ಬೆಂಗಳೂರಿನ ಪೀಣ್ಯ ಪ್ಲಾಂಟೇಶನ್ 1 ಮತ್ತು ಪ್ಲಾಂಟೇಶನ್ 2 ರಲ್ಲಿರುವ ಮೀಸಲು ಅರಣ್ಯದಲ್ಲಿ ಚಿತ್ರೀಕರಣಕ್ಕಾಗಿ ಮರಗಳನ್ನು ಕಡಿದ ಆರೋಪದ ಮೇಲೆ 'ಟಾಕ್ಸಿಕ್' ಚಿತ್ರತಂಡದ ವಿರುದ್ಧ ಕೇಸ್ ದಾಖಲಿಸಲಾಗಿದೆ.

ಕೆನರಾ ಬ್ಯಾಂಕ್, HMT ಯಿಂದ ಅರಣ್ಯ ಭೂಮಿಯನ್ನು ಖರೀದಿಸಿದ್ದು, ಆ ಬ್ಯಾಂಕ್‌ನಿಂದ ಚಿತ್ರತಂಡಕ್ಕೆ ಗುತ್ತಿಗೆ ನೀಡಲಾಗಿದೆ ಎಂದು ಖಂಡ್ರೆ ಸೋಮವಾರ ವಿಧಾನ ಸೌಧದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ನಷ್ಟದ ಕಾರಣ ಸ್ಥಗಿತಗೊಂಡಿದ್ದ HMTಯ 160 ಎಕರೆ ಭೂಮಿಯನ್ನು ಖಾಸಗಿ ಸಂಸ್ಥೆಗಳು ಸೇರಿದಂತೆ ವಿವಿಧ ಸಂಸ್ಥೆಗಳಿಗೆ 313 ಕೋಟಿ ರೂ.ಗಳಿಗೆ ಮಾರಾಟ ಮಾಡಿದೆ ಎಂದು ಖಂಡ್ರೆ ಹೇಳಿದರು.

ಆದಾಗ್ಯೂ, ಆ ಸಮಯದಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ, ಭೂಮಿಯ ಮೌಲ್ಯವನ್ನು 14,300 ಕೋಟಿ ರೂ. ಎಂದು ಹೇಳಲಾಗಿತ್ತು. ಆದರೆ ಇದು ಬೆಂಗಳೂರು ನಗರಕ್ಕೆ ಅಗತ್ಯವಾದ ಉಸಿರಾಟದ ಸ್ಥಳವಾಗಿದೆ. ಇದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಸಚಿವರು ಹೇಳಿದರು.

ಈ ಭೂಮಿಯನ್ನು ಮರಳಿ ಪಡೆಯಲಾಗುವುದು ಮತ್ತು ಕಬ್ಬನ್ ಪಾರ್ಕ್ ಅಥವಾ ಲಾಲ್‌ಬಾಗ್‌ನಂತೆಯೇ ಉದ್ಯಾನವನವನ್ನು ಅಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಸಚಿವರು ತಿಳಿಸಿದರು.

ಮತಾಂಧ ಶಕ್ತಿಗಳು ಹಿಂದೂಗಳಿಗೆ ಸವಾಲೊಡ್ಡುತ್ತಿವೆ; ವಿಪಕ್ಷ ನಾಯಕ ಆರ್. ಅಶೋಕ ಪ್ರತಿಭಟನೆ ಎಚ್ಚರಿಕೆ



ಬೆಂಗಳೂರು: ರಾಜ್ಯದಲ್ಲಿ ಹಿಂದೂ ಭಾವನೆಗಳನ್ನು ಕೆರಳಿಸಲು ಮತ್ತು ಘಾಸಿಗೊಳಿಸುವ ಉದ್ದೇಶದಿಂದ ಮತಾಂಧ ಶಕ್ತಿಗಳು ಗೋವುಗಳ ಮೇಲೆ ದಾಳಿ ನಡೆಸುತ್ತಿವೆ ಎಂದು ಬಿಜೆಪಿ ಸೋಮವಾರ ಆರೋಪಿಸಿದೆ.

ಕರ್ನಾಟಕ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಈ ಹೇಯ ಕೃತ್ಯಗಳಿಗೆ ಕಡಿವಾಣ ಹಾಕಬೇಕು. ಇಲ್ಲವಾದಲ್ಲಿ ರಾಜ್ಯದಾದ್ಯಂತ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ ಹೇಳಿದ್ದಾರೆ.

ಚಾಮರಾಜಪೇಟೆಯಲ್ಲಿ ಸಂಕ್ರಾಂತಿ ಹಬ್ಬದ ವೇಳೆ ಮೂರು ಹಸುಗಳ ಕೆಚ್ಚಲು ಕತ್ತರಿಸಿದ ಆಘಾತಕಾರಿ ಅಮಾನವೀಯ ಘಟನೆ ಮಾಸುವ ಮುನ್ನವೇ ಮತ್ತೊಂದು ಹೇಯ ಕೃತ್ಯ ಬೆಳಕಿಗೆ ಬಂದಿದೆ. ಕಾರವಾರದ ಹೊನ್ನಾವರ ತಾಲ್ಲೂಕಿನ ಸಾಲಕೋಡ ಗ್ರಾಮದಲ್ಲಿ ದುಷ್ಕರ್ಮಿಗಳು ಮತ್ತೊಮ್ಮೆ ಗರ್ಭಿಣಿ ಹಸುವನ್ನು ಕೊಂದಿದ್ದು, ಕರುವನ್ನು ಹೊರತೆಗೆದು ಬಿಸಾಡಿ, ಮಾಂಸವನ್ನು ಕೊಂಡೊಯ್ದಿರುವ ಘಟನೆ ವರದಿಯಾಗಿದೆ. ಗರ್ಭಿಣಿ ಹಸು ಮೇಯಲು ಹೋಗಿದ್ದಾಗ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ.

'ಗೌರವಾನ್ವಿತ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ಗೋವುಗಳ ಮೇಲೆ ಪದೇ ಪದೆ ನಡೆಯುತ್ತಿರುವ ದಾಳಿಗಳು ದೊಡ್ಡ ಪಿತೂರಿಯನ್ನು ಸೂಚಿಸುತ್ತಿವೆ. ಇದು ಮತಾಂಧ ಮತ್ತು ಮೂಲಭೂತವಾದಿ ಶಕ್ತಿಗಳನ್ನು ಒಳಗೊಂಡಿರುವ ಪ್ರಮುಖ ಜಿಹಾದಿ ಸಂಚು ಎಂದು ತೋರುತ್ತದೆ' ಎಂದು ಅಶೋಕ ಒತ್ತಿಹೇಳಿದರು. ಮೂರು ಹಸುಗಳ ಕೆಚ್ಚಲು ಕೊಯ್ದ ಘಟನೆ ಬೆಂಗಳೂರಿನಲ್ಲಿ ಕೋಮು ಉದ್ವಿಗ್ನತೆಯನ್ನು ಸೃಷ್ಟಿಸಿತ್ತು.

ಎಐಸಿಸಿ ಅಧ್ಯಕ್ಷರಾಗಿ ಮಹಾತ್ಮ ಗಾಂಧಿ ಅಧಿಕಾರ ಸ್ವೀಕರಿಸಿ 100 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಬೆಳಗಾವಿಯಲ್ಲಿ ಶತಮಾನೋತ್ಸವ ಆಚರಣೆಯನ್ನು ಆಯೋಜಿಸಿರುವ ಕುರಿತು ಪ್ರತಿಕ್ರಿಯಿಸಿದ ಅಶೋಕ, ಮಹಾತ್ಮ ಗಾಂಧಿಯವರ ಆದರ್ಶಗಳನ್ನು ಪಾಲಿಸುವುದೆಂದರೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಲೂಟಿ ಮಾಡುವುದೇ, ಇದರ ಅರ್ಥ ಹಿಂದುಳಿದವರ ಕಲ್ಯಾಣ ಮಾಡುವುದಕ್ಕಾಗಿಯೇ ಅಥವಾ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ರಹಿತರಿಗೆ ವಸತಿ ಗೃಹ ನಿರ್ಮಿಸಲು ಉದ್ದೇಶಿಸಲಾಗಿದೆಯೇ ಎಂದು ಪ್ರಶ್ನಿಸಿದರು.

'ಗಾಂಧಿಯವರ ತತ್ವಗಳನ್ನು ಅಳವಡಿಸಿಕೊಳ್ಳುವುದು ಎಂದರೆ 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗುವ ದೇಶವಿರೋಧಿ ಅಂಶಗಳನ್ನು ಸಮರ್ಥಿಸಲು ಗಾಂಧಿ ಪಡೆದುಕೊಂಡ ಸ್ವಾತಂತ್ರ್ಯವನ್ನು ಬಳಸುವುದೇ ಅಥವಾ ಪವಿತ್ರವಾದ ಗೋವನ್ನು ಕೊಂದಾಗ ಮೌನವಾಗಿರುವುದು ಇದರ ಅರ್ಥವೇ? ಎಂದು ವಾಗ್ದಾಳಿ ನಡೆಸಿದರು.

ಅಮೆರಿಕದ ನೂತನ ಅಧ್ಯಕ್ಷ ಟ್ರಂಪ್‌ಗೆ ಪುಟಿನ್ ಅಭಿನಂದನೆ



ವಾಷಿಂಗ್ಟನ್: ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಡೊನಾಲ್ಡ್ ಟ್ರಂಪ್ ಅವರನ್ನು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅಭಿನಂದಿಸಿದ್ದಾರೆ.

ರಷ್ಯಾ ಹಾಗೂ ಅಮೆರಿಕಾ ನಡುವಿನ ದ್ವಿಪಕ್ಷೀಯ ಸಂಬಂಧವು ಟ್ರಂಪ್ ಆಡಳಿತದಲ್ಲಿ ಇನ್ನಷ್ಟು ವೃದ್ಧಿಗೊಳ್ಳುವ ಭರವಸೆಯನ್ನು ಅವರು ವ್ಯಕ್ತಪಡಿಸಿದ್ದಾರೆ.

ರಷ್ಯಾದ ಭದ್ರತಾ ಮಂಡಳಿಯೊಂದಿಗೆ ವಿಡಿಯೊ ಸಂವಾದ ನಡೆಸಿದ ಸಂದರ್ಭದಲ್ಲಿ ಮಾತನಾಡಿರುವ ಪುಟಿನ್, ರಷ್ಯಾದೊಂದಿಗೆ ನೇರ ಸಂಪರ್ಕವನ್ನು ಹೊಂದುವ ಡೊನಾಲ್ಡ್ ಟ್ರಂಪ್ ಹಾಗೂ ಅವರ ತಂಡದ ಹೇಳಿಕೆಗಳನ್ನು ಸ್ವಾಗತಿಸುತ್ತೇನೆ ಆದರೆ ಬೈಡನ್ ಸರ್ಕಾರದಲ್ಲಿ ಸಕಾರಣವಿಲ್ಲದೇ ಇದನ್ನು ಸ್ಥಗಿತಗೊಳಿಸಲಾಗಿತ್ತು ಎಂದಿದ್ದಾರೆ.

ಮೂರನೇ ವಿಶ್ವ ಯುದ್ಧ ಸಂಭವಿಸದಂತೆ ತಡೆಯಲು ಸರ್ವ ಪ್ರಯತ್ನ ನಡೆಸುವ ಅವರ ಹೇಳಿಕೆ ಸ್ವಾಗತಾರ್ಹ. ಉಕ್ರೇನ್‌ನೊಂದಿಗೆ ಶಾಂತಿ ಮಾತುಕತೆಗೆ ಮಾಸ್ಕೊ ಸದಾ ಸಿದ್ಧವಿದೆ. ಇದು ಕೇವಲ ಅಲ್ಪಕಾಲದ ಒಪ್ಪಂದವಾಗಿರದೇ, ರಷ್ಯಾದ ಹಿತದಲ್ಲಿರುತ್ತದೆ ಎಂದು ಆಶಿಸುತ್ತೇನೆ. ಎಂದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : ನನ್ನಲ್ಲಿ ಏನು ಇಷ್ಟವಾಗಿ ನನ್ನ ಮದುವೆಯಾಗಲು ಒಪ್ಪಿಕೊಂಡೆ?
ಹೆಂಡತಿ : ಮದುವೆಗೆ ಮುಂಚೆ ಒಂದೆರಡು ಬಾರಿ ನಮ್ಮನೆ ಬಾಲ್ಕನಿಯಿಂದ ನಿಮ್ಮನ್ನು ನೋಡಿದ್ದೆ.
ಗಂಡ : ಏನು ನೋಡಿದ್ದೆ.
ಹೆಂಡತಿ : ನೀವು ಬಟ್ಟೆ ಒಗಿತಾ ಇದ್ದಿದ್ದು, ಪಾತ್ರೆ ತೊಳಿತಾ ಇದ್ದಿದ್ದು!!

ಮೈಸೂರು ಮಿತ್ರ

ಮಂಗಳವಾರ, 21 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸಮಯ ಓಡುತ್ತಿದೆ, ನೀನು ನಡೆಯುತ್ತಿದ್ದಿಯಾ, ಅನ್ನೋದನ್ನ ಅರ್ಥ ಮಾಡಿಕೊಂಡ ಕ್ಷಣ ನಿನ್ನಲ್ಲಿ ಸಾಧಿಸುವ ಛಲ ಬರುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಮಾಡಿದರೆ ಸಂತೆ ಸಾಗೀತೆ?

ನಿಮ್ಮ ಪತ್ರಗಳು

■ ಮುಡಾ ಪ್ರಹಸನ ಇನ್ನೆಷ್ಟು ದಿನ!!

ಮಾನ್ಯರೆ,

ಮೈಸೂರು ಮುಡಾ ಪ್ರಕರಣವನ್ನು ಸಿಬಿಐಗೆ ಕೊಡುವ ವಿಚಾರದ ತೀರ್ಪನ್ನು ಹೈಕೋರ್ಟ್ ಜನವರಿ 27ಕ್ಕೆ ಮುಂದೂಡಿದ್ದು, ಲೋಕಾಯುಕ್ತ ತನಿಖಾ ವರದಿಯನ್ನು ಅಷ್ಟರಲ್ಲಿ ನ್ಯಾಯಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ. ಕಳೆದ ಆಗಸ್ಟ್‌ನಲ್ಲಿ ಮುಡಾ ಪ್ರಕರಣ ಬಹಿರಂಗಗೊಂಡ ನಂತರ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು ಎಂದು ಬಿಜೆಪಿ, ಜೆಡಿಎಸ್ ಪಕ್ಷಗಳ ಹೋರಾಟ ತಾರಕಕ್ಕೇರಿತ್ತು.

ಅದು ಎಷ್ಟು ಜೋರಾಗಿತ್ತು ಎಂದರೆ, ಲೋಕಾಯುಕ್ತರು ಅವರನ್ನು ವಿಚಾರಣೆ ನಡೆಸುತ್ತಾರೆ. ಇದಕ್ಕೆ ಮೊದಲೇ ಅವರು ರಾಜೀನಾಮೆ ನೀಡುತ್ತಾರೆ ಎನ್ನುವ ಸುದ್ದಿಗಳು ವಾಹಿನಿಗಳಲ್ಲಿ ಬರುತ್ತಿದ್ದವು. ವಿರೋಧ ಪಕ್ಷ ಬಿಜೆಪಿಯವರು ದಸರಾಕ್ಕೂ ಮೊದಲೇ ರಾಜೀನಾಮೆ ಕೊಡುತ್ತಾರೆ ಎಂದರು. ನಂತರ ದಸರಾ ನಂತರ ಕೊಡುತ್ತಾರೆ ಎಂದರು. ದಸರಾ ಕೂಡ ಸಾಂಗವಾಗಿ ನೆರವೇರಿತು! ನಂತರ ಬೆಳಗಾವಿ ಅಧಿವೇಶನ ನಂತರ ರಾಜೀನಾಮೆ ಕೊಡುತ್ತಾರೆ ಎಂದರು. ಅದು ಕೂಡ ಮುಗಿದು ಹೋಯಿತು. ಮಾತ್ರವಲ್ಲ ಅಲ್ಲಿ ಒಂದು ದೊಡ್ಡ ವಿವಾದವೇ ನಡೆದು ಹೋಯಿತು. (ಸಿ.ಟಿ. ರವಿ ಅವಾಚ್ಯ ಪದ ಬಳಕೆ). ಈಗ ಅವರಿಗೆ ಮುಡಾ ಪ್ರಕಾರಣವೇ ಮರೆತು ಹೋಗಿದೆ. ಅಥವಾ ಮರೆತಂತೆ ನಟಿಸುತ್ತಿದ್ದಾರೆ. ಏಕೆಂದರೆ ಅವರ ಪಕ್ಷದಲ್ಲಿಯೇ ಗುಂಪುಗಾರಿಕೆ ಪರಸ್ಪರ ಕೆಸರು ಎರಚು ತಾರಕಕ್ಕೇರಿದೆ. ಅಲ್ಲದೆ ಆಡಳಿತ ಪಕ್ಷದವರು ಮುಡಾ ಪ್ರಕರಣಕ್ಕೆ ಪ್ರತಿಯಾಗಿ ಕೋವಿಡ್ ಹಗರಣ, ಭ್ರಷ್ಟಾಚಾರ, ಪೋಕ್ಸೋ ಪ್ರಕರಣಗಳನ್ನು ವಿರೋಧ ಪಕ್ಷಗಳ ನಾಯಕರ ಮೇಲೆ ದಾಖಲಿಸಿ ದೊಡ್ಡ ಗುಮ್ಮನನ್ನೇ ಬಿಟ್ಟರು!!

ಈಗ ಕೋರ್ಟ್, ಲೋಕಾಯುಕ್ತ ಕೂಡ ಅದರ ಬಿಸಿಯೇ ಕಡಿಮೆಯಾಗಿದೆ ಎಂದು ತಣ್ಣಗೆ ವಿಚಾರಣೆ ನಡೆಸುತ್ತಾ ಇವೆ. ಹೀಗೆಯೇ ಮುಂದೂಡುತ್ತಾ 2028ರ ಚುನಾವಣೆಯೇ ಸಮೀಪವಾಗಬಹುದು. ಜನರೂ ಮರೆತು ಬಿಟ್ಟಿದ್ದಾರೆ. ಕೆಲ ಪತ್ರಿಕೆಗಳೂ, ಅದರಲ್ಲೂ ಕೆಲವು ದೃಶ್ಯ ಮಾಧ್ಯಮಗಳು ಮರೆತು ಎಷ್ಟೋ ದಿನವಾಗಿದೆ. ಪಾಪ ಸ್ನೇಹಮಯಿ ಕೃಷ್ಣ ಎನ್ನುವ ಒಬ್ಬ ಆರ್‌ಟಿಐ ಕಾರ್ಯಕರ್ತ ಎಷ್ಟು ದಿನ ಏಕಾಂಗಿ ಹೋರಾಟ ಮಾಡಲು ಸಾಧ್ಯ?! **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

■ ಮಹಿಳೆಯರು ಸ್ವಾವಲಂಬಿಯಾಗಲು ಡಿಂಕ ಗ್ರಾಮದ ಮಂಗಳಮ್ಮ ಉದಾಹರಣೆ

ಮಾನ್ಯರೆ,

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಡಿಂಕ ಗ್ರಾಮದ ಮಹಿಳೆ ಮಂಗಳಮ್ಮ ದಕ್ಷಿಣ ಡೈರಿ ಶೃಂಗ ಸಭೆ–2025ರ ಅತ್ಯುತ್ತಮ ಹೈನುಗಾರ್ತಿ ಪ್ರಶಸ್ತಿ ಪಡೆದಿರುವುದು ಮಂಡ್ಯ ಜಿಲ್ಲೆಗಷ್ಟೇಯಲ್ಲ ಇಡೀ ರಾಜ್ಯಕ್ಕೆ ತಂದ ಗೌರವ ಎನ್ನಬೇಕು.

ಕೇವಲ 5ನೇ ತರಗತಿಯ ತನಕ ವ್ಯಾಸಂಗ ಮಾಡಿದ್ದು, ಕಳೆದ 20 ವರ್ಷಗಳ ಹಿಂದೆ ಕೇವಲ ಒಂದು ಹಸುವಿನಿಂದ ಹೈನುಗಾರಿಕೆ ಪ್ರಾರಂಭಿಸಿ, ಇಂದು 30 ಹೈಬ್ರಿಡ್ ತಳಿಗಳ ಹಸುಗಳನ್ನು ಸಾಕಿ ಕಳೆದ ಒಂದು ವರ್ಷದ ಅವಧಿಯಲ್ಲಿ, ಡಿಂಕ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ, ಒಂದು ಲಕ್ಷಕ್ಕೂ ಹೆಚ್ಚು ಹಾಲು ಸರಬರಾಜು ಮಾಡಿ ಒಂದು ವರ್ಷದಲ್ಲಿ 30 ಲಕ್ಷ ರೂಪಾಯಿ ಸಂಪಾದಿಸಿರುವುದು ಆಕೆಯ ಸಾಧನೆಯ ಬಗ್ಗೆ ಹೆಮ್ಮೆಪಡಬೇಕು. ಇದು ಸತತ ಪರಿಶ್ರಮಕ್ಕೆ ತಕ್ಕ ಫಲ ನೀಡಿದೆ. ಮಹಿಳೆಯರು ಸ್ವಾವಲಂಬನೆಯಾಗಲು ಈಕೆಯೇ ಉದಾಹರಣೆ ಎನ್ನಬಹುದು. ಇಂತಹವರ ಸಂಖ್ಯೆ ಹೆಚ್ಚಾಗಬೇಕು. ಸರ್ಕಾರ ಮಂಗಳಮ್ಮ ಅವರನ್ನು ನಂದಿನಿ ಹಾಲಿನ ಅಂಬಾಸಿಡರ್ ಆಗಿ ನೇಮಕ ಮಾಡಲಿ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

■ ಡಕಾಯಿತರಿಗೂ ಪ್ಯಾಕೇಜ್ ಘೋಷಿಸಿ!!

ಮಾನ್ಯರೆ,

ಆಕರ್ಷಕ ಪ್ಯಾಕೇಜ್ ಘೋಷಿಸಿ ಕಾಡಿನಲ್ಲಿದ್ದ ನಕ್ಸಲರನ್ನು ಶಾರಣಾಗುವಂತೆ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸರಕಾರವು ಯಶಸ್ವಿಯಾಗಿದೆ. ಅದೇ ರೀತಿಯಲ್ಲಿ ನಾಡಿನಲ್ಲಿರುವ ದರೋಡೆಕೋರರು, ಡಕಾಯಿತರು ಹಾಗೂ ಲೂಟಿಕೋರರಿಗೂ ಆಕರ್ಷಕ ಪ್ಯಾಕೇಜ್ ಘೋಷಿಸಿ ಅವರನ್ನೂ ಶರಣಾಗುವಂತೆ ಮಾಡಿ ಸಮಾಜದ ಮುಖ್ಯವಾಹಿನಿಗೆ ತರಲು ಸರಕಾರವು ಕ್ರಮ ಕೊಳ್ಳುವುದೊಳಿತು.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

■ ಖೋ ಖೋ ಕ್ರೀಡೆಗೆ ಪ್ರೋತ್ಸಾಹ ಹೆಚ್ಚಲಿ

ಮಾನ್ಯರೆ,

ಭಾರತದಲ್ಲಿ ಕ್ರಿಕೆಟ್ ಆಟಕ್ಕೆ ನೀಡುವ ಪ್ರೋತ್ಸಾಹ, ಪ್ರಾಮುಖ್ಯತೆ ಬೇರೆ ಯಾವುದೇ ಆಟಕ್ಕೆ ನೀಡುವುದಿಲ್ಲ. ಭಾರತದಲ್ಲಿ ಹಲವಾರು ಆಟಗಳಿದ್ದು ಕ್ರಿಕೆಟ್‌ನ ಮುಂದೆ ಅವು ಮಂಕಾಗಿ ಕಾಣಿಸುತ್ತವೆ. ಪ್ರಸ್ತುತ ಜನವರಿ 19ರ ಭಾನುವಾರ ನವದೆಹಲಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಜರುಗಿದ ಅಂತಾರಾಷ್ಟ್ರೀಯ ಖೋ ಖೋ ಫೈನಲ್ ಪಂದ್ಯಗಳಲ್ಲಿ ನೇಪಾಳದ ಪುರುಷರ ಮತ್ತು ಮಹಿಳೆಯರ ತಂಡಗಳನ್ನು ಸೋಲಿಸಿದ ಭಾರತದ ಪುರುಷರು–ಮಹಿಳೆಯರ ತಂಡಗಳು ಟ್ರೋಫಿಗೆ ಮುತ್ತಿಕ್ಕಿ ಇತಿಹಾಸ ನಿರ್ಮಿಸಿವೆ.

ಚೊಚ್ಚಲ ಖೋ ಖೋ ವಿಶ್ವಕಪ್–2025 ಟೂರ್ನಿಯಲ್ಲಿ ಭಾರತ ತಂಡ ಎರಡು ವಿಭಾಗಗಳಲ್ಲಿ (ಪುರುಷರು–ಮಹಿಳೆಯರು) ವಿಶ್ವ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದು, ಇದು ಭಾರತದಲ್ಲಿ ಖೋ ಖೋ ಕ್ರೀಡೆಯ ಮಹತ್ವ ಹೆಚ್ಚುವಂತೆ ಮಾಡಿದೆ. ಈ ಗೆಲುವು 1983 ರ ಕ್ರಿಕೆಟ್ ವಿಶ್ವಕಪ್‌ನ ಗೆಲುವನ್ನು ಮರುಕಳಿಸುವಂತೆ ಮಾಡಿದ್ದು ಖೋ ಖೋ ಕ್ರೀಡೆಯ ಬೆಳವಣಿಗೆಗೆ ಸಹಕಾರಿಯಾಗಲಿದೆ.

ಖೋ ಖೋ ಕ್ರೀಡೆಯ ಇತಿಹಾಸ ಗಮನಿಸುವುದಾದರೆ ಕ್ರಿಸ್ತಪೂರ್ವ ನಾಲ್ಕನೇ ಶತಮಾನದಿಂದಲೂ ಖೋ ಖೋವನ್ನು ಆಡಲಾಗುತ್ತಿದೆ. ಖೋ ಖೋ ಆಟದ ಕೆಲವು ಅಂಶಗಳನ್ನು ಮಹಾಭಾರತದಲ್ಲಿ ಸಹ ಉಲ್ಲೇಖಿಸಲಾಗಿದೆ. ಪೂರ್ವ–ಆಧುನಿಕ ಕಾಲದಲ್ಲಿ, ರಾಥೇರಾ ಎಂದು ಕರೆಯಲ್ಪಡುವ ಖೋ ಖೋ ಆವೃತ್ತಿಯನ್ನು ರಥಗಳ ಮೇಲೆ ಆಡಲಾಗುತ್ತದೆ ಎಂದು ನಂಬಲಾಗಿದೆ. ಈ ಆಟವನ್ನು ಪ್ರಾಚೀನ ಕಾಲದಲ್ಲಿ 'ಖೋ ಧ್ವನಿ ಕ್ರೀಡಾ' ಎಂದೂ ಕರೆಯಲಾಗುತ್ತಿತ್ತು ಇದನ್ನು 'ಖೋ' ಶಬ್ದವನ್ನು ಮಾಡುವ ಆಟ ಎಂದು ಅನುವಾದಿಸಿ ಆಟವನ್ನು ಆಡಲಾಗುತ್ತದೆ.

ಒಟ್ಟಿನಲ್ಲಿ ಖೋ ಖೋ ಅಟ ಸಂಪೂರ್ಣವಾಗಿ ದೇಹದ ಬಲವರ್ಧನೆಗೆ ಅನುಕೂಲಕರವಾದ ಆಟವಾಗಿದ್ದು, ಶಾಲಾ ಹಂತಗಳಲ್ಲಿ ಈ ಆಟವನ್ನು ಗಂಭೀರವಾಗಿ ಆಡುವ ಮೂಲಕ ಈ ಆಟಕ್ಕೆ ಹೆಚ್ಚಿನ ಮಹತ್ವ ನೀಡಿದರೆ ಹಲವಾರು ಪ್ರತಿಭಾವಂತ ಆಟಗಾರರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಅನುಕೂಲಕರವಾಗುತ್ತದೆ.

ಪ್ರಸ್ತುತ ಭಾರತ ಖೋ ಖೋ ತಂಡದ ಅಂತಾರಾಷ್ಟ್ರೀಯ ವಿಶ್ವಕಪ್ ಗೆಲವು ಖೋ ಖೋ ಆಟವನ್ನು ಜನಪ್ರಿಯಗೊಳಿಸಲೆಂದು ಆಶಿಸುತ್ತಾ, ಸರ್ಕಾರ ಸಹ ಈ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಲೆಂದೇ ಅಗ್ರಹಿಸುತ್ತಾ ವಿಶ್ವ ಕಪ್ ಗೆದ್ದ ಭಾರತದ ಮಹಿಳಾ ಮತ್ತು ಪುರುಷ ಖೋ ಖೋ ತಂಡಕ್ಕೆ ಹೃದಯತುಂಬಿ ಅಭಿನಂದಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಇಡಿ, ಸಿಬಿಐ ಇದ್ದರೂ ಭಯ ಬೇಕಿಲ್ಲ...!



ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಗರಣ ಸಂಬಂಧ ಮೈಸೂರು ಲೋಕಾಯುಕ್ತ ಪೊಲೀಸರು ತಮ್ಮ ವರದಿಯನ್ನು ಹೈಕೋರ್ಟ್‌ನಲ್ಲಿ ಇದೇ ತಿಂಗಳ 25 ರಂದು ಸಲ್ಲಿಸಬೇಕಿದೆ.

ಈ ನಡುವೆ, ಇದೇ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರ ವಿರುದ್ಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ(ಇಡಿ)ವು, ಅಕ್ರಮ ಹಣ ವರ್ಗಾವಣೆ ಕಾಯ್ದೆ (Prevention of Money Laundering Act) ಅಡಿಯಲ್ಲಿ 300 ಕೋಟಿ ರೂಪಾಯಿ ಮೌಲ್ಯದ 142 ಸ್ಥಿರಾಸ್ತಿಗಳನ್ನು ಈಗ ಮುಟ್ಟುಗೋಲು ಹಾಕಿಕೊಂಡಿದೆ.

ಆದರೆ, ಇದರಿಂದಲೇ ಮುಖ್ಯಮಂತ್ರಿಗಳ ಸುತ್ತ ಕುಣಿಕೆ ಬಿಗಿಯಾಗುತ್ತಿದೆ ಎಂಬ ನಿರ್ಧಾರಕ್ಕೆ ಬರುವುದಕ್ಕು ಮುನ್ನ ಭಾರತದ ಪ್ರತಿಷ್ಠಿತ ತನಿಖಾ ಸಂಸ್ಥೆಗಳು ಅಕ್ರಮ–ಅವ್ಯವಹಾರ ತನಿಖಾ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಿದ ದಾಖಲೆ ಹಾಗೂ ಸಾಮರ್ಥ್ಯವನ್ನು ಒಮ್ಮೆ ನೋಡ ಬೇಕಿದೆ. ಅದನ್ನು ಮಾಡಿದರೆ ನಮಗೆ ಸಿದ್ದರಾಮಯ್ಯನವರು ಅಷ್ಟೇನು ಕಳವಳಪಡಬೇಕಾದ ಅವಶ್ಯಕತೆ ಇಲ್ಲವೇನೋ ಎಂಬುದು ಅರಿವಾಗುತ್ತದೆ.

ಹಾಗೆ ನೋಡಿದರೆ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಲ್ಲಿ ಜಾರಿ ನಿರ್ದೇಶನಾಲಯ ಹಾಗೂ ಕೇಂದ್ರೀಯ ತನಿಖಾ ದಳದ ಹಿಂದಿನ ಸಾಧನೆ ಹೇಳಿಕೊಳ್ಳುವಂತೆನೂ ಇಲ್ಲ.

ಅಷ್ಟಕ್ಕೂ ಸಿದ್ದರಾಮಯ್ಯ, ತಮಗೆ ಎದುರಾಗಿರುವ ಸಂಕಷ್ಟದಿಂದ ಪಾರಾಗಲು ಬೇರ್‍ಯಾವ ಆಲೋಚನೆ ಮಾಡುವ ಬದಲು ತಮ್ಮ ಸಂಪುಟ ಸಹೋದ್ಯೋಗಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೊಮ್ಮೆ ಗಮನಿಸಿದರೆ ಸಾಕು.

ಕೆಲ ವರ್ಷದ ಹಿಂದೆ ಡಿ.ಕೆ.ಶಿವಕುಮಾರ್ ಅವರ ದೆಹಲಿಯ ನಿವಾಸದ ಮೇಲೆ ದಾಳಿ ನಡೆಸಿ, ನಗದು ವಶಪಡಿಸಿಕೊಳ್ಳಲಾಗಿತ್ತು. ಈ ಸಂಬಂಧ ಅವರ ಮಗಳನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತು. ಈಗಲೂ ಅದರ ತನಿಖೆ ನಡೆಯುತ್ತಿದೆ. ಇತ್ತ ಡಿ.ಕೆ. ಶಿವಕುಮಾರ್ ರಾಜಕೀಯ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ, ಉನ್ನತ ಸ್ಥಾನಗಳ ಪಡೆದಿದ್ದಾರೆ!

ಉಪಮುಖ್ಯಮಂತ್ರಿಗಳ ಇಂತಹ ನಿರಾತಂಕದ ನಡೆಗೆ ಅವರ ಮುಗ್ಧತೆಯೇನೂ ಕಾರಣವಲ್ಲ. ಬದಲಾಗಿ ತನಿಖಾ ಸಂಸ್ಥೆಗಳ ಅಸಮರ್ಥತೆ ಹಾಗೂ ವಿಳಂಬ ಧೋರಣೆ ಅವರ ವಿಶ್ವಾಸಕ್ಕೆ ಕಾರಣವಾಗಿದೆ.

ಜಾರಿ ನಿರ್ದೇಶನಾಲಯ (ಇಡಿ) ಮತ್ತು ಕೇಂದ್ರೀಯ ತನಿಖಾ ದಳ (ಸಿಬಿಐ) ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸುವುದರಲ್ಲಿ ಅತ್ಯಂತ ನಿರಾಶಾದಾಯಕ ದಾಖಲೆ ಹೊಂದಿವೆ. ಅಕ್ರಮ ಹಣ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಜಾರಿಗೆ ಬಂದ 12 ವರ್ಷಗಳ ಬಳಿಕ ಇಡಿಯಿಂದ ಮೊದಲ ಶಿಕ್ಷೆಯಾಗಿದೆ.

2005ರಲ್ಲಿ ಜಾರಿಯಾದ ಈ ಕಾಯ್ದೆ ಅಡಿಯಲ್ಲಿ ಮೊದಲ ಬಾರಿ ಶಿಕ್ಷೆ ಆಗಿದ್ದು 2017ರಲ್ಲಿ. ಈ ಪ್ರಕರಣದ ಆರೋಪಿ, ಜಾರ್ಖಂಡ್‌ನ ಮಾಜಿ ಮಂತ್ರಿ ಹರಿನಾರಾಯಣ್ ರೈ. ಅವರು 3.7 ಕೋಟಿ ಅಕ್ರಮ ಹಣ ವರ್ಗಾವಣೆಗೆ ಗುರಿಯಾಗಿದ್ದರು.

ನಿಮಗೆ ಗೊತ್ತಿರಲಿ, ಈ ಕಾಯಿದೆಯ ಅಡಿಯಲ್ಲಿ ಇದುವರೆಗೂ ದಾಖಲಾಗಿರುವ ಒಟ್ಟು 5,297 ಪ್ರಕರಣಗಳ ಪೈಕಿ, ಕೇವಲ 40 ಪ್ರಕರಣಗಳಲ್ಲಿ ಮಾತ್ರ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ. ಇವರಲ್ಲಿಯೂ ಮೂವರು ಬಚಾವಾಗಿದ್ದಾರೆ.

ಈ ರೀತಿಯ ಕಳಪೆ ಸಾಧನೆ ಯಾರ ಗಮನಕ್ಕೂ ಬಂದಿರಲಿಲ್ಲ. 2024ರ ಆಗಸ್ಟ್ ತಿಂಗಳಲ್ಲಿ, ಸರ್ವೋಚ್ಚ ನ್ಯಾಯಾಲಯದ ಪೀಠವು, ಜಾರಿ ನಿರ್ದೇಶನಾಲಯವು **"ವೈಜ್ಞಾನಿಕ ತನಿಖಾ ವಿಧಾನ"** ಅಳವಡಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿತ್ತು. ನ್ಯಾಯಾಲಯದಲ್ಲಿ ಊರ್ಜಿತವಾಗದಂತಹ ಪ್ರಮಾಣ ಪತ್ರಗಳು ಹಾಗೂ ಮೌಖಿಕ ಹೇಳಿಕೆಗಳ ಹೊರತಾಗಿ ಗುಣಮಟ್ಟದ ತನಿಖೆ ಹಾಗೂ ಸಾಕ್ಷ್ಯಗಳ ಮೇಲೆ ಗಮನಹರಿಸಬೇಕೆಂದು ಅದು ಹೇಳಿತು.

ಸಿಬಿಐ ಸಹ ಇದಕ್ಕಿಂತ ಬೇರೆಯಲ್ಲ. ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಲಾಭಕ್ಕಾಗಿ ಸಿಬಿಐ ತನಿಖೆಗೆ ಒತ್ತಾಯ ಮಾಡುತ್ತಲೇ ಇರುತ್ತವೆ. ಆದರೆ, ಸಿಬಿಐನ ಸಾಧನೆ ಮಾತ್ರ ನಿರಾಶಾದಾಯಕವಾಗಿದೆ.

ಕೇಂದ್ರೀಯ ವಿಚಕ್ಷಣಾ ಆಯೋಗ(ಸಿವಿಸಿ)ದ 2023ರ ವರದಿಯ ಪ್ರಕಾರ, ಸಿಬಿಐ ಕೈಗೊಂಡ ಸುಮಾರು 6,900 ಭ್ರಷ್ಟಾಚಾರ ಪ್ರಕರಣಗಳ ವಿಚಾರಣೆ ನೆನೆಗುದಿಗೆ ಬಿದ್ದಿದೆ. ಇವುಗಳ ಪೈಕಿ 361 ಪ್ರಕರಣಗಳು ಕಳೆದ 20 ವರ್ಷಗಳಿಂದ ಬಾಕಿ ಇವೆ!

ನೌಕಾದಳದ ವಾರ್ ರೂಂ ಮಾಹಿತಿ ಸೋರಿಕೆ ಪ್ರಕರಣ ಇವುಗಳ ಅಸಾಮರ್ಥ್ಯಕ್ಕೆ ಕೈಗನ್ನಡಿಯಂತಿದೆ. ಈ ಪ್ರಕರಣದಲ್ಲಿ ಲೆಫ್ಟಿನೆಂಟ್ ಕಮಾಂಡರ್ ರವಿಶಂಕರನ್, ಭಾರತೀಯ ನೌಕಾದಳದೊಂದಿಗೆ 3 ಬಿಲಿಯನ್ ಪೌಂಡ್ ಮೌಲ್ಯದ ಸಬ್‌ಮೆರಿನ್ ವ್ಯವಹಾರದ ಗುತ್ತಿಗೆ ಪಡೆಯಲು ಓರ್ವ ರಕ್ಷಣಾಗುತ್ತಿಗೆದಾರನಿಗೆ ವರ್ಗೀಕೃತ ದಾಖಲೆಗಳನ್ನು ಕದ್ದು ರವಾನಿಸಿದ ಆರೋಪಕ್ಕೆ ಗುರಿಯಾಗಿದ್ದರು.

ಸಿಬಿಐನಿಂದ ಎರಡು ಬಾರಿ ಬಂಧಿಸಲ್ಪಟ್ಟರೂ ಶಂಕರನ್, ಎರಡೂ ಸಲ ಸಿಬಿಐ ಹಿಡಿತದಿಂದ ತಪ್ಪಿಸಿಕೊಂಡರು. ಕೊನೆಗೆ, ಅವರು ಲಂಡನ್ ನ್ಯಾಯಾಲಯದಲ್ಲಿ ಶರಣಾದರು. ಆದರೆ, 2023ರಲ್ಲಿ ಬ್ರಿಟಿಷ್ ನ್ಯಾಯಾಲಯ ಆತನನ್ನು ಭಾರತಕ್ಕೆ ಹಸ್ತಾಂತರಿಸುವ ಬೇಡಿಕೆಯನ್ನು ರದ್ದುಪಡಿಸಿತು.

ಆಶ್ಚರ್ಯಕರ ಸಂಗತಿ ಎಂದರೆ, 10 ವರ್ಷಗಳ ನಂತರವೂ ನಮ್ಮ ತನಿಖಾ ಸಂಸ್ಥೆ ಮೇಲ್ನೋಟಕ್ಕೆ ಸತ್ಯ ಎಂದು ಕಂಡು ಬರುವ ಈ ಪ್ರಕರಣದ ಮರು ತನಿಖೆಗೆ ಮುಂದಾಗದಿರುವುದು.

ಗಾಯದ ಮೇಲೆ ಉಪ್ಪು ಸುರಿದಂತೆ, ನ್ಯಾಯಾಲಯವು ಭಾರತದ 'ಮಂದಗತಿ' ನ್ಯಾಯಿಕ ವ್ಯವಸ್ಥೆಯನ್ನು ಟೀಕಿಸಿ, ಶಂಕರನ್‌ಗೆ ನ್ಯಾಯಾಲಯದ ಖರ್ಚು–ವೆಚ್ಚವಾಗಿ ಒಂದು ಕೋಟಿ ರೂಪಾಯಿ ನೀಡುವಂತೆ ಸಿಬಿಐಗೆ ಆದೇಶಿಸಿತು.

ಅದೇ ರೀತಿ, ಮದ್ಯದ ದೊರೆ ವಿಜಯಮಲ್ಯನನ್ನು ಭಾರತಕ್ಕೆ ಹಸ್ತಾಂತರಿಸುವ ವಿಷಯದಲ್ಲೂ ವ್ಯವಸ್ಥಿತ ವಿಳಂಬವಾಗಿದೆ. 2017ರಲ್ಲಿ ಯುನೈಟೆಡ್ ಕಿಂಗ್ಡಮ್‌ನ (ಯುಕೆ) ನ್ಯಾಯಾಧೀಶರೊಬ್ಬರು ಭಾರತದ ನ್ಯಾಯಾಂಗ ಪ್ರಕ್ರಿಯೆ ಹಾಗೂ ತನಿಖೆಯ ವೈಖರಿ ಕುರಿತು; "ಭಾರತೀಯರು ಸಾಮಾನ್ಯವಾಗಿ ಪ್ರತಿಸ್ಪಂದಿಸುವುದರಲ್ಲಿ ತುಂಬಾ ಪ್ರಾಮಾಣಿಕರೇ? ಅವರು ಈಗಾಗಲೇ ಆರು ತಿಂಗಳ ಕಾಲ ತೆಗೆದುಕೊಂಡಿದ್ದು ಹಾಗೂ ನಾವು ಮಾತ್ರ ಕಳೆದ ಆರು ವಾರಗಳಲ್ಲಿ ಯಾವುದೇ ಹೆಚ್ಚಿನ ಮುನ್ನಡೆ ಸಾಧಿಸಿಲ್ಲ" ಎಂದು ವ್ಯಂಗ್ಯವಾಡಿದ್ದಾರೆ.

ವಿಳಂಬ ಧೋರಣೆ ಹಾಗೂ ಪ್ರಬಲವಾದ ಸಾಕ್ಷಿಗಳ ಕೊರತೆಯಿಂದಾಗಿ ಮಲ್ಯ ಜಾಮೀನು ವಿಸ್ತರಣೆಯನ್ನು ಆನಂದಿಸಲು ಅವಕಾಶ ಮಾಡಿಕೊಟ್ಟು, ಪ್ರಕರಣ ಮುಂದೆ ಮುಂದೆ ಹೋಗುತ್ತಿದೆ.

ಈ ನಿಟ್ಟಿನಲ್ಲಿ ಮತ್ತೊಂದು ಉದಾಹರಣೆ ಎಂದರೆ 1994ರ ಲುಧಿಯಾನ ಹತ್ಯಾ ಪ್ರಕರಣ. ಈ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿ ಸುಮೇದ್ ಸಿಂಗ್ ವಿರುದ್ಧ ಸಿಬಿಐ ಕೊಲೆ ಆಪಾದನೆ ಹೊರಿಸಿತ್ತು.

ಅದಾಗಲೇ 30 ವರ್ಷಗಳು ಕಳೆದಿದ್ದು, ಪ್ರಕರಣ ಇನ್ನೂ ನಡೆಯುತ್ತಿದೆ. ಈ ಸುದೀರ್ಘ ಅವಧಿಯಲ್ಲಿ ಕೊಲೆ ಆರೋಪ ಎದುರಿಸುತ್ತಿರುವ ಸುಮೇದ್‌ಸಿಂಗ್, ಪೊಲೀಸ್ ಸೇವೆಯಲ್ಲಿ ಮುಂದುವರೆದಿರುವುದು ಮಾತ್ರವಲ್ಲ, ಪಂಜಾಬ್ ಪೊಲೀಸ್ ಮಹಾ ನಿರ್ದೇಶಕರೂ ಆಗಿದ್ದಾರೆ (Director General of Police).

ಈಗ ನಮ್ಮ ರಾಜ್ಯದ ವಿಷಯಕ್ಕೆ ಬರೋಣ; 2016ರಲ್ಲಿ ಅಸ್ತಿತ್ವಕ್ಕೆ ಬಂದ ಭ್ರಷ್ಟಾಚಾರ ಪ್ರತಿಬಂಧಕ ದಳ (Anti Corruption Bureau), 2021ರ ಅಂಕಿ–ಅಂಶಗಳ ಪ್ರಕಾರ, 1,814 ಪ್ರಕರಣಗಳನ್ನು ದಾಖಲಿಸಿದ್ದು 10 ಪ್ರಕರಣಗಳಲ್ಲಿ ಮಾತ್ರವೇ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ. ಇಲ್ಲಿ ಶಿಕ್ಷೆಯ ಪ್ರಮಾಣ ಕೇವಲ 0.55%.

ಲೋಕಾಯುಕ್ತ 2000 ಮತ್ತು 2021ರ ನಡುವೆ 4,680 ಪ್ರಕರಣಗಳ ದಾಖಲಿಸಿದ್ದು, ಅದರಲ್ಲಿ ಕೇವಲ 878 ಪ್ರಕರಣಗಳಲ್ಲಿ ಮಾತ್ರ ತಪ್ಪಿತಸ್ತರಿಗೆ ಶಿಕ್ಷೆಯಾಗಿದೆ. ಇದರ ಪ್ರಮಾಣವೂ ಕೇವಲ 18%.

ಅದಾಗ್ಯೂ, ಜಾರಿ ನಿರ್ದೇಶನಾಲಯದ ಕ್ರಮಗಳ ಬಗ್ಗೆ ಕಳವಳಪಡಲು ಸಿದ್ದರಾಮಯ್ಯನವರಿಗೆ ಒಂದೇ ಒಂದು ಸಣ್ಣ ಕಾರಣವಿದೆ. ನ್ಯಾಯಾಂಗದ ಸಾಧನಗಳಾಗಬೇಕಾದ ಸಾಕ್ಷ್ಯ ಮತ್ತು ತನಿಖೆಗಳು ರಾಜಕೀಯ ಸಂಧಾನಗಳಲ್ಲಿ ಚೌಕಾಸಿಯ ತುಣುಕುಗಳಾಗಿ ಉಪಯೋಗಿಸಲ್ಪಡುವ ಸಾಧ್ಯತೆ ಹೆಚ್ಚಾಗಬಹುದು.

ಈಗ, ಇಡಿ ಮತ್ತು ಸಿಬಿಐಗಳು ತಮ್ಮ ದಾಳಿ ಮತ್ತು ಆಸ್ತಿ ಜಪ್ತಿಯಿಂದಲೇ ಭಾರೀ ಸುದ್ದಿಯಲ್ಲಿರುವಾಗ ಸಿದ್ದರಾಮಯ್ಯ ನಿರಾಳವಾಗಿರಬಹುದು. ಇಂತಹ ವೇಳೆ ಸಂಗ್ರಹಿತ ಸಾಕ್ಷಿಗಳೂ ಧೂಳು ಹಿಡಿಯಬಹುದಾದ ಸಾಧ್ಯತೆಗಳಿವೆ. ಒಂದು ವೇಳೆ ಶಿಕ್ಷೆಯಾದರೂ, ಅದು ಜಾರಿಯಾಗುವುದಕ್ಕೂ ವರ್ಷಗಳೇ ಬೇಕಾಗಬಹುದು.

ಹೀಗಾಗಿ, ಇಡಿ ಮತ್ತು ಸಿಬಿಐ ಇದ್ದರೂ ಸದ್ಯಕ್ಕೆ ಸಿದ್ದರಾಮಯ್ಯ ಭಯಪಡುವಂತಹುದು ಏನೂ ಇಲ್ಲ!

e-mail:vikram@starofmysore.com

ಸಂಗೀತ ಕ್ಷೇತ್ರಕ್ಕೆ ತ್ಯಾಗರಾಜ, ಪುರಂದರ ದಾಸರ ಕೊಡುಗೆ ಅನನ್ಯ

ಆರಾಧನಾ ಮಹೋತ್ಸವದಲ್ಲಿ ಎಸ್‌ಬಿಎಂ ನಿವೃತ್ತ ವ್ಯವಸ್ಥಾಪಕ ಎಂ.ವೈ.ಕುಮಾರ್ ಅಭಿಮತ

ಮೈಸೂರು, ಜ.20– ಕರ್ನಾಟಕ ಶಾಸ್ತ್ರೀಯ ಕ್ಷೇತ್ರಕ್ಕೆ ಶ್ರೀ ತ್ಯಾಗರಾಜ ಹಾಗೂ ಶ್ರೀ ಪುರಂದರ ದಾಸರ ಕೊಡುಗೆ ಅಪಾರ, ಅನನ್ಯ ಎಂದು ಎಸ್‌ಬಿಎಂ ನಿವೃತ್ತ ವ್ಯವಸ್ಥಾಪಕ ಹಾಗೂ ವಕೀಲರಾದ ಎಂ.ವೈ. ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಜಯಲಕ್ಷ್ಮೀಪುರಂನ ಮಹಾಜನ ಪ್ರೌಢಶಾಲೆ ಆವರಣದಲ್ಲಿ ಭಾನುವಾರ ಮೈಸೂರಿನ ಸ್ವರಾಲಯ ಸಂಗೀತ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಹಮ್ಮಿಕೊಂಡಿದ್ದ ಶ್ರೀ ತ್ಯಾಗರಾಜ ಹಾಗೂ ಶ್ರೀ ಪುರಂದರ ದಾಸರ ಆರಾಧನಾ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಅವರು, ಶ್ರೀರಾಮನ ಪ್ರೇರಣೆಯಿಂದ ಶ್ರೀ ತ್ಯಾಗರಾಜ ಹಾಗೂ ಶ್ರೀ ಪುರಂದರರು ಸಂಗೀತ ಕ್ಷೇತ್ರದಲ್ಲಿ ಸಾಮ್ರಾಟರಾಗಿ ಪಂಚರತ್ನ ಕೀರ್ತನೆ ಸೇರಿದಂತೆ ಸಾವಿರಾರು ಕೀರ್ತನೆಗಳನ್ನು ಲೋಕಾರ್ಪಣೆ ಮಾಡಿದ್ದಾರೆ ಎಂದು ಹೇಳಿದರು.

ದೇಶ–ವಿದೇಶಗಳನ್ನು ಇವರೀರ್ವರ ಆರಾಧನೆ ಹಾಗೂ ಪಂಚರತ್ನ ಕೀರ್ತನೆಗಳ ಗೋಷ್ಠಿ ಗಾಯನಕ್ಕೆ ಸಹಸ್ರಾರು ಮಂದಿ ಸೇರುತ್ತಾರೆ. ಮುಂದಿನ ದಿನಗಳಲ್ಲಿ ತ್ಯಾಗರಾಜರ ಆರಾಧನೆಯನ್ನು ನಗರದ ತ್ಯಾಗರಾಜ ರಸ್ತೆಯಲ್ಲೇ ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು.

ಸಾಂಸ್ಕೃತಿಕ ರಾಜಧಾನಿ ಮೈಸೂರು ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಸಂಗೀತ ಸಂತರಾದ ತ್ಯಾಗರಾಜ ಹಾಗೂ ಪುರಂದರರಿಂದ ಪ್ರೇರಿತರಾಗಿ ಸಂಗೀತಾಭ್ಯಾಸ ಕಲಿತು ಜನಪ್ರಿಯರಾದವರು ಬಹಳಷ್ಟಿದ್ದಾರೆ. ಸ್ವರಾಲಯ ಸಂಗೀತ ಸಂಸ್ಥೆಯ ಅಧ್ಯಕ್ಷೆ ವಿದುಷಿ ಡಾ.ಸುಮ ಹರಿನಾಥ್ ಸಾರಥ್ಯದಲ್ಲಿ ಕಳೆದ 34 ವರ್ಷಗಳಿಂದ ನಿರಂತರವಾಗಿ ಸಂಗೀತ ಕಲೆಯನ್ನು ಬೆಳೆಸುತ್ತಾ ಬಂದಿರುವುದು ನಿಜಕ್ಕೂ ಶ್ಲಾಘನೀಯ ವಿಚಾರ ಎಂದು ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು.



ಸ್ವರಾಲಯ ವತಿಯಿಂದ ಎಂ.ವೈ.ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಸ್ವರಾಲಯ ವತಿಯಿಂದ ಎಂ.ವೈ.ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಸ್ವರಾಲಯ ಕಾರ್ಯದರ್ಶಿ ಹೆಚ್.ಎಸ್. ಶ್ರೀಕಾಂತಾಮಣಿ ತ್ಯಾಗರಾಜ, ಪುರಂದರ ದಾಸರ ಕುರಿತು ಮಾತನಾಡಿ, ಸಂಗೀತ ಪಿತಾಮಹರಾದ ಪುರಂದರದಾಸರ ಜೀವನ ಚರಿತ್ರೆ ಅವು ನವಕೋಟಿ ನಾರಾಯಣ ಆಗುವ ಹೆಬ್ಬಯಕೆಯಿಂದ ಹಿಡಿದು ಅವರು ದಾಸರಾಗುವವರೆಗೂ ಅವರ ಜೀವನದಲ್ಲಿ ಪ್ರಮುಖ ಘಟನೆಗಳು ಎಲ್ಲವೂ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಎಂದರು.

ವೇದಿಕೆಯಲ್ಲಿ ಸ್ವರಾಲಯ ಸಂಗೀತ ಸಂಸ್ಥೆ ಅಧ್ಯಕ್ಷ ವಿದುಷಿ ಡಾ.ಸುಮ ಹರಿನಾಥ್, ಸದಸ್ಯರಾದ ರೂಪ ನರಸಿಂಹನ್, ಶುಭ ಗಣೇಶ್, ವಿಭುದ ರಾಜೇಂದ್ರ, ಲೀಲಾವತಿ ಹಾಗೂ ಮತ್ತಿತರಿದ್ದರು. ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಸ್ಥೆ ಪದಾಧಿಕಾರಿಗಳು ಹಾಗೂ ಸ್ಥಳೀಯ ವಿದ್ವಾಂಸರಿಂದ ಪಿಳ್ಳಾರಿ ಗೀತೆ ಹಾಗೂ ಪಂಚರತ್ನ ಕೃತಿಗಳ ಗಾಯನ ಜರುಗಿತು. ವಾದ್ಯ ಸಹಕಾರದಲ್ಲಿ ವಯೋಲಿನ್‌ನಲ್ಲಿ ವಿದ್ವಾನ್ ಸಿ.ಚೇತನ್ ಹಾಗೂ ಮೃದಂಗದಲ್ಲಿ ವಿದ್ವಾನ್ ವಿ.ಶ್ಯಾಮ್ ಸಹಕರಿಸಿದರು. ಸಂಸ್ಥೆ ಕಾರ್ಯದರ್ಶಿ ಹೆಚ್.ಎಸ್.ಶ್ರೀಕಾಂತಾಮಣಿ ಸ್ವಾಗತಿಸಿ, ನಿರೂಪಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ವಧುವಿನ ಆಭರಣ ಪ್ರದರ್ಶನ



ಮೈಸೂರಿನ ಮಲಬಾರ್ ಗೋಲ್ಡ್ & ಡೈಮಂಡ್ಸ್, ಶೋ ರೂಮ್‌ನಲ್ಲಿ ಜ.26ರವರೆಗೆ 'ವಧುವಿನ ಆಭರಣ ಪ್ರದರ್ಶನ' ಏರ್ಪಡಿಸಲಾಗಿದೆ.

ಮೈಸೂರು,ಜ.20–ಮೈಸೂರಿನ ಮಲಬಾರ್ ಗೋಲ್ಡ್ & ಡೈಮಂಡ್ಸ್, ಶೋ ರೂಮ್‌ನಲ್ಲಿ ಜ.26 ರವರೆಗೆ 'ವಧುವಿನ ಆಭರಣ ಪ್ರದರ್ಶನ' ಏರ್ಪಡಿಸಲಾಗಿದೆ. ಕಲಾತ್ಮಕವಾಗಿ ರಚಿಸಲಾದ ಆಭರಣಗಳ ವ್ಯಾಪಕ ಶ್ರೇಣಿಯ ಪ್ರದರ್ಶನವನ್ನು ವಿಶೇಷ ಗ್ರಾಹಕರು ಹಾಗೂ ರೂಪದರ್ಶಿಗಳಾದ ಮಿಸ್ ಐಶ್ವರ್ಯ, ಮಿಸ್ ಫರ್ಹೀನಾ ಹಬೀಬ್, ಮಿಸ್ ಅರ್ಶಿತಾ ಸುರೇಶ್, ಮಿಸ್ ಜವೇರಿಯಾ ತಾಜ್ ಬಿಲಿ, ಮಿಸ್ ಸೌಂದರ್ಯ, ಮಿಸ್ ಫಿಜಾ ಉಪಸ್ಥಿತಿಯಲ್ಲಿ ಅನಾವರಣಗೊಳಿಸಲಾಯಿತು.

ಈ ಸಂದರ್ಭದಲ್ಲಿ ಶರಫುದ್ದೀನ್.ಪಿ ದಕ್ಷಿಣ ವಲಯ ಮುಖ್ಯಸ್ಥರು ಮತ್ತು ಸ್ಟೋರ್ ಹೆಡ್ ಮೈಸೂರು. ಮೊಹಮ್ಮದ್ ಅನ್ವಾಜ್, ಅಸಿಸ್ಟ್ ಸ್ಟೋರ್ ಹೆಡ್ ಮತ್ತು ಗ್ರಾಹಕರು. ಮಲಬಾರ್ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರದರ್ಶನವು ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಪ್ರಸಿದ್ಧ ಉಪ–ಬ್ರಾಂಡ್‌ಗಳಾದ ಭಾರತೀಯ ಪರಂಪರೆಯ ಆಭರಣಗಳು ಮತ್ತು ಕೈಯಿಂದ ರಚಿಸ ಲಾದ ಆಭರಣ ಬ್ರ್ಯಾಂಡ್ ಡಿವೈನ್, ಡೈಮಂಡ್ ಜ್ಯುವೆಲ್ಲರಿ ಬ್ರಾಂಡ್ ಮೈನ್ ಮತ್ತು ಅನ್ಕಟ್ ಡೈಮಂಡ್ ಜ್ಯುವೆಲ್ಲರಿ ಬ್ರಾಂಡ್ ಎರಾಗಳನ್ನು ಒಳಗೊಂಡಿದೆ.

ವಿಶ್ವ ದರ್ಜೆಯ ಸೌಲಭ್ಯಗಳು ಮತ್ತು ಉತ್ಪನ್ನಗಳ ಹೊರತಾಗಿ, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಆಶ್ವಾಸಿತ ಜೀವಿತಾವಧಿ ನಿರ್ವಹಣೆ, ಒಂದು ವರ್ಷದ ವಿಮೆ, ಚಿನ್ನದ ವಿನಿಮಯಕ್ಕಾಗಿ ಶೂನ್ಯ ಕಡಿತ ಮತ್ತು ಎಲ್ಲಾ ಆಭರಣಗಳಿಗೆ ಮರುಖರೀದಿ ಖಾತರಿಯನ್ನು ವಿಸ್ತರಿಸುತ್ತದೆ. ಪ್ರತಿಯೊಂದು ಉತ್ಪನ್ನವು ಬೆಲೆ ಟ್ಯಾಗ್ ಅನ್ನು ಹೊಂದಿದೆ, ಒಟ್ಟು ತೂಕ, ಕಲ್ಲಿನ ತೂಕ ಮತ್ತು ಉತ್ಪಾದನಾ ವೆಚ್ಚವನ್ನು ವಿವರಿಸುತ್ತದೆ. ಪ್ರದರ್ಶನವು ಜನವರಿ 26ರವರೆಗೆ ಇರುತ್ತದೆ.

ಅಭಿನಂದನೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಬಿಸಿಬಿ ವರ್ಗದ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದ ಟಿ.ರವಿ (ಟೆಂಟ್ ರವಿ ಕುಂಬಾರಕೊಪ್ಪಲ್) ಅವರನ್ನು ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ಬ್ಯಾಂಕಿನ ನಿರ್ದೇಶಕ ಮಂಚಪ್ಪ, ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕಿ ಹೇಮಾ, ವಿಕಾಸ್, ವಸಂತ ಮುನೀಶ್, ಕುಂಬಾರಕೊಪ್ಪಲು ಶ್ರೀನಿವಾಸ್, ಕೃಷ್ಣ ಇನ್ನಿತರರಿದ್ದರು.

ಫೆ.10ಕ್ಕೆ ಕಾಯಕ ಶರಣರ ಜಯಂತಿ

ಮೈಸೂರು,ಜ.20– ಮೈಸೂರಿನ ಕರ್ನಾಟಕದ ಕಿರುಮಂದಿರದಲ್ಲಿ ಫೆ.10ರಂದು ಬೆಳಗ್ಗೆ 11.30ಕ್ಕೆ ಕಾಯಕ ಶರಣರ ಜಯಂತಿ ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಕಾಯಕ ಶರಣರ ಜಯಂತಿಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಪಾಲಿಕೆ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು.

ಒಂದನೇ ಪುಟದಿಂದ

ಟ್ರಂಪ್ ಆಡಳಿತ ಆರಂಭ

ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಪ್ರಮಾಣವಚನ ಸ್ವೀಕರಿಸಿದ ಬಳಿಕ ಅಮೆರಿಕವನ್ನುದ್ದೇಶಿಸಿ ಮೊದಲ ಭಾಷಣ ಮಾಡಿದ ಟ್ರಂಪ್, ಇದು ಅಮೆರಿಕದ ಸ್ವರ್ಣ ಯುಗ ಎಂದು ಬಣ್ಣಿಸಿದ್ದಾರೆ. ಹಲವು ಸವಾಲುಗಳು ನಮ್ಮ ಮುಂದಿದೆ. ಆದರೆ ಯುನೈಟೆಡ್ ಸ್ಟೇಟ್ಸ್ ಸಮರ್ಥವಾಗಿದೆ. ಹೀಗಾಗಿ ಇದು ಸುವರ್ಣಯುಗದ ಆರಂಭ ಎಂದು ಟ್ರಂಪ್ ಹೇಳಿದ್ದಾರೆ.

ಟ್ರಂಪ್ ಪ್ರಮಾಣ ವಚನ ಸಮಾರಂಭಕ್ಕೆ ಭಾರತದ ಪ್ರತಿನಿಧಿಯಾಗಿ ವಿದೇಶಾಂಗ ಸಚಿವ ಎಸ್ ಜೈಶಂಕರ್ ಪಾಲ್ಗೊಂಡಿದ್ದಾರೆ. ಪ್ರಧಾನಿ ಮೋದಿ ನೀಡಿದ ಸಂದೇಶವನ್ನು ಡೋನಾಲ್ಡ್ ಟ್ರಂಪ್‌ಗೆ ತಲುಪಿಸಿದ್ದಾರೆ. ಇನ್ನು ಟ್ರಂಪ್ ಪ್ರಮಾಣವಚನ ಸಮಾರಂಭಕ್ಕೆ ಟ್ರಂಪ್ ಆಪ್ತ ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್, ಖ್ಯಾತ ಉದ್ಯಮಿ ಜೆಫ್ ಬೆಜೋಸ್ ಮತ್ತು ಫೇಸ್‌ಬುಕ್ ಮುಖ್ಯಸ್ಥ ಮಾರ್ಕ್ ಜುಕರ್‌ಬರ್ಗ್, ಚೀನಾ ಸಾಮಾಜಿಕ ಮಾಧ್ಯಮ ದೈತ್ಯ ಟಿಕ್‌ಟಾಕ್ ಮುಖ್ಯಸ್ಥ ಶೌ ಚೆವ್, ಮಾಜಿ ಅಧ್ಯಕ್ಷರಾದ ಬಿಲ್ ಕ್ಲಿಂಟನ್, ಜಾರ್ಜ್ ಡಬ್ಲ್ಯೂ ಬುಷ್ ಮತ್ತು ಬರಾಕ್ ಒಬಾಮಾ, ಬಿಲ್ ಕ್ಲಿಂಟನ್ ಪತ್ನಿ ಹಿಲರಿ ಕ್ಲಿಂಟನ್, ನಿರ್ಗಮಿತ ಅಧ್ಯಕ್ಷ ಜೋ ಬೈಡೆನ್, ನಿರ್ಗಮಿತ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಇತರೆ ಘಟಾನುಘಟಿ ನಾಯಕರು ಪಾಲ್ಗೊಂಡಿದ್ದರು.

ಹಿಂದೆಂದಿಗಿಂತಲೂ ಬಲಿಷ್ಠರಾಗಲಿದ್ದೇವೆ: ನಾವು ಹಿಂದೆಂದಿಗಿಂತಲೂ ಬಲಿಷ್ಠವಾಗಿ ಹಿಂದಿರುಗಲಿದ್ದೇವೆ ಎಂದು ಡೊನಾಲ್ಡ್ ಟ್ರಂಪ್ ಇದೇ ಸಂದರ್ಭದಲ್ಲಿ ಹೇಳಿದ್ದಾರೆ. ಅಮೆರಿಕ ಇಷ್ಟರಲ್ಲೇ ಶ್ರೇಷ್ಠ, ಬಲಶಾಲಿ ಹಾಗೂ ಅಸಾಧಾರಣ ಶಕ್ತಿಯಾಗಿ ಹೊರ ಹೊಮ್ಮಲಿದೆ. ನಾನು ಅತ್ಯಂತ ಆತ್ಮವಿಶ್ವಾಸದಿಂದ ಹಾಗೂ ಆಶಾವಾದಿಯಾಗಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಹಿಂದಿರುಗಿದ್ದೇನೆ. ಇಡೀ ಪ್ರಪಂಚದ ಮೇಲೆ ಸೂರ್ಯನ ಬೆಳಕು ಬೀಳುತ್ತದೆ. ಅಂತಹದ್ದೇ ಅವಕಾಶವನ್ನು ಅಮೆರಿಕ ಸಹ ಪಡೆಯಲಿದೆ. ಅಮೆರಿಕ ದೇಶಕ್ಕೆ ಈಗ ಇರುವ ಅವಕಾಶವನ್ನು ಹಿಂದೆಂದಿಗಿಂತಲೂ ಹೆಚ್ಚು ಉತ್ತಮವಾಗಿ ಬಳಸಿಕೊಳ್ಳುವ ಅವಕಾಶ ಸಿಕ್ಕಿದೆ. ಇದನ್ನು ಸಮರ್ಥವಾಗಿ ಬಳಸಿಕೊಳ್ಳೋಣ ಎಂದಿದ್ದಾರೆ.

ಅಮೆರಿಕನ್ನರ ಕನಸು ನನಸಾಗಲಿದೆ: ಇನ್ನು ಇದೇ ಸಂದರ್ಭದಲ್ಲಿ ಅವರು ಅಮೆರಿಕನ್ನರ ಕನಸು ನನಸಾಗಲಿದೆ. ಅವರು ಹಿಂದಿನಂತೆ ಹೆಮ್ಮೆ ಪಡುವ ದಿನಗಳು ಮರಳಿ ಬರಲಿವೆ. ತೆರಿಗೆ ನೀತಿ, ವಾಕ್ ಸ್ವಾತಂತ್ರ್ಯ ಸೇರಿದಂತೆ ಹಲವು ವಿಷಯಗಳ ಬಗ್ಗೆ ಈ ವೇಳೆ ಮಾತನಾಡಿದ್ದಾರೆ.

ಆದಾಯ ಮೂಲ ಹಾಗೂ ವಿದೇಶಿ ವಸ್ತುಗಳಿಗೆ ವಿಧಿಸುವ ತೆರಿಗೆಯ ಬಗ್ಗೆಯೂ ಸುಳಿವು ಕೊಟ್ಟಿದ್ದಾರೆ. ಅಮೆರಿಕನ್ನರ ಕನಸು ಇಷ್ಟರಲ್ಲೇ ಈಡೇರಲಿದೆ. ಅಮೆರಿಕದಲ್ಲಿ ಈಗಾಗಲೇ ವಾಕ್ ಸ್ವಾತಂತ್ರ್ಯವನ್ನು ಅಮೆರಿಕದ ಸಂವಿಧಾನದ ಮೂಲಕ ರಕ್ಷಿಸಲಾಗಿದೆ. ನಾವು ಇನ್ನಷ್ಟು ಎತ್ತರಕ್ಕೆ ಈ ವಿಷಯವನ್ನು ತೆಗೆದುಕೊಂಡು ಹೋಗಲಿದ್ದೇವೆ ಎಂದಿದ್ದಾರೆ.

ವಲಸೆಗಾರರ ಹೊರ ಹಾಕ್ತೇವೆ: ಅಮೆರಿಕಾ ದಕ್ಷಿಣ ಗಡಿಯಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ. ಮೆಕ್ಸಿಕೋ– ಅಮೇರಿಕಾ ಗಡಿ ಭಾಗದಲ್ಲಿ ಅಮೇರಿಕಾ ಸೇನೆಯನ್ನು ನಿಯೋಜಿಸಲಾಗುತ್ತದೆ, ಈ ಮೂಲಕ ಅಕ್ರಮ ನುಸುಳುಕೋರರಿಗೆ ಬಾಗಿಲು ಬಂದ್ ಆಗಲಿದೆ. ಈಗಾಗಲೇ ಅಮೇರಿಕಾ ಪ್ರವೇಶಿಸಿರುವ ಅಕ್ರಮ ನುಸುಳುಕೋರರನ್ನು ಹೊರಹಾಕುತ್ತೇವೆ. ಮೆಕ್ಸಿಕೋ ಗಡಿಯಲ್ಲಿ ಗೋಡೆ ನಿರ್ಮಿಸುವ ಕೆಲಸ ನಡೆಯಲಿದೆ ಎಂದು ಘೋಷಿಸಿದ್ದಾರೆ. ಅಮೇರಿಕಾ ಸೇನೆಯನ್ನು ಬಲಪಡಿಸುವುದು ನಮ್ಮ ಗುರಿ 2017ರಂತೆ ಜಗತ್ತಿನ ಬಲಿಷ್ಠ ಸೇನೆಯನ್ನು ನಿರ್ಮಿಸುತ್ತೇವೆ ಎಂದು ಟ್ರಂಪ್ ಇದೇ ವೇಳೆ ಹೇಳಿದ್ದಾರೆ. ಸರ್ಕಾರದ ಪಾರದರ್ಶಕತೆಗಾಗಿ ಇಲಾಖೆಯನ್ನು ಸ್ಥಾಪಿಸುತ್ತೇವೆ, ಭಯೋತ್ಪಾದನೆಯನ್ನು ಮಟ್ಟ ಹಾಕುತ್ತೇವೆ ಎಂದು ಟ್ರಂಪ್ ತಿಳಿಸಿದ್ದಾರೆ. ಇನ್ನು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ಭಾರತ ಸೇರಿದಂತೆ ಹಲವು ದೇಶಗಳು ಅಮೇರಿಕಾ ಉತ್ಪನ್ನಗಳಿಗೆ ಹೆಚ್ಚಿನ ತೆರಿಗೆ ವಿಧಿಸುವುದನ್ನು ವಿರೋಧಿಸಿ ನಾವೂ ಪ್ರತೀಕಾರಕ್ಕೆ ಮುಂದಾಗುತ್ತೇವೆ ಎಂದು ಹೇಳಿದ್ದರು. ಅದರಂತೆ ಅನ್ಯ ದೇಶಗಳಿಗೆ ಹೆಚ್ಚಿನ ತೆರಿಗೆ ವಿಧಿಸುವ ಬಗ್ಗೆ ತಮ್ಮ ಮೊದಲ ಭಾಷಣದಲ್ಲಿ ಡೊನಾಲ್ಡ್ ಟ್ರಂಪ್ ಸುಳಿವು ನೀಡಿದ್ದು, ಅಮೇರಿಕಾದ ಜನರ ಒಳಿತಿಗಾಗಿ ಈ ಕ್ರಮ ಕೈಗೊಳ್ಳಲಿದ್ದೇವೆ ಎಂದು ಹೇಳಿದ್ದಾರೆ.

ನಾಲೆ, ನದಿ, ಜಲಾಶಯ ಮಾರ್ಗದಲ್ಲಿ ನೀರಿನ ಪೈಪ್ ಹಾಕಿದರೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಉಪಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ವಿಶ್ವನಾಥ ರೆಡ್ಡಿ ಸೂಚನೆ

ಮೈಸೂರುಜ.20(ಎಂಟಿವೈ)– ನಾಲೆ, ನದಿ, ಜಲಾಶಯಗಳ ಮಾರ್ಗದಲ್ಲಿ ಕಾನೂನು ಬಾಹಿರವಾಗಿ ನೀರಿನ ಪೈಪ್ ಹಾಕುವುದನ್ನು ಕಟ್ಟುನಿಟ್ಟಾಗಿ ತಡೆದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಎಂದು ಉಪ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ವಿಶ್ವನಾಥ್ ರೆಡ್ಡಿ ಸೂಚನೆ ನೀಡಿದ್ದಾರೆ.

ಜಲಸಂಪನ್ಮೂಲ ಇಲಾಖೆ ವತಿಯಿಂದ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ನೀರಾವರಿ (ತಿದ್ದುಪಡಿ) ಅಧಿನಿಯಮ2024 ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಲಸಂಪನ್ಮೂಲ ಇಲಾಖೆ ರೂಪಿಸಿರುವ ಹೊಸ ನಿಯಮಗಳು ಇನ್ನೆರಡು ವಾರದಲ್ಲಿ ಜಾರಿಯಾಗಲಿದ್ದು, ಅಧಿಕಾರಿಗಳು ತಮಗಿರುವ ಅಧಿಕಾರವನ್ನು ಬಳಸಿಕೊಂಡು ಅಕ್ರಮವನ್ನು ತಡೆಗಟ್ಟಬೇಕು ಎಂದರು.



ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ಜಲಸಂಪನ್ಮೂಲ ಇಲಾಖೆ ವತಿಯಿಂದ ಆಯೋಜಿಸಿದ್ದ ಕರ್ನಾಟಕ ನೀರಾವರಿ (ತಿದ್ದುಪಡಿ) ಅಧಿನಿಯಮ2024 ಕುರಿತ ಕಾರ್ಯಾಗಾರವನ್ನು ಉಪ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ವಿಶ್ವನಾಥ್ ರೆಡ್ಡಿ ಉದ್ಘಾಟಿಸಿದರು.

ಹೊಸ ಕಾನೂನಿನ ಪ್ರಕಾರ ನೀರಾವರಿ ಬಳಕೆದಾರರನು ನಾಲೆಯ ಮಧ್ಯ ಭಾಗದಿಂದ ಐದು ನೂರು ಮೀಟರ್ ವರೆಗೆ ನಾಲೆಯ ಎರಡೂ ಬದಿಗಳಲ್ಲಿ ಬಾವಿಯನ್ನು ಕೊರೆಯಲು ಅಥವಾ ತೆಗೆಯಲು, ಕೃತಕ ಕೊಳವನ್ನು, ಯಾವುದೇ ರೀತಿಯ ನೀರಿನ ಸಂಗ್ರಹವನ್ನು ನೀರಾವರಿ ಇಲಾಖೆಗೆ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆಯಬೇಕು. ನಾಲೆ ಮತ್ತು ಕೊಳವೆಯನ್ನು ಮುಚ್ಚುವುದು ಅಥವಾ ಕತ್ತರಿಸುವುದು, ನಾಲೆಯನ್ನು ಮುಚ್ಚಲು ಪ್ರಯತ್ನಿಸುವುದು, ನಾಲೆಯ ಗೋಡೆಯನ್ನು ಹಾನಿಗೊಳಿಸುವ ಮೂಲಕ ಯಂತ್ರ ಇತರೆ ಉಪಕರಣಗಳನ್ನು ಇಡುವುದು ಮಾಡಿದರೆ ಎರಡು ಲಕ್ಷದವರೆಗೆ ದಂಡ ವಿಧಿಸಬಹುದಾಗಿದೆ ಎಂದು ಎಚ್ಚರಿಸಿದರು.

ಕಾರ್ಯಾಗಾರದಲ್ಲಿ ಕರ್ನಾಟಕ ನೀರಾವರಿ ಅಧಿನಿಯಮ–2024 ಮುನ್ನುಡಿ ಮತ್ತು ಅವಲೋಕನ ಕುರಿತು ಉಪಮುಖ್ಯಮಂತ್ರಿ ತಾಂತ್ರಿಕ ಸಲಹೆಗಾರ ಕೆ.ಜೈಪ್ರಕಾಶ್, ಅಧಿನಿಯಮದ ಪ್ರಮುಖಾಂಶಗಳು ಕುರಿತು ಕರ್ನಾಟಕ ನೀರಾವರಿ ನಿಗಮ ನಿಯಮಿತದ ಕಂಪನಿ ಕಾರ್ಯದರ್ಶಿ ಎಂ.ಎಸ್.ಗಿರೀಶ್, ಅರೆ ನ್ಯಾಯಾಂಗ ಕಾರ್ಯ ವಿಧಾನ ಕುರಿತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಸುನಿಲ್ ಹೆಗಡೆ ವಿಷಯ ಮಂಡಿಸಿದರು. ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಆರ್.ಎಲ್. ವೆಂಕಟೇಶ್, ನೀರಾವರಿ ಇಲಾಖೆ ಮುಖ್ಯ ಇಂಜಿನಿಯರ್ ಬಿ.ಎನ್.ಫಣಿರಾಜ್, ಜಲಸಂಪನ್ಮೂಲ ಇಲಾಖೆ ಜಂಟಿ ಕಾರ್ಯದರ್ಶಿ ಸುಜಾತ ಎಲ್. ಜಾಧವ್, ಕರ್ನಾಟಕ ಇಂಜಿನಿಯರ್ ಸಂಶೋಧನಾ ಸಂಸ್ಥೆ ನಿರ್ದೇಶಕ ಕೆ.ಜಿ. ಮಹೇಶ್, ಹೇಮಾವತಿ ಯೋಜನಾ ವಲಯ ಮುಖ್ಯ ಇಂಜಿನಿಯರ್ ಜಿ.ಸಿ. ಮಂಜುನಾಥ್, ಸಣ್ಣ ನೀರಾವರಿ ಮತ್ತು ಅಂತರ್ಜಲ ವೃತ್ತ ಅಧೀಕ್ಷಕ ಇಂಜಿನಿಯರ್ ಪ್ರಶಾಂತ್ ಬಿ.ಗಡದಾನಪ್ಪಗೋಳ್, ಕಾಡಾ ಆಡಳಿತಾಧಿಕಾರಿ ಶಿವ ಮಹದೇವಯ್ಯ ಪಾಲ್ಗೊಂಡಿದ್ದರು.

ಕೋಲ್ಕತ್ತಾ ವೈದ್ಯೆಯ ಅತ್ಯಾಚಾರ, ಕೊಲೆ ಪ್ರಕರಣ

ದೋಷಿ ಸಂಜಯ್ ರಾಯ್‌ಗೆ ಜೀವಾವಧಿ ಶಿಕ್ಷೆ

ಕೋಲ್ಕತ್ತಾ,ಜ.20–ಕೋಲ್ಕತ್ತಾದ ಟ್ರೈನಿ ವೈದ್ಯೆ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ದೋಷಿ ಸಂಜಯ್ ರಾಯ್‌ಗೆ ಕೋಲ್ಕತ್ತಾದ ಕೋರ್ಟ್ ಜೀವಾವಧಿ ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿದೆ.



ಅದೇ ವೇಳೆ ಸಂತ್ರಸ್ತೆ ಪೋಷಕರಿಗೆ 17 ಲಕ್ಷ ರೂಪಾಯಿ ಪರಿಹಾರವನ್ನು ಪಶ್ಚಿಮ ಬಂಗಾಳ ಸರ್ಕಾರ ನೀಡಬೇಕು ಎಂದು ಸೂಚಿಸಿದೆ. ಇದು ಮರಣದಂಡನೆ ವಿಧಿಸುವಂತಹ ಅಪರೂಪದಲ್ಲಿ ಅಪರೂಪದ ಪ್ರಕರಣವಲ್ಲ ಎಂದು ಕೋಲ್ಕತ್ತಾದ ಸೀಲ್ದಾ ಸಿಬಿಐ ಕೋರ್ಟ್ ಸೋಮವಾರ ತನ್ನ ತೀರ್ಪು ಪ್ರಕಟ ಮಾಡಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಕೋಲ್ಕತ್ತಾದ ಆರ್‌ಜಿ ಖಾರ್ ಆಸ್ಪತ್ರೆಯಲ್ಲಿ ಟ್ರೇನಿ ವೈದ್ಯೆಯ ಅತ್ಯಾಚಾರ, ಕೊಲೆ ನಡೆದಿತ್ತು. ಅದರ ಮರುದಿನ ಪೊಲೀಸರು ಆರೋಪಿ ಸಂಜಯ್ ರಾಯ್‌ರನ್ನು ಬಂಧಿಸಿದ್ದರು. ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸಂಜಯ್ ರಾಯ್ ಕೆಲಸ ಮಾಡುತ್ತಿದ್ದ. ಪ್ರಕರಣದ ವಿಚಾರಣೆ ನಡೆಸಿದ್ದ ಕೋರ್ಟ್, ಕಳೆದ ಶನಿವಾರ ಈತನ್ನು ದೋಷಿ ಎಂದು ತೀರ್ಪು ನೀಡಿತ್ತು. ಸೀಲ್ದಾ ನ್ಯಾಯಾಲಯದ ನ್ಯಾಯಾಧೀಶ ಅನಿರ್ಬನ್ ದಾಸ್ ಅವರು ಸೋಮವಾರ ಈ ತೀರ್ಪನ್ನು ಪ್ರಕಟಿಸಿದರು.

ಬೇಕಿರುವುದು 17 ಲಕ್ಷ ರೂ ಪರಿಹಾರವಲ್ಲ

ಜಡ್ಜ್ ಮುಂದೆ ಕಣ್ಣೀರಿಟ್ಟ ಕೋಲ್ಕತಾ ವೈದ್ಯೆ ಸಂತ್ರಸ್ತೆ ಪೋಷಕರು

ಕೋಲ್ಕತಾ,ಜ.20–ಕೋಲ್ಕತ್ತಾದ ಆರ್‌ಜಿ ಕರ್ ವೈದ್ಯೆ ಪ್ರಕರಣ ದೇಶಾದ್ಯಂತ ಭಾರೀ ಪ್ರತಿಭಟನೆಗೆ ಕಾರಣವಾಗಿತ್ತು. ವೈದ್ಯೆ ಮೇಲೆ ರಾತ್ರಿ ನಡೆದ ಭೀಕರ ಘಟನೆ ಸಂಬಂಧ ಇದೀಗ ಸೆಲ್ಡಾ ಕೋರ್ಟ್ ಅಪರಾಧಿ ಸಂಜಯ್ ರಾಯ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಇತ್ತ ಸಂತ್ರಸ್ತೆ ಪೋಷಕರಿಗೆ 17 ಲಕ್ಷ ರೂಪಾಯಿ ಪರಿಹಾರವನ್ನು ಪಶ್ಚಿಮ ಬಂಗಾಳ ಸರ್ಕಾರ ನೀಡಬೇಕು ಎಂದು ಸೂಚಿಸಿದೆ. ಆದರೆ ಜಡ್ಜ್ ಶಿಕ್ಷೆ ಪ್ರಮಾಣ ಪ್ರಕಟಿಸುತ್ತಿದ್ದಂತೆ 34 ವರ್ಷದ ಸಂತ್ರಸ್ತ ವೈದ್ಯೆ ಪೋಷಕರು ಕಣ್ಣೀರಿಟ್ಟಿದ್ದಾರೆ. ನಮಗೆ ಬೇಕಿರುವುದು 17 ಲಕ್ಷ ರೂಪಾಯಿ ಪರಿಹಾರವಲ್ಲ, ನ್ಯಾಯ ಮಾತ್ರ. ನಮ್ಮ ಮಗಳಿಗೆ ಬದುಕು ಕಟ್ಟಿಕೊಡಲು ನಮಗೆ ಸಾಧ್ಯವಾಗಲಿಲ್ಲ. ಇದೀಗ ಅವಳ ಆತ್ಮಕ್ಕೆ ಶಾಂತಿ ಸಿಗಲು ನ್ಯಾಯ ಮಾತ್ರ ಸಾಕು ಎಂದು ಕಣ್ಣೀರಿಟ್ಟಿದ್ದಾರೆ.

ಪೋಷಕರ ಕಣ್ಣೀರಿಗೆ ಉತ್ತರಿಸಿದ ಜಡ್ಜ್, ಕೋರ್ಟ್ ತೀರ್ಪು ನೀಡಿದೆ. ಈ ಮೊತ್ತ ಬಳಸಲು ನೀವು ಸ್ವತಂತ್ರರು. ಈ ಮೊತ್ತವನ್ನು ಪರಿಹಾರ ಎಂದು ಪರಿಗಣಿಸಬೇಡಿ. ಇದು ಕಾನೂನಿನ ಅಡಿಯಲ್ಲಿ ನಿಮಗೆ ಒದಗಿಸಿರುವ ನಿಬಂಧನೆ ಎಂದು ಜಡ್ಜ್ ಅನಿರ್ಬಾನ್ ದಾಸ್ ಹೇಳಿದ್ದಾರೆ. ಇತ್ತ ಕಣ್ಣೀರಿಡುತ್ತಲೆ ಮನವಿ ಮಾಡಿದ ಸಂತ್ರಸ್ತೆ ಪೋಷಕರು, ಈ ಪರಿಹಾರ ಹಣ ನಮಗೆ ಬೇಡ. ಈ ಕೃತ್ಯ ಸಂಜಯ್ ರಾಯ್ ಒಬ್ಬನೇ ಮಾಡಿಲ್ಲ ಅನ್ನೋದು ನಮ್ಮ ದೃಢವಾದ ನಂಬಿಕೆ. ನಮ್ಮ ಮಗಳ ಮೇಲೆ ಎರಗಿದ ಎಲ್ಲರಿಗೂ ಶಿಕ್ಷೆಯಾಗಬೇಕು. ಎಲ್ಲರಿಗೂ ಗಲ್ಲು ಶಿಕ್ಷೆಯಾಗಬೇಕು ಎಂದು ಮನವಿ ಮಾಡಿದ್ದಾರೆ.

ಇದು ಅಪರೂಪದಲ್ಲಿ ಅಪರೂಪದ ಪ್ರಕರಣವಲ್ಲ ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿಯೇ ನಾನು ನಿಮಗೆ ಸಾಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸುತ್ತಿದ್ದೇನೆ ಎಂದು ನ್ಯಾಯಾಧೀಶರು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸುತ್ತಾ ಹೇಳಿದರು. ಶನಿವಾರದ ವಿಚಾರಣೆಯ ಸಮಯದಲ್ಲಿ ಶಿಕ್ಷೆಯ ಪ್ರಮಾಣದ ಬಗ್ಗೆ ಏನಾದರೂ ಹೇಳಲು ಇದೆಯೇ ಎಂದು ನ್ಯಾಯಾಧೀಶರು ಪ್ರಶ್ನೆ ಮಾಡಿದ್ದಾಗ, ಸಂಜಯ್ ರಾಯ್ ತಾವು ನಿರಪರಾಧಿ ಎಂದು ಹೇಳಿಕೊಂಡಿದ್ದ. ಯಾವುದೇ ಕಾರಣವಿಲ್ಲದೆ ನನ್ನನ್ನು ಆರೋಪಿಸಲಾಗಿದೆ. ನಾನು ಯಾವಾಗಲೂ ರುದ್ರಾಕ್ಷ ಸರಪಳಿಯನ್ನು ಧರಿಸುತ್ತೇನೆ ಎಂದು ನಿಮಗೆ ಮೊದಲೇ ಹೇಳಿದ್ದೆ. ನಾನು ಅಪರಾಧ ಮಾಡಿದ್ದರೆ, ಅದು ಅಪರಾಧದ ಸ್ಥಳದಲ್ಲಿ ಮುರಿಯುತ್ತಿತ್ತು. ನನಗೆ ಮಾತನಾಡಲು ಅವಕಾಶವಿರಲಿಲ್ಲ. ಅವರು ನನ್ನನ್ನು ಅನೇಕ ದಾಖಲೆಗಳಿಗೆ ಸಹಿ ಹಾಕುವಂತೆ ಒತ್ತಾಯಿಸಿದರು. ನನಗೆ ಮಾತನಾಡಲು ಅವಕಾಶ ನೀಡಲಿಲ್ಲ ಎಂದು ರಾಯ್ ಹೇಳಿದ್ದ.

ನಾಳೆಯಿಂದ ಸ್ವದೇಶಿ ಮೇಳ ಆರಂಭ

ಮೈಸೂರು, ಜ.20(ಬಿಎಲ್‌ಯು)– ಭಾರತದ ದೇಶಿ ಉತ್ಪನ್ನಗಳನ್ನು ಒಂದೇ ಸೂರಿನಡಿ ಕಲ್ಪಿಸುವ ಸ್ವದೇಶಿ ಮೇಳ ಜನವರಿ 22ರಿಂದ ಆರಂಭವಾಗಲಿದೆ ಎಂದು ಮೇಳದ ಸಂಚಾಲಕ ಎನ್.ಆರ್.ಮಂಜುನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜನವರಿ 22 ರಿಂದ 26 ರವರೆಗೆ ಐದು ದಿನಗಳ ಕಾಲ ನಡೆಯುವ ಸ್ವದೇಶಿ ಮೇಳವನ್ನು ಶಿಲ್ಪಿ ಅರುಣ್ ಯೋಗಿರಾಜ್ ಉದ್ಘಾಟಿಸಲಿದ್ದು, ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸಾನಿಧ್ಯ ವಹಿಸಲಿದ್ದಾರೆ. ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್.ಶ್ರೀವತ್ಸ, ಹರೀಶ್ ಗೌಡ ಉಪಸ್ಥಿತರಿರುವರು ಎಂದರು.

ಮೇಳದಲ್ಲಿ ದೇಶಿ ಉತ್ಪನ್ನಗಳ ಮಹತ್ವ ಪರಿಚಯಿಸುವ ಹಲವು ವಿಚಾರ ಗೋಷ್ಠಿ ಆಯೋಜಿಸಲಾಗಿದ್ದು, ಪ್ರತಿ ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಕೂಡ ಏರ್ಪಡಿಸಲಾಗಿದೆ ಎಂದು ಹೇಳಿದರು.

ಭಾರತೀಯ ಪಾರಂಪರಿಕ ಉಡುಗೆಯಾದ ಸೀರೆಯುಟ್ಟು ಮೇಳಕ್ಕೆ ಬರುವ ಮಹಿಳೆಯರಿಗೆ ಲಕ್ಕಿ ಡಿಪ್ ಮೂಲಕ ಪ್ರತಿ ನಿತ್ಯ ಮೂವರಿಗೆ ಸೌಭಾಗ್ಯವತಿ ಸೀರೆ ಉಡುಗೊರೆ ನೀಡಲಾಗುವುದು. ಜನವರಿ 26ರಂದು ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭಾಗ ವಹಿಸಲಿದ್ದಾರೆ ಎಂದು ಮಂಜುನಾಥ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸ್ವದೇಶಿ ಜಾಗರಣ ಮಂಚ್‌ನ ಶಿವು, ಸಿದ್ದರಾಜು, ಜಿ.ಆರ್.ಶ್ರೀವತ್ಸ ಉಪಸ್ಥಿತರಿದ್ದರು.

ನಾಮಪತ್ರ ಸಲ್ಲಿಕೆ...



ಮೈಸೂರು ತಾಲೂಕು ಪ್ರಾಥಮಿಕ ಸಹಕಾರ ಸಂಘದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ ಇಲವಾಲ ಕ್ಷೇತ್ರದಿಂದ ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಐಎನ್‌ಬಿಸಿಡಬ್ಲುಯುಎಫ್‌ನ ಯುವ ಘಟಕದ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ವೀರೇಗೌಡ, ಚೆಲುವರಾಜು, ಶಿವಕುಮಾರ್, ಕುಮಾರ್, ಮಹದೇವು, ದೇವರಾಜು, ಮಂಜು ಇನ್ನಿತರರಿದ್ದಾರೆ.

ಇಂದಿನಿಂದಲೇ ಮದ್ಯದ ದರ ಏರಿಕೆ

ಬೆಂಗಳೂರು: ಬಜೆಟ್‌ಗೆ ಮೊದಲೇ ಮದ್ಯದ ದರ 10 ರೂ.ನಿಂದ 45 ರೂ.ವರೆಗೂ ಬೆಲೆ ಏರಿಕೆಯಾಗಿದ್ದು ಇಂದಿನಿಂದಲೇ ಪರಿಷ್ಕೃತ ದರ ಜಾರಿಯಾಗಿದೆ.




ಸಾಧಾರಣವಾಗಿ ಬಜೆಟ್‌ನಲ್ಲಿ ಮದ್ಯದ ಮೇಲೆ ಅಬಕಾರಿ ತೆರಿಗೆ ಹಾಕಲಾಗುತ್ತದೆ. ಆದರೆ ಈ ಬಾರಿ ಬಜೆಟ್ ಮಂಡನೆಯಾಗುವ ಮೊದಲೇ ದರ ಏರಿಕೆಯಾಗಿದೆ. ಕಳೆದ 6 ತಿಂಗಳ ಹಿಂದೆ ಆಮದು ವಸ್ತುಗಳ ಮೇಲೆ ಬೆಲೆ ಏರಿಕೆ ಮಾಡಲಾಗಿತ್ತು. ಇದೀಗ ಸುಂಕವನ್ನು ಸರ್ಕಾರ ಹೆಚ್ಚಳ ಮಾಡಿದೆ. ದುಬಾರಿ ಬೆಲೆಯ ಬಿಯರ್ ದರ ಏರಿಕೆಯಾಗಿಲ್ಲ. ಬದಲಾಗಿ 300 ರೂ. ಒಳಗಡೆ ಇರುವ ಮದ್ಯದ ದರವನ್ನು ಅಬಕಾರಿ ಇಲಾಖೆ ಏರಿಸಿದೆ.

ಲೆಜೆಂಡ್	– 145 (100)
ಪವರ್ ಕೂಲ್	– 155 (130)
ಬ್ಲ್ಯಾಕ್ ಫೋರ್ಟ್	– 160 (145)
ಹಂಟರ್	– 190 (180)
ವುಡ್‌ಪೆಕರ್ ಕ್ರೆಸ್ಟ್	– 250 (240)
ವುಡ್‌ಪೆಕರ್ ಗ್ಲೈಡ್	– 240 (230)

ಫೆ.1ಕ್ಕೆ ಮಡಿವಾಳ ಮಾಚಿದೇವರ ಜಯಂತಿ

ಮೈಸೂರು,ಜ.20–ಮೈಸೂರಿನ ಕರ್ನಾಟಕದ ಕಲಾಮಂದಿರದಲ್ಲಿ ಫೆ.1ರಂದು ಬೆಳಗ್ಗೆ 11.30ಕ್ಕೆ 'ಮಡಿವಾಳ ಮಾಚಿದೇವರ ಜಯಂತಿ'ಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ತಿಳಿಸಿದರು.



ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತಿ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನ ಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮಡಿವಾಳ ಮಾಚಿದೇವ ಸಮಿತಿಯ ಮುಖಂಡರು ಉಪಸ್ಥಿತರಿದ್ದರು.

ವಿಶ್ವಮಾನವ ಜೋಡಿ ರಸ್ತೆಯಲ್ಲಿ ವಾಹನಗಳ ನಿಲುಗಡೆ ನಿಷೇಧ

ಮೈಸೂರು,ಜ.20– ಮೈಸೂರು ನಗರದ ಕೃಷ್ಣರಾಜ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವಿಶ್ವಮಾನವ ಜೋಡಿ ರಸ್ತೆಯ ರಾಮಕೃಷ್ಣ ಪರಮಹಂಸ ವೃತ್ತದಿಂದ ಕೆ.ಇ.ಬಿ ಜಂಕ್ಷನ್‌ವರೆಗೆ ಹೋಟೆಲ್‌ಗಳು, ದೇವಸ್ಥಾನ, ಗ್ಯಾರೇಜ್ ಮತ್ತು ವಾಣಿಜ್ಯ ಮಳಿಗೆಗಳಿದ್ದು, ಸದರಿ ರಸ್ತೆಯ ಎರಡೂ ಕಡೆಗಳಲ್ಲಿ ಸೈಕಲ್ ಸವಾರರ ಸಂಚಾರಕ್ಕಾಗಿ ಸೈಕಲ್ ಪಥ ಹಾದು ಹೋಗಿರುತ್ತದೆ. ಅಲ್ಲದೇ ರಾಮಕೃಷ್ಣ ಪರಹಂಸ ವೃತ್ತದಿಂದ ಕೆ.ಇ.ಬಿ ಜಂಕ್ಷನ್‌ವರೆಗಿನ ರಸ್ತೆಯು ತಿರುವಿನಿಂದ ಕೂಡಿದ್ದು, ಸದರಿ ಮಾರ್ಗದ ಮಧ್ಯೆ ಕಿಂಗ್ ಕಾಫಿ ಕೋ ಎಂಬ ಕಾಫಿ ಶಾಪ್, ಗ್ಯಾರೇಜ್‌ಗಳು ಹಾಗೂ ಇತರೆ ಪ್ರಮುಖ ವಾಣಿಜ್ಯ ಮಳಿಗೆಗಳಿಗೆ ಬರುವ ಗ್ರಾಹಕರು ತಮ್ಮ ವಾಹನಗಳನ್ನು ಸೈಕಲ್ ಪಥಕ್ಕೆ ಹೊಂದಿಕೊಂಡಂತೆ ರಸ್ತೆಯಲ್ಲೇ ನಿಲ್ಲಿಸುತ್ತಿರುವುದರಿಂದ ಸೈಕಲ್ ಸವಾರರಿಗೆ ಮತ್ತು ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯುಂಟಾಗುತ್ತಿರುವುದರಿಂದ ರಾಮಕೃಷ್ಣ ಪರಮಹಂಸ ವೃತ್ತದಿಂದ ಕೆ.ಇ.ಬಿ ಜಂಕ್ಷನ್‌ವರೆಗಿನ 300 ಮೀಟರ್ ವರೆಗಿನ ವಿಶ್ವಮಾನವ ಜೋಡಿ ರಸ್ತೆಯ ಎರಡೂ ಭಾಗಗಳಲ್ಲಿ ನಗರದ ಸಾರ್ವಜನಿಕ ಸುರಕ್ಷತಾ ದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಸುಗಮ ಸಂಚಾರ್ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ವಾಹನ ನಿಲುಗಡೆಯನ್ನು ನಿಷೇಧಿಸಿದೆ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ರಂಗಭೂಮಿಯ ವಿಶಿಷ್ಟ ಗೌರವಕ್ಕೆ ಈ ಮಣ್ಣಿನ ಗುಣ ಕಾರಣ

● ರಂಗಕರ್ಮಿ, ನಟ ಮಂಡ್ಯ ರಮೇಶ್ ಅಭಿಮತ ● ನಾಲ್ವರು ಸಾಧಕರಿಗೆ ರೋಟರಿ–ಕದಂಬ ರಂಗ ಪ್ರಶಸ್ತಿ ಪ್ರದಾನ

ಮೈಸೂರು,ಜ.20–ಇಡೀ ವಿಶ್ವದಲ್ಲಿಯೇ ಕನ್ನಡ ರಂಗಭೂಮಿಗೆ ಸಿಕ್ಕಿರುವ ವಿಶಿಷ್ಟ ಗೌರವಕ್ಕೆ ಇಲ್ಲಿನ ಮಣ್ಣಿನ ಗುಣ ಹಾಗೂ ಜಾನಪದ ಸೊಗಡು ಕಾರಣ ಎಂದು ಚಲನಚಿತ್ರ ಹಾಗೂ ರಂಗಭೂಮಿ ನಟ ಮಂಡ್ಯ ರಮೇಶ್ ಹೇಳಿದರು.

ರೋಟರಿ ಮೈಸೂರು ಉತ್ತರ ಹಾಗೂ ಕದಂಬ ರಂಗವೇದಿಕೆಯ ಜೆಎಲ್‌ಬಿ ರಸ್ತೆಯ ಎಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಏರ್ಪಡಿಸಿದ್ದ ರೋಟರಿ–ಕದಂಬ ರಂಗ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೈಸೂರಿನಲ್ಲಿ ರಾಜರ ಕಾಲದಿಂದಲೂ ನಾಟಕಕ್ಕೆ ಪ್ರೋತ್ಸಾಹ ಸಿಗುತ್ತಿದೆ. ಗುಬ್ಬಿ ವೀರಣ್ಣ ಕಂಪನಿಯನ್ನು ಕರೆಸಿ, ಜಗನ್ಮೋಹನ ಅರಮನೆಯಲ್ಲಿ ರಾಜರು ನಾಟಕ ಮಾಡಿಸಿ, ಪ್ರೋತ್ಸಾಹಿಸಿದ್ದರು. ಈಗಲೂ ಒಳ್ಳೆಯ ನಾಟಕಗಳನ್ನು ಪ್ರದರ್ಶಿಸಿದರೆ ಜನ ಖಂಡಿತಾ ಬೆಂಬಲ ನೀಡುತ್ತಾರೆ. ಉತ್ತಮ ನಾಟಕಕ್ಕೆ ಸೋಲೇ ಇಲ್ಲ. ಜನ ಬಂದೇ ಬರುತ್ತಾರೆ ಎಂದು ಹೇಳಿದರು.

ಸುಳ್ಳನ್ನು ಹೇಳುತ್ತಲೆ ಸತ್ಯವನ್ನು ಅನಾವರಣ ಮಾಡಿ ಅದನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸವನ್ನು ರಂಗಭೂಮಿ ಮಾಡುತ್ತಿದೆ. ಆ ಮೂಲಕ ಉತ್ತಮ ಸಂಸ್ಕಾರ ರೂಪಿಸಲು ನೆರವಾಗುತ್ತಿದೆ ಎಂದರು. ನಾನು ಬಿಡುವಿದ್ದಾಗ ಇತರರ ನಾಟಕವನ್ನು ನೋಡುತ್ತೇನೆ. ಅದೇ ರೀತಿ ಪೋಷಕರು ಮಕ್ಕಳಿಗೆ ಕನ್ನಡದ ಜೊತೆಗೆ ಇತರ ಭಾಷೆಗಳನ್ನು ಕಲಿಸಬೇಕು. ಆದರೆ ಕನ್ನಡಕ್ಕೆ ಆದ್ಯತೆ ನೀಡಬೇಕು. 'ಒಬಮಾ' [ಓದುವುದು, ಬರೆಯುವುದು, ಮಾತನಾಡುವುದು] ಮೂಲಕ ಕನ್ನಡವನ್ನು ಉಳಿಸಿ, ಬೆಳೆಸುವ ಕೆಲಸ ಮಾಡಬೇಕು ಎಂದು ಮಂಡ್ಯ ರಮೇಶ್ ಕರೆ ನೀಡಿದರು.



ಮೈಸೂರಿನ ಎಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯು.ಎಸ್.ರಾಮಣ್ಣ, ಅಶ್ವತ್ಥ್ ಕದಂಬ, ಎನ್. ಧನಂಜಯ ಹಾಗೂ ದಿಶಾ ರಮೇಶ್ ಅವರಿಗೆ ರೋಟರಿ–ಕದಂಬ ರಂಗ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಟ ಮಂಡ್ಯ ರಮೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರೋಟರಿ ಉತ್ತರ ಅಧ್ಯಕ್ಷ ಪಿ.ಪ್ರಭಾಕರ್, ಕಾರ್ಯದರ್ಶಿ ಎಲ್.ಆರ್.ಮಹದೇವಸ್ವಾಮಿ, ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಶಿವಕುಮಾರ್ ಇದ್ದಾರೆ.

ರೋಟರಿ ಸಂಸ್ಥೆಯವರು ಕೇವಲ ಇಂಗ್ಲಿಷ್ ಕಾರ್ಯಕ್ರಮಗಳಿಗೆ ಸೀಮಿತವಾಗದೇ ಕಲೆ, ಕಲಾವಿದರಿಗೂ ಪ್ರೋತ್ಸಾಹ ನೀಡುತ್ತಿರುವುದು ಸ್ವಾಗತಾರ್ಹ ಎಂದರು. ನಟ, ನಿರ್ದೇಶಕ ಯು.ಎಸ್.ರಾಮಣ್ಣ, ನಟ, ಪ್ರಸಾಧನ ಪಟು, ವಿನ್ಯಾಸಕ ಅಶ್ವತ್ಥ್ ಕದಂಬ, ನಟ, ನಿರ್ದೇಶಕ ಎನ್. ಧನಂಜಯ ಹಾಗೂ ನಟಿ, ನಿರ್ದೇಶಕಿ, ಗಾಯಕಿ ದಿಶಾ ರಮೇಶ್ ಅವರಿಗೆ ರೋಟರಿ–ಕದಂಬ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರದಾನ ಮಾಡಿದರು. ರೋಟರಿ ಉತ್ತರ ಅಧ್ಯಕ್ಷ ಪಿ. ಪ್ರಭಾಕರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಎಲ್.ಆರ್. ಮಹದೇವಸ್ವಾಮಿ, ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಶಿವಕುಮಾರ್ ಉಪಸ್ಥಿತರಿದ್ದರು.

ವಕ್ಫ್ ಬೋರ್ಡ್ ವಿರುದ್ಧ ಶ್ರೀರಂಗಪಟ್ಟಣ ಬಂದ್ ಯಶಸ್ವಿ

ಶ್ರೀರಂಗಪಟ್ಟಣ, ಜ.20– ವಕ್ಫ್ ಬೋರ್ಡ್ ವಿರೋಧಿಸಿ ವಿವಿಧ ಸಂಘಟನೆಗಳು ಕರೆದಿದ್ದ ಶ್ರೀರಂಗಪಟ್ಟಣ ಬಂದ್‌ಗೆ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಸ್ವಯಂ ಪ್ರೇರಿತವಾಗಿ ಮುಚ್ಚುವ ಮೂಲಕ ವರ್ತಕರು ಬೆಂಬಲ ಸೂಚಿಸಿದರು.

ತಾಲೂಕು ರೈತ ಹಿತರಕ್ಷಣಾ ವೇದಿಕೆ ಹೆಸರಿನಲ್ಲಿ ವಕ್ಫ್ ಬೋರ್ಡ್ ವಿರುದ್ಧವಾಗಿ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಹಿಂದೂ ಜಾಗರಣಾ ವೇದಿಕೆ, ಆರ್‌ಎಸ್‌ಎಸ್, ರೈತಸಂಘ, ಕನ್ನಡ ರಕ್ಷಣಾ ವೇದಿಕೆ, ಮಂಡ್ಯ ರಕ್ಷಣಾ ವೇದಿಕೆ, ಕಸಾಪ, ಪತ್ರಕರ್ತರ ಸಂಘ, ವಕೀಲರ ಸಂಘ, ಬ್ರಾಹ್ಮಣರ ಸಂಘ, ಸವಿತ ಸಮಾಜ, ಬೀದಿ ಬದಿ, ರಸ್ತೆ ವ್ಯಾಪಾರಸ್ಥರ ಸಂಘ, ಪುರಸಭೆ ಸದಸ್ಯರು ಸೇರಿದಂತೆ ವಿವಿಧ ಸಂಘಟನೆಗಳು ಶ್ರೀರಂಗಪಟ್ಟಣ ಬಂದ್ ಮಾಡಿ ವಕ್ಫ್ ಬೋರ್ಡ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಪಟ್ಟಣದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿನ ಕುವೆಂಪು ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ತಮ್ಮ ಜಾನುವಾರು, ಎತ್ತಿನ ಗಾಡಿ, ಟ್ರ್ಯಾಕ್ಟರ್ ಸೇರಿದಂತೆ ಕೃಷಿ ಚಟುವಟಿಕೆಗಳ ಪರಿಕರಗಳೊಂದಿಗೆ ಕಬ್ಬಿನ ಜಲ್ಲೆ ಹಿಡಿದು, ಕೆಲ ಕಾಲ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ನಂತರ ತಾಲೂಕು ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಬಳಿಕ ತಾಲೂಕು ಕಚೇರಿ



ಶ್ರೀರಂಗಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ವಿವಿಧ ಸಂಘಟನೆಗಳು.

ಎದುರು ಧರಣಿ ನಡೆಸಿ ವಕ್ಫ್ ಬೋರ್ಡ್ ವಜಾ ಮಾಡುವಂತೆ ಆಗ್ರಹಿಸಿದರು.

ಪಟ್ಟಣದ ಶ್ರೀ ಲಕ್ಷ್ಮಿ ದೇವಸ್ಥಾನ ಬಳಿ ಪ್ರತಿಭಟನಾಕಾರರು ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ಹೊರ ಹಾಕಿದರು. ಈ ವೇಳೆ ಪೊಲೀಸರು ಆಗಮಿಸಿ ಹೊತ್ತಿ ಉರಿಯುತ್ತಿದ್ದ ಟೈರನ್ನು ನಂದಿಸಿದರು.

ರೈತ ಹೋರಾಟಗಾರ ಕೆ.ಎಸ್ ನಂಜುಂಡೇಗೌಡ ಮಾತನಾಡಿ, ರೈತರ ಆತಂಕಕ್ಕೆ ಮೂಲ ಕಾರಣ ಕಾಂಗ್ರೆಸ್ ಸರ್ಕಾರ. ವಕ್ಫ್ ಬೋರ್ಡ್‌ನಿಂದಾಗಿ ಶ್ರೀರಂಗಪಟ್ಟಣದ ಎಲ್ಲಾ ರೈತರೂ ಆತಂಕಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಯಾವೊಬ್ಬ ರೈತರ ಆರ್‌ಟಿಸಿಗಳಲ್ಲಿ ವಕ್ಫ್ ಬೋರ್ಡ್ ಎಂದು ನಮೂದಾಗಿರುವುದು ಕಂಡು ಬಂದಲ್ಲಿ, ರೈತರ ಪರವಾಗಿ ಜಿಲ್ಲಾದ್ಯಂತ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತ ಹಿತರಕ್ಷಣಾ ವೇದಿಕೆ ಜಿಲ್ಲಾ ಸಂಚಾಲಕ ಚಂದನ್ ಮಾತನಾಡಿ, ಶ್ರೀರಂಗಪಟ್ಟಣ ಬಂದ್‌ಗೆ ಆಗಮಿಸುವಂತೆ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ಅವರಿಗೆ ತಿಳಿಸಲಾಗುತ್ತು. ಆದರೆ ಅವರು ಬಂದಿಲ್ಲ, ಇದರಿಂದ ಕ್ಷೇತ್ರದ ರೈತರ ಬಗ್ಗೆ ಅವರಲ್ಲಿ ಕಾಳಜಿ ಇಲ್ಲ ಎಂಬುದು ತೋರುತ್ತಿದೆ. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಡಳಿತದ ಪರವಾಗಿ ಉಪವಿಭಾಗಾಧಿಕಾರಿ ಶ್ರೀನಿವಾಸ್‌ರವರು ಮನವಿ ಸ್ವೀಕರಿಸಿ, ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಆ ಹಿನ್ನಲೆಯಲ್ಲಿ ಅಮರಣಾಂತರ ಉಪವಾಸವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಜ.30ರವರೆಗೆ ಅಧಿಕಾರಿಗಳ ಕಾರ್ಯ ವೈಖರಿಯನ್ನು ಗಮನಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಎಸಿ ಭೇಟಿ: ಉಪವಿಭಾಗಾಧಿಕಾರಿ ಶ್ರೀನಿವಾಸ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮಾತನಾಡಿ, ಈ ಸಂಬಂಧ ಜಿಲ್ಲಾಧಿಕಾರಿಗಳು ಸಭೆ ಕರೆದಿದ್ದಾರೆ. ತಮ್ಮ ಎಲ್ಲಾ ಬೇಡಿಕೆಗಳನ್ನ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ, ಪ್ರತಿಭಟನಾಕಾರರ ಮನವೊಲಿಸಿ ಪ್ರತಿಭಟನೆ ಹಿಂಪಡೆಯುವಲ್ಲಿ ಯಶಸ್ವಿಯಾದರು.

ಬಳಿಕ ಪ್ರತಿಭಟನಾಕಾರರು ಸಚಿವ ಜಮೀರ್ ಅಹಮದ್ ಖಾನ್ ಭಾವಚಿತ್ರಕ್ಕೆ ಬೆಂಕಿ ಹಾಕಿ ಆಕ್ರೋಶವನ್ನು ವ್ಯಕ್ತಪಡಿಸುವುದರೊಂದಗೆ ಪ್ರತಿಭಟನೆಯನ್ನು ಮುಂದೂಡಿದರು.

ಪಾಂಡವಪುರದಲ್ಲಿ ವೇಮನ ಜಯಂತಿ



ವೇಮನ ಜಯಂತೋತ್ಸವವನ್ನು ತಹಸೀಲ್ದಾರ್ ಸಂತೋಷ್ ಕುಮಾರ್ ಉದ್ಘಾಟಿಸಿದರು.

ಪಾಂಡವಪುರ: ವಚನ ಸಾಹಿತ್ಯದಲ್ಲಿ ಬರುವ ಎಲ್ಲಾ ಮಹಾತ್ಮರು ಸಹ ಸಮಾಜದ ಶೋಷಣೆ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡಿದ್ದಾರೆ ಎಂದು ತಹಸೀಲ್ದಾರ್ ಸಂತೋಷ್ ಕುಮಾರ್ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದ ತಹಸೀಲ್ದಾರ್ ಕಚೇರಿಯಲ್ಲಿ ನಡೆದ ಮಹಾಯೋಗಿ ವೇಮನ ಜಯಂತೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದಲ್ಲಿ ವೇಶ್ಯರ ಸವಹಾಸ ಸೇರಿದಂತೆ ಸಂಪೂರ್ಣವಾಗಿ ಕೆಟ್ಟ ಚಟಗಳು ಮೈಗೂಡಿಸಿಕೊಂಡಿದ್ದ ವೇಮನ ತದನಂತರ ಮನಪರಿವರ್ತನೆಗೊಂಡು ವೈರಾಗ್ಯ ಜೀವನಕ್ಕೆ ಬಂದರು. ಮೂಲತಃ ತೆಲುಗು ಸಾಹಿತಿಗಳಾಗಿರುವ ಇರುವ ತೆಲುಗು ಭಾಷೆಯಲ್ಲಿ ಹಲವಾರು ಕಾವ್ಯಗಳನ್ನು ರಚನೆ ಮಾಡಿದ್ದಾರೆ. ವಚನ ಸಾಹಿತ್ಯದಲ್ಲಿ ಶೋಷಣೆಯ ವಿರುದ್ಧ ಹೋರಾಡುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ ಎಂದರು.

ಸರಕಾರ ಇಂತಹ ಮಹಾತ್ಮರ ಜೀವನದ ಆದರ್ಶಗಳನ್ನು ಮೈಗೂಡಿಸಿಕೊಳ್ಳಲೆಂದು ಸರಕಾರಗಳು ಇಂತಹ ದಿನಾಚರಣೆಗಳನ್ನು ನಡೆಸುತ್ತಿದೆ. ಸಾರ್ವಜನಿಕರು ಇಂತಹ ಮಹಾತ್ಮರ ಜಯಂತಿಗಳಲ್ಲಿ ಭಾಗವಹಿಸುವ ಮೂಲಕ ಕನಿಷ್ಠ ಪಕ್ಷ ಸ್ವಲ್ಪವಾದರೂ ಬದಲಾವಣೆಯಾಗಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಉಪ ತಹಸೀಲ್ದಾರ್ ಮೋಹನ್, ಕಾಂಗ್ರೆಸ್ ಮುಖಂಡ ಸಿ.ಆರ್. ರಮೇಶ್ ದಸಂಸ ಮುಖಂಡ ಅಂಕಯ್ಯ, ರವಿಕುಮಾರ್ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

ಮನ್‌ಮುಲ್ ಚುನಾವಣೆ: ಘಟಾನುಘಟಿಗಳು ನಾಮಪತ್ರ ಸಲ್ಲಿಕೆ

ಮಂಡ್ಯ, ಜ.20– ಫೆಬ್ರವರಿ 2ರಂದು ನಡೆಯಲಿರುವ ಮಂಡ್ಯ ಜಿಲ್ಲೆಯ ಪ್ರತಿಷ್ಠಿತ ಹಾಲು ಒಕ್ಕೂಟ ಮನ್‌ಮುಲ್‌ನ 12 ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆ ಕಾರ್ಯ ಕಳೆದ ಜ.18ರಿಂದ ಆರಂಭವಾಗಿದ್ದು, ಸೋಮವಾರ ಅನೇಕ ಮಂದಿ ಘಟಾನುಘಟಿಗಳು ನಾಮಪತ್ರ ಸಲ್ಲಿಸಿದರು.

ಪಾಂಡವಪುರ ತಾಲೂಕಿನ ಏಕೈಕ ನಿರ್ದೇಶಕ ಸ್ಥಾನಕ್ಕೆ ಎನ್‌ಡಿಎ ಬೆಂಬಲಿತ ಅಭ್ಯರ್ಥಿಯಾಗಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅಣ್ಣನ ಮಗ ಸಿ.ಶಿವಕುಮಾರ್ ನಾಮಪತ್ರ ಸಲ್ಲಿಸಿದರು. ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಚುನಾವಣಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿಗೆ ಜೆಡಿಎಸ್ ಮುಖಂಡರಾದ ಬಿ.ಆರ್.ರಾಮಚಂದ್ರ, ತ್ಯಾಗರಾಜು ಸೇರಿದಂತೆ ಹಲವು ಮಂದಿ ಸಮ್ಮುಖದಲ್ಲಿ ಉಮೇದುವಾರಿಕೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್, ಪಾಂಡವಪುರ ತಾಲೂಕಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಶ್ರೇಯೋಭಿವೃದ್ಧಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಶ್ರಮಿಸಿದ್ದಾರೆ. ಜೊತೆಗೆ ಹಲವು ಕಡೆ ಕಟ್ಟಡಗಳ ನಿರ್ಮಾಣ, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ನೀಡುವಲ್ಲಿ



ಪಾಂಡವಪುರ ತಾಲೂಕಿನಿಂದ ಜೆಡಿಎಸ್–ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಸಿ.ಶಿವಕುಮಾರ್ ಅವರು ಸೋಮವಾರ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು.

ಜೆಡಿಎಸ್ ಮತ್ತು ಪುಟ್ಟರಾಜು ಅವರು ಅಧಿ ಕಾರದಲ್ಲಿದ್ದಾಗ ಮಾಡಿರುವ ಕೆಲಸಗಳೇ ನನಗೆ ಶ್ರೀರಕ್ಷೆ ಎಂದು ಹೇಳಿದರು.

ಮದ್ದೂರು ತಾಲೂಕಿನ ಎರಡು ನಿರ್ದೇಶಕ ಸ್ಥಾನಗಳಿಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಮಹೇಶ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಹಾಲಿ ನಿರ್ದೇಶಕಿ ರೂಪಾ ನಾಮಪತ್ರ ಸಲ್ಲಿಸಿದರು. ಉಭಯ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ವೇಳೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಶಾಸಕ ಕೆ.ಸುರೇಶ್‌ಗೌಡ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿಯ ಹಲವು ಮುಖಂಡರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಮದ್ದೂರು ತಾಲೂಕಿನ ಎರಡು ನಿರ್ದೇಶಕ ಸ್ಥಾನಗಳಿಗೆ ಮಹೇಶ್ ಮತ್ತು ರೂಪಾ ಅವರು ಕಣದಲ್ಲಿದ್ದು, ತಾಲೂಕಿನ ಎಲ್ಲಾ ಹಾಲು ಉತ್ಪಾದಕ ಮತದಾರರು ಇಬ್ಬರನ್ನು ಗೆಲ್ಲಿಸುವ ಮೂಲಕ ಎನ್‌ಡಿಎ ಕೈ ಬಲಪಡಿಸಬೇಕು. ಮೋದಿ ಮತ್ತು ಹೆಚ್.ಡಿ.ಕುಮಾರಸ್ವಾಮಿ ಅವರ ನಾಯಕತ್ವವನ್ನು ಬೆಂಬಲಿಸಬೇಕು. ಜಿಲ್ಲಾದ್ಯಂತ ಎನ್‌ಡಿಎಗೆ ಒಳ್ಳೆಯ ವಾತಾವರಣವಿದ್ದು, ಜಿಲ್ಲೆಯ 12 ಸ್ಥಾನಗಳನ್ನು ನಾವು ಗೆಲ್ಲಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿ, ಈ ಬಾರಿ ಮನ್‌ಮುಲ್ ಚುನಾವಣೆಯಲ್ಲಿ ಎನ್‌ಡಿಎ ಬೆಂಬಲಿತರು ಅಧಿಕಾರ ಹಿಡಿಯುವ ವಿಶ್ವಾಸವಿದ್ದು, ಅದರಂತೆ ಮದ್ದೂರಿನ ನಮ್ಮ ಇಬ್ಬರು ಅಭ್ಯರ್ಥಿಗಳು ಇಂದು ನಾಮಪತ್ರ ಸಲ್ಲಿಸಿದ್ದಾರೆ. ಜೊತೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುತ್ತಿದೆ. ಅದರಂತೆ ನಾಗಮಂಗಲದಲ್ಲಿ ಎರಡು ನಿರ್ದೇಶಕ ಸ್ಥಾನಗಳಿಗೆ ಹಾಲಿ ನಿರ್ದೇಶಕ ನೆಲ್ಲಿಗೆರೆ ಬಾಲು ಮತ್ತು ದೇವೇಗೌಡ ಎಂಬುವವರು ಜೆಡಿಎಸ್‌ನಿಂದ ಕಣಕ್ಕಿಳಿಯುತ್ತಿದ್ದಾರೆ ಎಂದು ತಿಳಿಸಿದರು.

ಮತ್ತೊಂದೆಡೆ ಮದ್ದೂರಿನ ಎರಡು ಸ್ಥಾನಗಳ ಪೈಕಿ ಒಂದು ನಿರ್ದೇಶಕ ಸ್ಥಾನಕ್ಕೆ ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ ತಮ್ಮ ಬೆಂಬಲಿಗ ರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಿದರು.

ಸಾಲ ವಸೂಲಾತಿ ವೇಳೆ ಸೌಜನ್ಯದಿಂದ ವರ್ತಿಸದಿದ್ದರೆ ಹಳ್ಳಿ–ಹಳ್ಳಿಯಲ್ಲಿ ಚಳುವಳಿ

ಮೈಕ್ರೋ ಫೈನಾನ್ಸ್ ಅಧಿಕಾರಿಗಳಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಎಚ್ಚರಿಕೆ

ಪಾಂಡವಪುರ: ಮೈಕ್ರೋ ಫೈನಾನ್ಸ್‌ನವರು ಸಾಲ ವಸೂಲಿ ಮಾಡುವಾಗ ಸೌಜನ್ಯದಿಂದ ವರ್ತಿಸಬೇಕು ಇಲ್ಲವಾದರೆ, ನಿಮ್ಮ ವಿರುದ್ಧ ರೈತಸಂಘದಿಂದ ಹಳ್ಳಿಹಳ್ಳಿಯಲ್ಲೂ ಚಳುವಳಿ ರೂಪಿಸಬೇಕಾಗುತ್ತದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಎಚ್ಚರಿಕೆ ನೀಡಿದರು.

ಪಟ್ಟಣದ ಮಿನಿವಿಧಾನಸೌಧದ ತಹಸೀಲ್ದಾರ್ ಸಭಾಂಗಣದಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಅಧಿಕಾರಿಗಳ ಸಭೆ ನಡೆಸಿ ಖಡಕ್ ಸೂಚನೆ ನೀಡಿದರು.

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳದ್ದು ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ರೈತರು, ಸಾರ್ವಜನಿಕರಿಗೆ ಸಾಲ ನೀಡುವ ಮೈಕ್ರೋ ಫೈನಾನ್ಸ್‌ನವರು ಸಾಲ ವಸೂಲಾತಿ ಮಾಡುವಾಗ ದಬ್ಬಾಳಿಕೆ, ಒತ್ತಡ ಹಾಕುವುದು ಮಾಡುತ್ತಿದ್ದಾರೆ. ಮೈಕ್ರೋ ಫೈನಾನ್ಸ್‌ಗಳಿಗೆ ಹೆದರಿ ಸಾರ್ವಜನಿಕರು ಊರುಗಳನ್ನೇ ಬಿಟ್ಟು ಬೇರೆಡೆ ಗುಳೆಹೋಗುವ ಸ್ಥಿತಿ ಎದುರಾಗಿದೆ. ಇದರಿಂದ ಆ ಕುಟುಂಬದ ಮಕ್ಕಳ ಭವಿಷ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ ಎಂದು ಕಿಡಿಕಾರಿದರು.

ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲ ನೀಡುವ ಮೊದಲು ಸಾಲ ಪಡೆಯುತ್ತಿರುವ



ಪಾಂಡವಪುರ ಮಿನಿವಿಧಾನಸೌಧದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮೈಕ್ರೋ ಫೈನಾನ್ಸ್ ಅಧಿಕಾರಿಗಳ ಸಭೆ ನಡೆಸಿದರು.

ಗ್ರಾಹಕರಿಗೆ ಸಾಲದ ಅವಶ್ಯಕತೆ ಇದೆಯಾ ಎಂಬ ಬಗ್ಗೆ ಪರಿಶೀಲನೆ ನಡೆಸಬೇಕು. ಸಾಲ ಪಡೆಯುತ್ತಿರುವ ವ್ಯಕ್ತಿಗಳ ಸಾಲದ ಹಣವನ್ನು ಅವರ ಅವಶ್ಯಕತೆಗೆ ಬಳಕೆ ಮಾಡಿಕೊಳ್ಳುತ್ತಾರೆಯೇ? ಇಲ್ಲಿ ಸಾಲ ಪಡೆದು ಬೇರೆಯವರಿಗೆ ನೀಡುತ್ತಾರಾ? ಎಂಬ ಬಗ್ಗೆ ಮಾಹಿತಿ ಪಡೆದುಕೊಂಡು ಸಾಲ ನೀಡಬೇಕು, ನಿಮ್ಮಿಂದ ಸಾಲ ಪಡೆಯುವ ಬಹುತೇಕ ಮಂದಿ ಅನಕ್ಷರಸ್ಥರಾಗಿದ್ದಾರೆ ಹಾಗಾಗಿ ಅವರಿಗೆ ಸಾಲ ಹಾಗೂ ಹಣದ ಮಹತ್ವ, ಬಳಕೆಯ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮೈಕ್ರೋ ಫೈನಾನ್ಸ್ ಕಂಪನಿಗಳು ಮಾಡಬೇಕು ಎಂದರು.

ಸಾಲ ನೀಡಿದ ಬಳಿಕ ಸರಿಯಾಗಿ ಮರುಪಾವತಿ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಜನರಿಗೆ ಸ್ವಲ್ಪ ಕಾಲಾವಕಾಶ ನೀಡಬೇಕು, ಒಬ್ಬರು ಸಾಲ ಕಟ್ಟಿಲ್ಲ ಎಂದು ಗುಂಪಿನ ಇತರೆ ಸದಸ್ಯರ ಮೇಲೆ ಒತ್ತಡ ಹಾಕುವುದನ್ನು ನಿಲ್ಲಿಸಬೇಕು, ಜನರೊಂದಿಗೆ ಸೌಜನ್ಯದಿಂದ ವರ್ತಿಸಿ ಸಾಲ ವಸೂಲಾತಿ ಮಾಡಬೇಕು. ಇಲ್ಲವಾದರೆ ಈ ಹಿಂದೆ ರೈತಸಂಘ ಸಾಲ ವಸೂಲಾತಿ ನಿಲ್ಲಿಸಿ ಎಂದು ಹಳ್ಳಿಗಳಲ್ಲಿ ಬೋರ್ಡ್ ಹಾಕಿ ನಡೆಸಿದ್ದ ಅಭಿಯಾನದ ಹೋರಾಟವನ್ನು ನಿಮ್ಮ ವಿರುದ್ಧ ಮತ್ತೆ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಸಂತೋಷ್ ಕುಮಾರ್ ಹಾಜರಿದ್ದರು.

ಒಂದನೇ ಪುಟದಿಂದ

ಸಾವಿನ ಸನ್ನಿವೇಶ ಕಣ್ಣಿಗೆ ಕಟ್ಟಿದ ಯುವಕರ ಸೆಣಸಾಟ!



(ರಿಂಗ್ ರಸ್ತೆ ಜಂಕ್ಷನ್ ಸಮೀಪ) ಯಲ್ಲಿನ ವಿಜಿಎಸ್‌ಎಸ್‌ಪಿಎನ್ ಪುಟ್ಟಲಿಂಗಮ್ಮ& ಪುಟ್ಟಮ್ಮ ಕಾಂಪ್ಲೆಕ್ಸ್‌ನಲ್ಲಿರುವ 'ಕೆಎ–09 ಫಂಕಿ ವರ್ಲ್ಡ್' ಅಂಗಡಿ ಬಳಿ ಭಾನುವಾರ ಬೆಳಗ್ಗೆ ಸುಮಾರು 9 ಗಂಟೆಯಲ್ಲಿ ಸಂಭವಿಸಿದ್ದು, ಇದರ ಭಯಾನಕ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅದೃಷ್ಟವಶಾತ್ ಪ್ರಾಣ ಹಾನಿಯಾಗಿಲ್ಲ. ಆದರೆ ತಳ್ಳಾಟ–ನೂಕಾಟದಲ್ಲಿ ಹಲವರಿಗೆ ಸಣ್ಣ–ಪುಟ್ಟ ಗಾಯವಾಗಿದೆ ಎಂದು ಹೇಳಲಾಗಿದೆ.

ಇದ್ಯಾವ ಪರಿ ಸಂಭ್ರಮ: ಈ ಬಟ್ಟೆ ಅಂಗಡಿಯ ಎರಡನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಜ.19ರಂದು ಉಚಿತವಾಗಿ 2 ಸಾವಿರ ಟಿ–ಶರ್ಟ್ ವಿತರಿಸಲಾಗುವುದು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಲಾಗಿತ್ತಂತೆ. ಹಾಗೆಯೇ ಬೆಳಗ್ಗೆಯೇ ಹಾಸ್ಟೆಲ್ ವಿದ್ಯಾರ್ಥಿಗಳೂ ಸೇರಿದಂತೆ ಯುವಕರು ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಅವರೊಂದಿಗೆ ರಸ್ತೆಯಲ್ಲಿ ಸಾಗುತ್ತಿದ್ದವರೂ ವಾಹನವನ್ನು ಸಿಕ್ಕಸಿಕ್ಕಲ್ಲಿ ನಿಲ್ಲಿಸಿ, ಆ ಗುಂಪು ಸೇರಿಕೊಂಡರು. ನೋಡ ನೋಡುತ್ತಲೇ ಜನ ಸಾಗರವೇ ಹರಿದುಬಂದಿದೆ.

ಅಂಗಡಿ ಕಡೆಗೆ ಮಾತ್ರ ಕಬ್ಬಿಣದ ಬ್ಯಾರಿಕೇಡ್ ಅಳವಡಿಸಲಾಗಿತ್ತೇ ಹೊರತು ಸರತಿಗೆ ಯಾವುದೇ ವ್ಯವಸ್ಥೆ ಮಾಡಿರಲಿಲ್ಲ. ಹಾಗಾಗಿ ಟಿ–ಶರ್ಟ್‌ಗಳು ಕಣ್ಣಿಗೆ ಬೀಳುತ್ತಿದ್ದಂತೆ ತಳ್ಳಾಟ–ನೂಕಾಟ ಶುರುವಾಗಿದೆ. ಒಬ್ಬರ ಮೇಲೊಬ್ಬರು ಬಿದ್ದು ಟಿ–ಶರ್ಟ್ ಪಡೆಯಲು ಯತ್ನಿಸಿದ್ದಾರೆ. ಐದಾರು ಜನ ಬ್ಯಾರಿಕೇಡ್‌ಗಳನ್ನು ತಳ್ಳಿ ಹಿಡಿದು, ಜನಸ್ತೋಮ ನಿಯಂತ್ರಿಸಲು ಯತ್ನಿಸಿದರಾದರೂ ಪ್ರಯೋಜನವಾಗಲಿಲ್ಲ. ಬ್ಯಾರಿಕೇಡ್‌ಗಳನ್ನು ನೆಲಕ್ಕುರುಳಿಸಿ ನುಗ್ಗಿದ್ದಾರೆ. ನಿಯಂತ್ರಿಸಲಾಗದ ಅಂಗಡಿಯವರು ಟಿ–ಶರ್ಟ್‌ಗಳನ್ನು ಗುಂಪಿನೆಡೆಗೆ ತೂರಿದ್ದಾರೆ. ಜನ ಅಪಾಯದ ಪರಿವಿಲ್ಲದೆ ತೂರಿಬಂದ ಟಿ–ಶರ್ಟ್‌ಗಳನ್ನು ತೆಗೆದುಕೊಳ್ಳಲು ಮಾರಾಮಾರಿಯೇ ನಡೆದು ಹೋಗಿದೆ. ಟಿ–ಶರ್ಟ್‌ಗಾಗಿ ಕಿತ್ತಾಡಿದ್ದಾರೆ. ಒಟ್ಟಾರೆ ಜನರ ಜೀವದ ಜೊತೆ ಚೆಲ್ಲಾಟವಾಡುವ ಮೂಲಕ ಅಂಗಡಿಯ ವಾರ್ಷಿಕೋತ್ಸವ ಸಂಭ್ರಮಿಸಿದ್ದು ದುರಂತ.

ಪರಿವಿಲ್ಲದ ಯುವ ಜನತೆ: ಈ ಅಪಾಯಕಾರಿ ಘಟನೆಗೆ ಅಂಗಡಿ ಮಾಲೀಕ ಹಾಗೂ ಉಚಿತ ಟಿ–ಶರ್ಟ್‌ಗಾಗಿ ಜೀವದ ಹಂಗು ತೊರೆದು ಮುಗಿಬಿದ್ದ ಯುವಜನ ಸಮಾನ ಜವಾಬ್ದಾರರು. ನೂರಿನ್ನೂರು ರೂಪಾಯಿ ಟಿ–ಶರ್ಟ್‌ಗಾಗಿ ಗಂಟೆಗಳ ಕಾಲ ಕಾದು ನಿಂತು, ನಂತರ ಅಪಾಯದ ಪರಿವೇ ಇಲ್ಲದೆ ಬಿದ್ದು–ಎದ್ದು ತಿಣುಕಾಡಿದ್ದು ಮಾತ್ರ ವಿಷಾದ'ನೀಯ. ನೆರೆದಿದ್ದವರಲ್ಲಿ ಬಹುತೇಕ ಯುವಕರೇ ಆಗಿದ್ದರು. ಆದರೆ ನೂಕು–ನುಗ್ಗಲು ಹೆಚ್ಚಾಗಿ ಕಾಲ್ತುಳಿತದಲ್ಲಿ ಸಾವು–ನೋವು ಸಂಭವಿಸಲೂಬಹುದು, ಹತ್ತಾರು ಮಂದಿ ಜೀವ ಕಳೆದುಕೊಳ್ಳಬಹುದು ಎಂಬ ಸಣ್ಣ ಪರಿಜ್ಞಾನವೂ ಇಲ್ಲದೆ ವರ್ತಿಸಿದ್ದು ಆತಂಕ ಹುಟ್ಟಿಸುತ್ತದೆ.

ದುರಂತಗಳು ಕಣ್ಣ ಮುಂದಿವೆ: ತಿರುಪತಿಯಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವೈಕುಂಠ ದ್ವಾರ ಸರ್ವ ದರ್ಶನ ಟಿಕೆಟ್ ಪಡೆಯಲು ಜ.8ರಂದು ಸಾವಿರಾರು ಜನ ದಿಢೀರ್ ಮುಗಿಬಿದ್ದಿದ್ದರಿಂದ ಕಾಲ್ತುಳಿತ ಉಂಟಾಗಿ ಆರು ಮಂದಿ ಜೀವ ಕಳೆದುಕೊಂಡರು. 20ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದರು. ಕಳೆದ 2024ರ ಡಿಸೆಂಬರ್ 4 ರಂದು ಹೈದರಾಬಾದ್‌ನ ಸಂಧ್ಯಾ ಥಿಯೇಟರ್‌ನಲ್ಲಿ ಪುಷ್ಪ 2 ಪ್ರದರ್ಶನದ ವೇಳೆ ನಟ ಅಲ್ಲು ಅರ್ಜುನ್ ಭೇಟಿ ನೀಡಿದ್ದಾಗಲೂ ಅವಘಡ ಸಂಭವಿಸಿತ್ತು. ನಟನನ್ನು ನೋಡಲು ಅಭಿಮಾನಿಗಳು ಮುಗಿಬಿದ್ದಿದ್ದರಿಂದ ರೇವತಿ ಎಂಬ 39 ವರ್ಷದ ಮಹಿಳೆ ಪ್ರಾಣ ಕಳೆದು ಕೊಂಡರೆ, ಅವರ ಒಂಬತ್ತು ವರ್ಷದ ಮಗ ಶ್ರೀತೇಜ್ ತೀವ್ರವಾಗಿ ಗಾಯಗೊಂಡ. ಜುಲೈನಲ್ಲಿ ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ನಡೆದ ಭೋಲೆ ಬಾಬಾ ಸತ್ಸಂಗದ ವೇಳೆ ಕಾಲ್ತುಳಿತ ಉಂಟಾಗಿ ಮಹಿಳೆಯರು, ಮಕ್ಕಳು ಸೇರಿದಂತೆ 120ಕ್ಕೂ ಜನ ಮೃತಪಟ್ಟರು. ಕಳೆದ ವಿಧಾನಸಭೆ ಚುನಾವಣೆ ವೇಳೆ ಬೆಳಗಾವಿಯಲ್ಲಿ ಅಭ್ಯರ್ಥಿಗಳು ಧಾರ್ಮಿಕ ಕಾರ್ಯಕ್ರಮದ ನೆಪದಲ್ಲಿ ಉಡುಗೊರೆ ಹಂಚಿದ ವೇಳೆ ಸಣ್ಣ ಕಾಲ್ತುಳಿತ ಉಂಟಾಗಿ ಹಲವು ಮಹಿಳೆಯರು ಗಾಯಗೊಂಡಿದ್ದರು. ಜಮ್ಮು–ಕಾಶ್ಮೀರದ ವೈಷ್ಣೋದೇವಿ, ಶಬರಿಮಲೆ ಸೇರಿದಂತೆ ಹಲವು ಧಾರ್ಮಿಕ ಸ್ಥಳದಲ್ಲಿ ಕಾಲ್ತುಳಿತಕ್ಕೆ ಹಲವರು ಬಲಿಯಾಗಿರುವ ಸಾಕ್ಷ್ಯ ಕಣ್ಣ ಮುಂದಿದೆ. ಆದರೂ ಯಕಶ್ಚಿತ್ ಒಂದು ಟಿ–ಶರ್ಟ್ ಗಾಗಿ ಅಪಾಯಕಾರಿ ಸನ್ನಿವೇಶ ಸೃಷ್ಟಿಸಿದ್ದು ಅತ್ಯಂತ ದುರ್ಗತಿ ಸಂಗತಿ. ಅಂಗಡಿಯ ವಾರ್ಷಿಕೋತ್ಸವದ ಸಂಭ್ರಮದಲ್ಲಿ ಗ್ರಾಹಕರಿಗೆ ಉಚಿತವಾಗಿ ಟಿ–ಶರ್ಟ್ ಹಂಚಿದ್ದು ತಪ್ಪಲ್ಲ. ಆದರೆ ಪೊಲೀಸರಿಗೂ ಮಾಹಿತಿ ನೀಡದೆ, ಯಾವುದೇ ಸುರಕ್ಷತಾ ಕ್ರಮಗಳನ್ನೂ ಕೈಗೊಳ್ಳದೆ ಈ ಘನ ಕಾರ್ಯಕ್ಕೆ ಮುಂದಾಗಿದ್ದು ಸರಿಯಲ್ಲ. ಏನಾದರೂ ಕಾಲ್ತುಳಿತವಾಗಿ ಸಾವು–ನೋವು ಸಂಭವಿಸಿದ್ದರೆ ಯಾರು ಹೊಣೆಯಾಗುತ್ತಿದ್ದರು. ಅಂತಹ ದುರ್ಘಟನೆಗೆ ಮೈಸೂರು ಸಾಕ್ಷಿಯಾಗಬೇಕಿತ್ತು.

ಡಿಕೆಶಿ ತೀರ್ಮಾನ

ಬೃಹತ್ ಸಾರ್ವಜನಿಕ ಸಮಾವೇಶ ಹಮ್ಮಿಕೊಂಡಿದೆ. ಇದರ ಯಶಸ್ಸು ಕೆಪಿಸಿಸಿ ಅಧ್ಯಕ್ಷರ ಜವಾಬ್ದಾರಿಯಾಗಿದ್ದು, ಶಿವಕುಮಾರ್, ರಾಜಕೀಯ ಒತ್ತಡಗಳ ನಡುವೆಯೂ ಎಲ್ಲರನ್ನು ಒಗ್ಗೂಡಿಸಿಕೊಂಡು ಐತಿಹಾಸಿಕ ಸಮಾವೇಶ ನಡೆಸಲು ಮುಂದಾಗಿದ್ದಾರೆ.

ಸಮಾವೇಶದ ನಂತರ ಸರ್ಕಾರದ ಅಧಿಕಾರದಲ್ಲಿ ಮುಂದುವರೆದು, ಪಕ್ಷದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವ ಇಂಗಿತವನ್ನು ಎಐಸಿಸಿ ಮುಖಂಡರಿಗೆ ಬೆಳಗಾವಿಯಲ್ಲೇ ತಿಳಿಸಲಿದ್ದಾರಂತೆ.

ಸಮಾವೇಶದಲ್ಲಿ ಪಾಲ್ಗೊಳ್ಳಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ ಪಕ್ಷದ ಎಲ್ಲಾ ರಾಷ್ಟ್ರೀಯ ನಾಯಕರು ನಾಳೆ ಬೆಳಗಾವಿಗೆ ಆಗಮಿಸಲಿದ್ದಾರೆ. ಸಮಾವೇಶದ ನಂತರ ಶಿವಕುಮಾರ್ ತಮ್ಮ ರಾಜಕೀಯ ನಿರ್ಧಾರವನ್ನು ರಾಹುಲ್ ಗಾಂಧಿ ಮುಂದೆಯೇ ತಿಳಿಸಿ, ಪಕ್ಷದ ನಿರ್ಧಾರಕ್ಕೆ ಬಿಡಲಿದ್ದಾರಂತೆ. ಪಕ್ಷದ ನಿಯಮಾವಳಿಯಂತೆ ಒಬ್ಬರು ಒಂದೇ ಹುದ್ದೆಯಲ್ಲಿ ಮುಂದುವರೆಯಬೇಕು, ಈ ಹಿನ್ನೆಲೆಯಲ್ಲಿ ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಯಬೇಕೆಂದು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರು ಬಹಿರಂಗವಾಗೇ ಹೇಳಿಕೆ ನೀಡಿದ್ದರು. ಇವರ ಹೇಳಿಕೆ ನಂತರ ಪಕ್ಷದಲ್ಲಿ ಭಾರೀ ಚರ್ಚೆಗೆ ಎಡೆ ಮಾಡಿ, ಎಐಸಿಸಿ ಅಧ್ಯಕ್ಷರೇ ಸಚಿವರುಗಳಿಗೆ ಬಾಯಿ ಮುಚ್ಚಿಕೊಂಡು ಕೊಟ್ಟಿರುವ ಕೆಲಸ ಮಾಡಿ ಎಂದು ಬಹಿರಂಗವಾಗೇ ಎಚ್ಚರಿಕೆ ನೀಡಬೇಕಾಯಿತು. ಇದರ ಬೆನ್ನಲ್ಲೇ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವ ನಿರ್ಧಾರ ಕೈಗೊಂಡಿದ್ದಾರೆ. ಆದರೆ, ಪಕ್ಷ ಇವರ ನಿರ್ಧಾರಕ್ಕೆ ಯಾವ ತೀರ್ಮಾನ ತೆಗೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಶಿವಕುಮಾರ್ ಮನವಿಯನ್ನು ಎಐಸಿಸಿ ಪುರಸ್ಕರಿಸಿದರೆ, ಆ ಸ್ಥಾನಕ್ಕೆ ವೀರಶೈವ ಸಮುದಾಯಕ್ಕೆ ಸೇರಿದ ಪಕ್ಷದ ಹಿರಿಯ ನಾಯಕ ಸಿ.ಎಸ್.ನಾಡಗೌಡ (ಅಪ್ಪಾಜಿಗೌಡ) ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತರುವ ಬಗ್ಗೆ ಭಾರೀ ಚರ್ಚೆ ನಡೆದಿದೆ.

ಕಾಂಗ್ರೆಸ್‌ನಲ್ಲಿ ಯಾವ ಬಂಡಾಯವೂ ಇಲ್ಲ

ಸ್ಥಾನದಲ್ಲಿದ್ದು, ನನಗೆ ಎಲ್ಲರೂ ಒಂದೇ, ಎಲ್ಲರನ್ನು ಸರಿ ಸಮಾನವಾಗಿ ತೆಗೆದುಕೊಂಡು ಹೋಗುವುದು ನನ್ನ ಕರ್ತವ್ಯ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬದಲಾವಣೆಗೆ ಕೆಲವು ಸಚಿವರು ಅಧಿನಾಯಕ ರಾಹುಲ್ ಗಾಂಧಿಗೆ ದೂರು ನೀಡುತ್ತಿದ್ದಾರೆಂಬುದು ಸುಳ್ಳು ಮಾಹಿತಿ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಶಕ್ತಿ ತುಂಬಲು ಅನೇಕ ಹೋರಾಟ ಮಾಡಿದ್ದೇನೆ, ಪಕ್ಷಕ್ಕಾಗಿ ಹಲವು ತ್ಯಾಗ ಮಾಡಿದ್ದೇನೆ, ಧರಂಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರ ಹಾಗೂ ಸಿದ್ದರಾಮಯ್ಯ ಅವರ ಹಿಂದಿನ ಸರ್ಕಾರದಲ್ಲಿಯೂ ಉಸಿರು ಬಿಗಿ ಹಿಡಿದುಕೊಂಡು ತ್ಯಾಗ ಮಾಡಿದ್ದೇನೆ. ನನಗೆ ಪಕ್ಷವೇ ಮುಖ್ಯ, ನಾನು ಪಕ್ಷದಿಂದ ಬೆಳೆದವನು, ವಿದ್ಯಾರ್ಥಿ ನಾಯಕನಾಗಿದ್ದ ನನ್ನನ್ನು ಗುರುತಿಸಿ ಪಕ್ಷ ಟಿಕೆಟ್ ನೀಡಿತು.

ನಾನು ತ್ಯಾಗ ಮಾಡಿಕೊಂಡೆ ಬರುತ್ತೇನೆ, ನನಗೆ ಫಲದ ಅವಶ್ಯಕತೆಯೇ ಇಲ್ಲ, ಜನಕ್ಕೆ ಒಳ್ಳೆಯದಾಗುತ್ತಿದೆಯಲ್ಲ, ಅಷ್ಟು ಸಾಕು ಎಂದರು. ಫಿರೋಜ್ ಸೇಠ್ ಪಕ್ಷದ ಹಿರಿಯ ನಾಯಕರು, ನನ್ನ ಜೊತೆ ಶಾಸಕರಾಗಿ ಕೆಲಸ ಮಾಡಿದ್ದಾರೆ, ಬೆಳಗಾವಿ ಸಮಾವೇಶ ಸಮಿತಿ ಸದಸ್ಯರಾದ ಅವರನ್ನು ಸಂಘಟನೆ ದೃಷ್ಟಿಯಿಂದ ಜಿಲ್ಲಾಧ್ಯಕ್ಷರ ಜೊತೆ ಭೇಟಿ ಮಾಡಿದ್ದೆ. ಯಾರೋ ಸ್ಟೋರಿ ಪ್ಲಾಂಟ್ ಮಾಡಿದ್ದನ್ನು ನಂಬಿ ಮಾಧ್ಯಮಗಳು ಏನೇನೋ ವರದಿ ಬಿತ್ತರ ಮಾಡಿದವು. 2023ರ ಚುನಾವಣೆಯಲ್ಲಿ ಫಿರೋಜ್ ಸೇಠ್‌ಗೆ ಟಿಕೆಟ್ ಸಿಗದಿದ್ದಕ್ಕೆ ಸತೀಶ್ ಜಾರಕಿಹೊಳಿ ಕಾರಣ ಎಂಬ ವಿಚಾರ ಗೊತ್ತಿಲ್ಲ. ನನಗೆ ಕಾರ್ಯಕರ್ತರು, ಶಾಸಕರು, ಸಚಿವರು ಎಲ್ಲರೂ ಒಂದೇ. ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ಕೆಲಸ ಮಾಡುವವರ ಎದುರು ತಲೆಬಾಗಿ ಅವರ ಸೇವೆ ಮಾಡುತ್ತೇನೆ. ನನಗೆ ಪಕ್ಷವೇ ಮುಖ್ಯ, ನನಗೆ ಕೊಟ್ಟಿರುವ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ಕಾಲ, ಕಾಲದಿಂದಲೂ ನಿರ್ವಹಿಸಿಕೊಂಡು ಬಂದಿದ್ದೇನೆ.

ಕಾಂಗ್ರೆಸ್‌ನ 60 ಶಾಸಕರು ಬಿಜೆಪಿಗೆ ಬರುತ್ತಾರೆಂಬ ಯತ್ನಾಳ್ ಹೇಳಿಕೆ ನೀಚ ರಾಜಕಾರಣ. ಇಂತಹ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ. ಯಾರು ಏನೇ ಹೇಳಿದ್ದರೂ ಅದೆಲ್ಲಾ ಸುಳ್ಳಿನ ಕಂತೆ ಎಂದರು.

ಮಹಾತ್ಮ ಗಾಂಧಿ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸ್ಮರಣೆ, ಸಂವಿಧಾನ ರಕ್ಷಣೆಯೇ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶದ ಉದ್ದೇಶ, ಸಾಮಾಜಿಕ ನ್ಯಾಯ ಉಳಿಸುವುದೇ ನಮ್ಮ ಮೂಲ ಮಂತ್ರ, ಕಳೆದ ಬಾರಿ ರೂಪಿಸಿದ ಕಾರ್ಯಕ್ರಮಗಳನ್ನು ಈ ಬಾರಿಯೂ ಮುಂದುವರೆಸಲಾಗುವುದು. ಸುಮಾರು 60ಕ್ಕೂ ಹೆಚ್ಚು ರಾಷ್ಟ್ರೀಯ ಮಟ್ಟದ ನಾಯಕರು, ಅತಿಥಿಗಳು, ಸಂಸದರು, ಕಾರ್ಯಕಾರಿ ಸಮಿತಿ ಸದಸ್ಯರು ಬೆಳಗಾವಿ ಸಮಾವೇಶಕ್ಕೆ ಆಗಮಿಸುತ್ತಿದ್ದಾರೆ, ಸಚಿವರು, ಶಾಸಕರು, ಹಿರಿಯ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಒಂದಷ್ಟು ನಾಯಕರಿಗೆ ಮುಖ್ಯ ವೇದಿಕೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ದೆಹಲಿ ವಿಧಾನಸಭಾ ಚುನಾವಣೆ ಕುರಿತು ಪ್ರತಿಕ್ರಿಯಿಸಿದ ಅವರು, ನಾನೇ ಖುದ್ದಾಗಿ ದೆಹಲಿಗೆ ಹೋಗಿ ಮಹಿಳೆಯರಿಗೆ ತಿಂಗಳಿಗೆ 2,500 ರೂ. ನೀಡುವ 'ಪ್ಯಾರಿ ದೀದಿ' ಯೋಜನೆ ಪ್ರಕಟಣೆ ಮಾಡಿದ್ದೆ ಎಂದರು.

33 ಮಂದಿಗೆ ಗಾಯ



ಗಾಯಗೊಂಡ ಪ್ರಯಾಣಿಕರು ಚಿಕಿತ್ಸೆ ಪಡೆಯುತ್ತಿರುವ ಮದ್ದೂರು ತಾಲೂಕು ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ.ಕುಮಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ವಿಭಜಕಕ್ಕೆ ಹತ್ತಿ ಪಲ್ಟಿಯಾಗಿದೆ. ತಕ್ಷಣವೇ ಬಸ್‌ನಲ್ಲಿದ್ದವರನ್ನು ಸ್ಥಳೀಯರು ಹಾಗೂ ಮಾರ್ಗದ ವಾಹನ ಸವಾರರು ಬಸ್‌ನಿಂದ ಹೊರಗೆ ಎಳೆದು ಮದ್ದೂರು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಹೆದ್ದಾರಿಯಲ್ಲಿ ಬಸ್ ಉರುಳಿಬಿದ್ದಿದ್ದರಿಂದ ಟ್ರಾಫಿಕ್ ಜಾಮ್ ಉಂಟಾಗಿ, ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಮದ್ದೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗಾಯಗೊಂಡ ಪ್ರಯಾಣಿಕರು ಚಿಕಿತ್ಸೆ ಪಡೆಯು ತ್ತಿರುವ ಮದ್ದೂರು ತಾಲೂಕು ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ.ಕುಮಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಅವಶ್ಯಕತೆ ಇರುವ ಗಾಯಗೊಂಡಿರುವ ಪ್ರಯಾಣಿಕರನ್ನು ಮಿಮ್ಸ್‌ಗೆ ಹಾಗೂ ಖಾಸಗಿ ಆಸ್ಪತ್ರೆಗೆ ಸ್ಥಳಾಂತರ ಮಾಡಿ, ಚಿಕಿತ್ಸೆ ಕೊಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಒಂದು ವೇಳೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಲ್ಲಿ, ಅದರ ಖರ್ಚು–ವೆಚ್ಚವನ್ನು ಕೆಎಸ್‌ಆರ್‌ಟಿಸಿ ವತಿಯಿಂದ ಭರಿಸುವಂತೆ ನಿರ್ದೇಶನ ನೀಡಿದರು. ಪರಿಸ್ಥಿತಿ ಅವಲೋಕಿಸಿದರೆ ಸಣ್ಣ ಪುಟ್ಟ ಗಾಯಗಳಾಗಿದ್ದು ಎರಡು–ಮೂರು ಜನರು ಹೆಚ್ಚು ಗಾಯಗೊಂಡಿದ್ದು, ಅವರನ್ನು ಮಿಮ್ಸ್ ಅಥವಾ ಚಿಕಿತ್ಸೆಗೆ ಉನ್ನತ ಆಸ್ಪತ್ರೆಗೆ ಪ್ರಥಮ ಆದ್ಯತೆ ಮೇಲೆ ಸ್ಥಳಾಂತರಗೊಳಿಸಲು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿ.ಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಡಿಎಚ್‌ಓ ಡಾ. ಮೋಹನ್, ಕೆಎಸ್‌ಆರ್‌ಟಿಸಿ ಜಿಲ್ಲಾ ನಿಯಂತ್ರಕ ನಾಗರಾಜು ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಡಕಾಯಿತರ ಕಾರು ಪತ್ತೆ!

ಕಾರು ಕಂಡು ಬಂದಿದೆ. ಜಯಪುರ ಠಾಣೆ ಪೊಲೀಸರು ಎರಡೂ ಕಾರುಗಳನ್ನು ವಶ ಪಡಿಸಿಕೊಂಡಿದ್ದಾರೆ. ದುಷ್ಕರ್ಮಿಗಳು ಬಳಸಿದ್ದ ದೆಹಲಿ ನೋಂದಣಿಯ ಕಾರಿನ ಸಂಖ್ಯೆ ನಕಲಿಯಾಗಿದ್ದು ಪೊಲೀಸರು ಕಾರನ್ನು ಪರಿಶೀಲಿಸಿದಾಗ ಐದಕ್ಕೂ ಹೆಚ್ಚು ನಂಬರ್ ಪ್ಲೇಟ್‌ಗಳು ದೊರೆತಿವೆ ಎನ್ನಲಾಗಿದೆ. ದುಷ್ಕರ್ಮಿಗಳು ಬಳಸಿದ್ದ ಬೆಂಗಳೂರು ನೋಂದಣಿ ಸಂಖ್ಯೆ ಇರುವ ಕಾರಿನ ನಂಬರ್ ಕೂಡಾ ನಕಲಿ ಇರಬಹುದು ಎಂದು ಹೇಳಲಾಗಿದೆ.

ದುಷ್ಕರ್ಮಿಗಳು ಕಳವು ಮಾಡಿ ತಂದಿರುವ ಕಾರುಗಳಲ್ಲಿ ದುಷ್ಕೃತ್ಯ ಎಸಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮಹತ್ವದ ಕೋರ್ ಕಮಿಟಿ ಸಭೆ

ನಡೆಯಲಿದ್ದು, ನಾಳೆಯ ಸಭೆಯಲ್ಲಿ ರಾಜ್ಯದ ಪರಿಸ್ಥಿತಿ ಬಗ್ಗೆ, ರಾಜ್ಯಾಧ್ಯಕ್ಷ ಬಗ್ಗೆ ಚರ್ಚೆ ನಡೆಯುತ್ತದೆ ಎಂದೂ ಮಾಹಿತಿ ನೀಡಿದರು

ಅಲ್ಲದೆ, ಪಕ್ಷದ ಚುನಾವಣಾ ಅಧಿಕಾರಿಗಳು, ಸಹ ಅಧಿಕಾರಿಗಳು, 13 ಜನ ಮೇಲ್ವಿಚಾರಕರ ಸಭೆಯೂ ನಡೆಯ ಲಿದೆ ಎಂದು ಮಾಹಿತಿ ನೀಡಿದ ಅವರು, ಈ 3 ಸಭೆಗಳಲ್ಲಿ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ. ರಾಜ್ಯದ ಪರಿಸ್ಥಿತಿ, ಸಂಘಟನಾ ವಿಚಾರವಾಗಿ, ರಾಜ್ಯದ ಅಧ್ಯಕ್ಷರ ವಿಚಾರವಾಗಿ ಎಲ್ಲವೂ ಕೂಡ ಸಮಗ್ರವಾಗಿ ಚರ್ಚೆ ಆಗಲಿದೆ ಎಂದು ಪ್ರಕಟಿಸಿದರು.

ಯತ್ನಾಳ್ ವಿರುದ್ಧ ಕ್ರಮ: ಯತ್ನಾಳ್ ವಿರುದ್ಧ ಯಾರು ಕ್ರಮ ಕೈಗೊಳ್ಳ ಬೇಕೋ ಅವರು ತೆಗೆದುಕೊಳ್ಳುತ್ತಾರೆ.. ಫೆಬ್ರವರಿಯಲ್ಲಿ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆ ಇದೆ. ಪಕ್ಷದ ಇವತ್ತಿನ ಬೆಳವಣಿಗೆಗಳ ಬಗ್ಗೆ ಕಾರ್ಯಕರ್ತರ ನೋವು ಇದೆ. ಆ ನೋವು ಏನು ಎಂದು ಅರ್ಥ ಆಗುತ್ತೆ. ಇದೆಲ್ಲದಕ್ಕೂ ಶೀಘ್ರದಲ್ಲೇ ಇತಿಶ್ರೀ ಹಾಡೋ ಕೆಲಸ ಹೈಕಮಾಂಡ್ ಮಾಡುತ್ತದೆ ಎಂದು ವಿಜಯೇಂದ್ರ ತಿಳಿಸಿದರು.

ಮೈಸೂರು ಮಿತ್ರ ಮಂಗಳವಾರ 21 ಜನವರಿ 2025

ಸಿಎಂ ತವರಲ್ಲೇ ಅಧಿಕಾರಿಯ ಸರ್ವಾಧಿಕಾರಿ ಧೋರಣೆ

ಮೈಸೂರು ಮಹಾನಗರಪಾಲಿಕೆ ಆಯುಕ್ತ, ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು,ಜ.20–ಮೈಸೂರು ಮಹಾನಗರಪಾಲಿಕೆ ಆಯುಕ್ತರು ಸಾರ್ವಜನಿಕರು, ರೈತರ ದೂರು–ದುಮ್ಮಾನಗಳನ್ನು ಕೇಳುವ ಸೌಜನ್ಯ ಬೆಳೆಸಿಕೊಳ್ಳಬೇಕು. ಅರ್ಜಿ ಮುಟ್ಟಿದರೆ ಕೈ ಕೊಳೆ ಆಗುತ್ತದೆ ಎಂಬ ಮನಸ್ಥಿತಿಯುಳ್ಳ, ಸಾರ್ವಜನಿಕರ ಕಂಡರೆ ಅಂತರ ಕಾಯ್ದುಕೊಳ್ಳುವ ಅಧಿಕಾರಿಯನ್ನು ಮೈಸೂರು ಮಹಾನಗರಪಾಲಿಕೆಗೆ ನೇಮಿಸಿರುವುದು ಮೈಸೂರಿನ ಜನತೆಯ ದೌರ್ಭಾಗ್ಯ ಎಂದು ಕರ್ನಾಟಕ ರಾಜ್ಯ ರೈತಸಂಘದ ಮುಖಂಡ ಕಿರಂಗೂರು ಪಾಪು (ಮೋಹನ್‌ಕುಮಾರ್) ಆರೋಪಿಸಿದ್ದಾರೆ.

ನಮ್ಮ ಸರ್ಕಾರ ಜನಪರ, ರೈತಪರ, ಬಡವರ ಪರ ಇನ್ನಿತರೆ ವರ್ಗಗಳ ಪರ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಮೈಸೂರು ಮಹಾನಗರಪಾಲಿಕೆ ಸಾರ್ವಜನಿಕರು, ರೈತರು ಹಾಗೂ ಶೋಷಿತರ ದೂರಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಅರ್ಜಿಗಳನ್ನು ನೀಡಿದರೆ ಸಂಬಂಧಪಟ್ಟ ಉಪ ಆಯುಕ್ತ ವಲಯಗಳಿಗೆ ಕಳುಹಿಸಿಕೊಟ್ಟು ಕೈತೊಳೆದುಕೊಳ್ಳುತ್ತಾರೆ. ನಿಗದಿತ ಅವಧಿಗೆ ಅರ್ಜಿಗಳು ವಿಲೇವಾರಿ ಆಗುತ್ತಿಲ್ಲ. ಇದಲ್ಲದೆ ಕೆಲಸ ಕಾರ್ಯಗಳು ಯಾವ ಹಂತದಲ್ಲಿವೆ, ಏನಾಗಿವೆ, ಎಂಬ ಮಾಹಿತಿಗಳು ತಿಳಿಯುತ್ತಿಲ್ಲ. ವರ್ಷಾನುಗಟ್ಟಲೆ ಅಲೆದರೂ ಅರ್ಜಿಗೆ ಹಿಂಬರಹ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ನಿತ್ಯ ನೂರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಅಲೆದಾಡಿದರೂ ಅಧಿಕಾರಿಗಳು ಕ್ಯಾರೆ ಅನ್ನುತ್ತಿಲ್ಲ ಎಂದು ದೂರಿದ್ದಾರೆ. ಆಯುಕ್ತರು ಕಚೇರಿಯಲ್ಲಿದ್ದರೂ ಫೋನ್‌ನಲ್ಲಿದ್ದಾರೆ, ವಿಡೀಯೋ ಕಾನ್ಫರೆನ್ಸ್‌ನಲ್ಲಿದ್ದಾರೆ, ಮೀಟಿಂಗ್‌ನಲ್ಲಿದ್ದಾರೆ ಎಂದು ಸಬೂಬು ಹೇಳಿ ಸಾರ್ವಜನಿಕರನ್ನು, ಜನಸಾಮಾನ್ಯರನ್ನು ಸಾಗಹಾಕುವ ಕಾಯಕ ಮಾಡಿಕೊಂಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಆಗೋ ಹೀಗೋ ಆಯುಕ್ತರನ್ನು ಭೇಟಿ ಮಾಡಿದರೆ ನಮ್ಮ ನೋವಿಗೆ ಸ್ಪಂದಿಸುವ ಕೆಲಸ ಮಾಡುತ್ತಿಲ್ಲ ಬರೀ ರಿಯಲ್ ಎಸ್ಟೇಟ್, ಆ ದಾಖಲೆ, ಈ ದಾಖಲೆ ಎಂಬ ಖಾಸಗಿ ವಿಷಯಗಳ ಬಗ್ಗೆ ಮಾತನಾಡುತ್ತಾ ನಮ್ಮನ್ನು ಸಾಗ ಹಾಕುತ್ತಾರೆ ಎಂದು ದೂರಿದ್ದಾರೆ.

ಯಾವುದೇ ಸಂಶೋಧನೆ ಸಾಮಾಜಿಕ ನ್ಯಾಯದ ಪ್ರಜ್ಞೆ ಹೊಂದಿರಬೇಕು

'ದಲಿತ ಜಾನಪದ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪ್ರೊ. ಮೊಗಳ್ಳಿ ಗಣೇಶ್ ಅಭಿಮತ



ಮಾನಸಗಂಗೋತ್ರಿ ಇಎಂಎಂಆರ್‌ಸಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪ್ರೊ.ಮೊಗಳ್ಳಿ ಗಣೇಶ್ ಅವರ 'ದಲಿತ ಜಾನಪದ' ಕೃತಿಯನ್ನು ಚಿಂತಕ ಪ್ರೊ.ಕಾಳೇಗೌಡ ನಾಗವಾರ ಬಿಡುಗಡೆ ಮಾಡಿದರು.

ಮೈಸೂರು,ಜ.20(ಎಂಟಿವೈ)– ಯಾವುದೇ ಸಂಶೋಧನೆಗಳು ಅಲಂಕಾರಿಕವಾಗಿರದೆ ಸಾಮಾಜಿಕ ನ್ಯಾಯದ ಪ್ರಜ್ಞೆ ಹೊಂದಿರಬೇಕು ಎಂದು ಜಾನಪದ ವಿದ್ವಾಂಸ ಹಾಗೂ ಹಿರಿಯ ಸಾಹಿತಿ ಪ್ರೊ.ಮೊಗಳ್ಳಿ ಗಣೇಶ್ ಅಭಿಪ್ರಾಯಪಟ್ಟಿದ್ದಾರೆ.

ಮಾನಸಗಂಗೋತ್ರಿ ಇಎಂಎಂಆರ್‌ಸಿ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಜಾನಪದ ಅಧ್ಯಯನ ವಿಭಾಗ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ವತಿಯಿಂದ ಸೋಮವಾರ ಆಯೋಜಿಸಿದ್ದ ಪ್ರೊ.ಮೊಗಳ್ಳಿ ಗಣೇಶ್ ಅವರ ದಲಿತ ಜಾನಪದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯದ ಪ್ರಜ್ಞೆ ಇಲ್ಲದೆ ಇರುವ ಸಂಶೋಧನೆಗಳು ಬೂಸದಂತೆ ಸತ್ವ ಇಲ್ಲದ ಸಂಶೋಧನೆಗಳಾಗಿರುತ್ತವೆ. ಇದರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವೂ ಆಗುವುದಿಲ್ಲ. ಅಂತಹ ಸಂಶೋಧನೆಗಳು ಕೇವಲ ಅಲಂಕಾರಿಕವಾಗಿರುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದರು.

ದೇಶದಲ್ಲಿ ಕೆಳ ಜಾತಿಗೆ ಸೇರಿದ ಬಹುಸಂಖ್ಯಾತ ಜನರಿದ್ದಾರೆ. ಜಾತಿ ವ್ಯವಸ್ಥೆ ಕ್ರೂರವಾಗಿದ್ದು, ಸಮಾಜವನ್ನೇ ಕಟ್ಟಿಹಾಕುತ್ತದೆ. ಆದರೂ ದಲಿತ ಜಾಗೃತಿಯ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಕನ್ನಡ ವಿವಿಯಲ್ಲಿ ನಾನು ಎಲ್ಲಾ ತರಗತಿಯಲ್ಲಿ ಈ ವಿಷಯದ ಕುರಿತು ಮಾತನಾಡುತ್ತೇನೆ. ನೆಪ ಮಾತ್ರಕ್ಕೆ ನಾನು ಜಾನಪದ ಪ್ರಾಧ್ಯಾಪಕನಷ್ಟೆ ಆದರೆ ಇಡೀ ವಿಶ್ವವಿದ್ಯಾನಿಲಯಕ್ಕೆ ಪ್ರಾಧ್ಯಾಪಕ. ಏಕೆಂದರೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ನನ್ನ ಪಾಠ ಕೇಳಲು ಬರುತ್ತಾರೆ. ಪೂರ್ವಗ್ರಹ ಪೀಡಿತತನದಿಂದ ಆಚೆ ಬರುವುದಕ್ಕಾಗಿ ಅನೇಕ ವಿದ್ಯಾರ್ಥಿಗಳು ಆಸಕ್ತಿಯಿಂದ ನನ್ನ ತರಗತಿಗೆ ಬರುತ್ತಾರೆ. ಅಂಬೇಡ್ಕರ್ ದೃಷ್ಟಿ ಕೋನದಿಂದ ಅಧ್ಯಯನ ಮಾಡಿದರೆ ಅಸ್ಪೃಶ್ಯತೆಗೆ ಅವಕಾಶವೇ ಇರುವುದಿಲ್ಲ. ನಾವು ಅಸ್ಪೃಶ್ಯತೆ ಎಂಬುದನ್ನು ಕೆಲವರು ಸಂಸ್ಕೃತಿ ಎನ್ನುತ್ತಾರೆ. ಬೆತ್ತಲೆ ಸೇವೆ ಅಸ್ಪೃಶ್ಯತೆ ಆಚರಣೆ ಎಂದರೆ, ಅದು ನಮ್ಮ ಸಂಸ್ಕೃತಿ ಎಂದು ಕೆಲವರು ಹೇಳುತ್ತಾರೆ ಎಂದು ವಿಷಾದಿಸಿದರು.

ಯಾರು ಜಾತಿ ವ್ಯವಸ್ಥೆಯನ್ನು ಆರಾಧಿಸುತ್ತಾರೋ ಅವರೇ ಬಂಧಿತರು. ವಿಮೋಚನೆ ಆಗಬೇಕಿರುವುದು ನಮ್ಮನ್ನು ಬಂಧಿಸಿರುವವರು. ಆ ವಿಷಯದಲ್ಲಿ ನಾವು ಕನಿಕರ ಪಡಬೇಕು ಎಂದು ಹೇಳಿದರು.

ಇದೇ ವೇಳೆ ಪುಸ್ತಕ ಬಿಡುಗಡೆಗೊಳಿಸಿ, ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಋಗ್ವೇದ ಮತ್ತು ಗಾದೆಗಳಲ್ಲಿ ಹೆಣ್ಣನ್ನು ತೀರ ತುಚ್ಛವಾಗಿ ನಿಂದನೆ ಮಾಡಲಾಗಿದೆ. ಆದರೆ, ಜಾನಪದರು ಮಹಿಳೆಗೂ ಸ್ಥಾನಮಾನ ನೀಡಿದ್ದಾರೆ. ಹಿಂದೂ ಧರ್ಮದ ಪ್ರಕಾರ ವಿಧವೆ ಮರು ಮದುವೆ ಆಗುವ ಅವಕಾಶವಿಲ್ಲ. ಆದರೆ, ಜಾನಪದಲ್ಲಿ ಮರು ಮದುವೆಗೆ ಅವಕಾಶ ಕೊಟ್ಟರು. ಮೊಗ್ಗಳಿ ಗಣೇಶ್ ಅವರಿಗೆ ಹಳ್ಳಿಗಾಡಿನ ಆಳವಾದ ಅನುಭವ, ದಲಿತ ಲೋಕದ ತಲ್ಲಣ, ನೋವು ಗೊತ್ತಿದ್ದರಿಂದ ಒಳ್ಳೆಯ ಪುಸ್ತಕ ಬರೆದಿದ್ದಾರೆ ಎಂದು ಶ್ಲಾಘಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಎಷ್ಟೋ ದೇವಾಲಯಗಳಿಗೆ ಸೇರಿಸಲ್ಲ. ಇಂದಿರಾ ಗಾಂಧಿಯನ್ನು ಸೇರಿಸಿಲ್ಲ. ಆಂಗ್ಲ ಮಹಿಳೆಯೊಬ್ಬರು ಹಿಂದೂ ಧರ್ಮ ಬಹಳ ಪವಿತ್ರವಾದದ್ದು, ವಿಶಿಷ್ಟವಾದದ್ದು ಎಂದು ಧಾವಿಸಿ ಹಿಂದೂ ಧರ್ಮದ ಮಹಿಳೆಯರಂತೆ ಸೀರೆ, ಕುಂಕುಮ ಧರಿಸಿ ಒರಿಸ್ಸಾದ ಲಿಂಗರಾಜ ದೇವಸ್ಥಾನಕ್ಕೆ ಹೋದರು. ಆದರೆ ಆಕೆ ಆಕೆಯ ಮೈ ಬಣ್ಣದ ಕಾರಣದಿಂದ ದೇವಾಲಯದ ಒಳಗೆ ಬಿಡಲಿಲ್ಲ. ಇಂತಹ ಪರಿಸ್ಥಿತಿ ನಮ್ಮ ದೇಶದಲ್ಲಿದೆ ಎಂದು ವಿಷಾದಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು, ಸಿಂಡಿಕೇಟ್ ಸದಸ್ಯ ಡಾ.ನಟರಾಜ್ ಶಿವಣ್ಣ, ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪುನೀತ್ ಆಲನಹಳ್ಳಿ ಇತರರಿದ್ದರು.

ಮೈಸೂರಲ್ಲಿ ಫೆ.1ರಿಂದ 'ಸಂಸ್ಕೃತ ಕಾವೇರಿ' ರಾಜ್ಯ ಮಟ್ಟದ ಸಮ್ಮೇಳನ



ಶಾಸಕ ಟಿ.ಎಸ್.ಶ್ರೀವತ್ಸ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಮೈಸೂರು, ಜ.20(ಬಿಎಲ್‌ಯು)– ಸಂಸ್ಕೃತ ಭಾರತಿ ಆಯೋಜಿಸಿರುವ 'ಸಂಸ್ಕೃತ ಕಾವೇರಿ' ರಾಜ್ಯ ಮಟ್ಟದ ಸಮ್ಮೇಳನ ಫೆಬ್ರವರಿ 1 ರಿಂದ ಎರಡು ದಿನಗಳ ಕಾಲ ಮೈಸೂರಿನಲ್ಲಿ ನಡೆಯಲಿದೆ ಎಂದು ಸಂಸ್ಕೃತ ಕಾವೇರಿ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆಯುವ ಸಮ್ಮೇಳನವನ್ನು ಫೆಬ್ರವರಿ 1 ಬೆಳಿಗ್ಗೆ 10 ಗಂಟೆಗೆ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಉದ್ಘಾಟಿಸಲಿದ್ದಾರೆ ಎಂದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿನಂದಾಜಿ ಮಹರಾಜ್ ಸಾನಿಧ್ಯ ವಹಿಸಲಿದ್ದು, ಸಂಸ್ಕೃತ ಭಾರತಿ ರಾಜ್ಯಾಧ್ಯಕ್ಷ ಪ.ನಾ.ಶಾಸ್ತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಶ್ರೀವತ್ಸ ತಿಳಿಸಿದರು.

ಸಮ್ಮೇಳನದಲ್ಲಿ ರಾಜ್ಯಾದ್ಯಾಂತ ಸುಮಾರು 1200 ಸಂಸ್ಕೃತ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೂ ಮುನ್ನ ನಗರದ ವಿದ್ಯಾರಣ್ಯಪುರಂನಲ್ಲಿರುವ ಭೂತಾಳೆ ಪಿಚ್‌ನಿಂದ ಗಣಪತಿ ಆಶ್ರಮದವರೆಗೆ ಶೋಭಾಯಾತ್ರೆ ಆಯೋಜಿಸಲಾಗಿದೆ ಎಂದು ಹೇಳಿದರು.


ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ, ವಿವಿಧ ಗೋಷ್ಠಿ, ಸಾರ್ವಜನಿಕ ಸಭೆ, ವಸ್ತು ಪ್ರದರ್ಶನ, ವಿಜ್ಞಾನ ಪ್ರದರ್ಶನ, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಪ್ರತಿ ಮೂರು ವರ್ಷಕ್ಕೊಮ್ಮೆ ಪ್ರಾಂತ ಸಮ್ಮೇಳನ ನಡೆಯಲಿದ್ದು, ಈ ಬಾರಿ ಮೈಸೂರಿನಲ್ಲಿ ಆಯೋಜಿಸಲಾಗಿದೆ. ಫೆಬ್ರವರಿ 2 ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸ್ಕೃತ ಭಾರತೀಯ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿ ಜಯಪ್ರಕಾಶ್ ಗೌತಮ್ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಸಂಸ್ಕೃತ ಕಾವೇರಿ ಸ್ವಾಗತ ಸಮಿತಿ ಕಾರ್ಯದರ್ಶಿಗಳೂ ಆದ ವಕೀಲ ಅ.ಮ.ಭಾಸ್ಕರ್, ಸಮ್ಮೇಳನದ ಸಂಚಾಲಕಿ ಡಾ.ಬಿ.ಜಿ.ಭಾಗ್ಯಲಕ್ಷ್ಮಿ, ಡಾ.ಪ್ರಭಾಕರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಳೆ ವಿಶೇಷ 'ಸ್ವಾತಿ' ಪೂಜೆ

ಮೈಸೂರು,ಜ.20–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜ.22ರಂದು 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ.



ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಬಾಡಿಗೆ ವಾಹನ ಪಡೆಯಲು ದರಪಟ್ಟಿ ಆಹ್ವಾನ

ಮೈಸೂರು,ಜ.20–ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೈಸೂರು ಪ್ರಾದೇಶಿಕ ಕಚೇರಿಗೆ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು (ತಾತ್ಕಾಲಿಕ) ನಿರ್ಧರಿಸಿದ್ದು, ಈ ಸಂಬಂಧ ದರಪಟ್ಟಿ (ಕ್ವಟೇಷನ್) ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರದಿಂದ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಯವರು ಹೊರಗುತ್ತಿಗೆ ಆಧಾರದ ಮೇಲೆ ಟೊಯೊಟಾ ಇಟಿಯೋಸ್ (ಎಸಿ) ಮೂರು ವರ್ಷಗಳ ಒಳಗಿನ ವಾಹನವನ್ನು ಪ್ರತಿ ತಿಂಗಳಿಗೆ 2500 ಕಿ.ಮೀ. ಇಲ್ಲವೆ 300 ಗಂಟೆಗೆ ಅನ್ವಯವಾಗಿ ಮೊಹರು ಮಾಡಿದ ದರಪಟ್ಟಿಯ ಲಕೋಟೆಯನ್ನು 7 ದಿನಗದೊಳಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ–1 ಪ್ಲಾಟ್ ನಂ. 436–ಡಿ, ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಕೆಆರ್‌ಎಸ್ ರಸ್ತೆ, ಮೇಟಗಳ್ಳಿ, ಮೈಸೂರು ನಗರ, ಮೈಸೂರು–570016 ಇಲ್ಲಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ರೈತರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜ.26ಕ್ಕೆ ಟ್ರ್ಯಾಕ್ಟರ್ ರ‍್ಯಾಲಿ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತಾಡಿದರು.

ಮೈಸೂರು, ಜ.20(ಬಿಎಲ್‌ಯು)– ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜ.26ರಂದು ಮೈಸೂರು ಸೇರಿದಂತೆ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಟ್ರ್ಯಾಕ್ಟರ್ ರ‍್ಯಾಲಿ ನಡೆಸಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಡಿಯಲ್ಲಿ ದೇಶ ರಕ್ಷಣೆ ವೇಳೆ ಹುತಾತ್ಮರಾದ ಯೋಧರ ನೆನಪಿಗಾಗಿ ಜನವರಿ 30ರಂದು ದಾವಣಗೆರೆಯಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಹುತಾತ್ಮ ಯೋಧರ ಕುಟುಂಬವನ್ನು ಅಭಿನಂದಿಸಲಾಗುವುದು ಎಂದು ಹೇಳಿದರು.

ದೆಹಲಿ ಗಡಿಯಲ್ಲಿ ರೈತರ ಹಿತಕ್ಕಾಗಿ ಹೋರಾಟ ಮಾಡುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಸಂಚಾಲಕ ಜಗಜಿತ್ ಸಿಂಗ್ ದಲ್ಲೆವಾಲಾ ಅವರು 53 ದಿನಗಳ ಉಪವಾಸ ಸತ್ಯಾಗ್ರಹ ನಿಲ್ಲಿಸಿ ವೈದ್ಯಕೀಯ ಚಿಕಿತ್ಸೆಗೆ ಸಮ್ಮತಿ ಸೂಚಿಸಿರುವುದನ್ನು ಈ ವೇಳೆ ಸ್ವಾಗತಿಸಿದರು.

ರೈತರ ಹಲವು ಬೇಡಿಕೆ ಈಡೇರಿಸುವುದಾಗಿ ಕೇಂದ್ರ ಸರ್ಕಾರ ದಲ್ಲೆವಾಲ ಉಪವಾಸ ಸತ್ಯಾಗ್ರಹ ನಿಲ್ಲಿಸುವ ವೇಳೆ ಭರವಸೆ ನೀಡಿದ್ದು, ಇದನ್ನು ಈಡೇರಿಸಬೇಕು ಎಂದು ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ದೇವನೂರು ವಿಜಯೇಂದ್ರ, ಸಾತಗಳ್ಳಿ ಬಸವರಾಜು, ಹಳ್ಳಿಕೆರೆ ಹುಂಡಿ ಪ್ರಭುಸ್ವಾಮಿ, ಕುರುಬೂರು ಪ್ರದೀಪ್, ವಾಜಮಂಗಲ ನಾಗೇಂದ್ರ ಉಪಸ್ಥಿತರಿದ್ದರು.

ಪತ್ನಿ, ಅತ್ತೆ ಕಿರುಕುಳ: ವಿಡಿಯೋ ಮಾಡಿಟ್ಟು ವ್ಯಕ್ತಿ ಆತ್ಮಹತ್ಯೆ

ರಾಜ್‌ಗಢ: ಬೆಂಗಳೂರು ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣದಂತೆ ಮಧ್ಯಪ್ರದೇಶದಲ್ಲಿ 27 ವರ್ಷದ ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಯ್‌ಗಢ ಜಿಲ್ಲೆಯ 27 ವರ್ಷದ ವ್ಯಕ್ತಿಯೊಬ್ಬ ತನ್ನ ಪತ್ನಿ ಮತ್ತು ಅತ್ತೆಯ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ವಿಡಿಯೋ ರೆಕಾರ್ಡ್ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಕಶ್ಯಪ್ ತನ್ನ ಮೊಬೈಲ್ ಫೋನ್‌ನಲ್ಲಿ ಚಿತ್ರೀಕರಿಸಿದ ವೀಡಿಯೊದಲ್ಲಿ ಪತ್ನಿ ಮತ್ತು ಅತ್ತೆ ಮೇಲೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿರುವುದಾಗಿ ಬಿಯೋರಾ ನಗರ ಪೊಲೀಸ್ ಠಾಣೆಯ ಉಸ್ತುವಾರಿ ವೀರೇಂದ್ರ ಧಕಡ್ ಹೇಳಿದ್ದಾರೆ. ತನಿಖೆ ನಂತರ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದರು. ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೋ ವೈರಲ್ ಆಗಿದ್ದು, ಹೆಂಡತಿ 15 ದಿನಗಳಿಗೊಮ್ಮೆ ತವರು ಮನೆಗೆ ಹೋಗುತ್ತಾಳೆ. ಹಿಂದಿರುಗಿದ ನಂತರ ನನ್ನ ಕುಟುಂಬದೊಂದಿಗೆ ಜಗಳವಾಡುತ್ತಾಳೆ. ಅತ್ತೆ ಕೂಡ ತನಗೆ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಪತ್ನಿಯನ್ನು ಮರಳಿ ಕರೆತರಲು ಸಾಧ್ಯ ವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇನೆ. ಆದರೆ ಆಕೆ ಒಂಟಿಯಾಗಿ ಬದುಕಲು ಬಯಸಿದ್ದಾಳೆಂದು ಕಶ್ಯಪ್ ಹೇಳಿಕೊಂಡಿದ್ದಾರೆ.



ಆಹ್ವಾನ ಪತ್ರ ನೀಡಿಕೆ

ನಟ ಡಾಲಿ ಧನಂಜಯ ಅವರು ತಮ್ಮ ವಿವಾಹದ ಆಹ್ವಾನ ಪತ್ರಿಕೆಯನ್ನು ಖ್ಯಾತ ಉದ್ಯಮಿ ಸ್ವೀಟ್ ಮಹೇಶ್ ಅವರಿಗೆ ನೀಡಿದರು. ಈ ವೇಳೆ ಮಹೇಶ್ ಅವರ ಪುತ್ರ ಸೂರಜ್ ಮಹೇಶ್, ಪತ್ರಕರ್ತ ಕೆ.ಪಿ.ನಾಗರಾಜ್ ಇದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.20–ಶ್ರೀ ಮಾರೇಹಳ್ಳಿ ಲಕ್ಷ್ಮೀನರಸಿಂಹ ಸ್ವಾಮಿ ಕೈಂಕರ್ಯ ಸಭಾ ವತಿಯಿಂದ 2023–24ನೇ ಸಾಲಿನಲ್ಲಿ ಅತ್ಯುನ್ನತ ಅಂಕ ಗಳಿಸಿದ ಅರ್ಹ ಶ್ರೀ ವೈಷ್ಣವ (ಅಯ್ಯಂಗಾರ್) ಅಭ್ಯರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದೆ. ಅರ್ಹ ಶ್ರೀ ವೈಷ್ಣವ (ಅಯ್ಯಂಗಾರ್) ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ದೃಢೀಕರಿಸಿದ ಅಂಕಪಟ್ಟಿಯ ನಕಲನ್ನು ಶ್ರೀ ಮಾರೇಹಳ್ಳಿ ಲಕ್ಷ್ಮೀನರಸಿಂಹಸ್ವಾಮಿ ಕೈಂಕರ್ಯ ಸಭಾ, ಈಜುಕೊಳದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ಫೆ.25ರೊಳಗೆ ತಲುಪಿಸತಕ್ಕದ್ದು. ಮಾಹಿತಿಗೆ ದೂ. 080–23560318, 9449905340 ಸಂಪರ್ಕಿಸಬಹುದು.

ವೇಮನ ಅವರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ವೇಮನ ಜಯಂತಿ ಕಾರ್ಯಕ್ರಮದಲ್ಲಿ ವೇಮನ ಅವರ ಭಾವಚಿತ್ರಕ್ಕೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಜ.20(ಎಂಟಿವೈ)– ಸಮಾಜದಲ್ಲಿ ಬೇರೂರಿದ್ದ ಅಂದಕಾರ ಹಾಗೂ ಜಾತಿ–ಬೇದ ತೊಡೆದು ಹಾಕಿ ತಮ್ಮದೇ ಆದ ವಿಚಾರಧಾರೆ ಮೂಲಕ ಸಮಾಜದಲ್ಲಿ ಪರಿವರ್ತನೆ ಮಾಡಲು ಶ್ರಮಿಸಿದ ವೇಮನ ಅವರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ವೇಮನ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಪರಿವರ್ತನೆಗೆ ತಮ್ಮ ವಿಚಾರಧಾರೆಗಳ ಮೂಲಕ ಬೆಳಕನ್ನು ಚೆಲ್ಲಿರುವ ವೇಮನ ಅವರು ಸರ್ವಕಾಲಕ್ಕೂ ಪ್ರಸ್ತುತರೆನಿಸಿದ್ದಾರೆ. ಸಮಾಜವನ್ನು ಒಳ್ಳೆಯ ದಾರಿಗೆ ತರುವಂತಹ ಕೆಲಸವನ್ನು ವೇಮನ ಅವರು ಮಾಡಿದ್ದಾರೆ. ಜಾತಿ–ಬೇಧಗಳನ್ನು ತೊಡೆದು, ಆವರಿಸಿದ್ದ ಕತ್ತಲನ್ನು ತೊಲಗಿಸಿ ಬೆಳಕು ಚೆಲ್ಲಿದ್ದಾರೆ. ವೇಮನ ಅವರ ವಿಚಾರಧಾರೆಗಳನ್ನು ಮುಂದಿನ ಪೀಳಿಗೆಗೆ ತಿಳಿಸಬೇಕಾಗಿದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಮಹಾಯೋಗಿ ವೇಮನ ಅವರ ಆದರ್ಶಗಳು ಮಹತ್ವದ್ದಾಗಿದೆ. ಸಮಾಜದಲ್ಲಿರುವ ಎಲ್ಲರೂ ಸಮಾನರು, ಯಾವುದೇ ಜಾತಿ ಬೇಧ ಇಲ್ಲದೆ ನಾವೆಲ್ಲರೂ ಒಂದು ಎಂಬುದನ್ನು ನಮಗೆ ತಿಳಿಸಿಕೊಟ್ಟಿರುವಂತಹ ವೇಮನಂತಹ ಮಹಾನ್ ದಾರ್ಶನಿಕರು ನಮಗೆ ದಾರಿದೀಪವಾಗಿದ್ದಾರೆ. ವೇಮನ ಜಯಂತಿಯನ್ನು ಕೇವಲ ಒಂದು ವರ್ಗ ಮಾತ್ರ ಆಚರಿ ಸದೇ ಎಲ್ಲರೂ ಸೇರಿ ಆಚರಿಸಬೇಕು. ಸಮಾಜಕ್ಕೆ ದಾರಿದೀಪವಾದ ಮಹನೀಯರನ್ನು ಒಂದು ವರ್ಗ ಸೀಮಿತಗೊಳಿಸಿದೆ, ಎಲ್ಲರೂ ಮಹಾನ್ ವ್ಯಕ್ತಿಗಳ ಆದರ್ಶ ಪಾಲನೆ ಮಾಡಬೇಕು. ಆಗ ಮಾತ್ರ ಆರೋಗ್ಯವಂತೆ ಸಮಾಜ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೃಷ್ಣರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ಮಾತನಾಡಿ, ಭಾರತ ದೇಶವು ತತ್ವಜ್ಞಾನಿಗಳ ತವರು, ಭಾರತ ದೇಶದಲ್ಲಿ ಹುಟ್ಟಿರುವಂತಹ ತತ್ವಜ್ಞಾನಿಗಳು ಬೇರೆಲ್ಲೂ ಹುಟ್ಟಿಲ್ಲ ಬೇರೆ ಬೇರೆ ಕಾಲಘಟ್ಟಗಳಲ್ಲಿ ಕಾಣಿಸಿಕೊಂಡಿರುವಂತಹ ತತ್ವಜ್ಞಾನಿಗಳು ಈ ದೇಶವನ್ನು ಕಟ್ಟಿ ಬೆಳೆಸುವುದಕ್ಕೆ ಕೊಟ್ಟಿರುವಂತಹ ಕೊಡುಗೆ ಅಪಾರವಾಗಿದೆ. ಅವರಲ್ಲಿ ವೇಮನನಂತಹ ಸರ್ವಜ್ಞರು ಕೂಡ ನಮ್ಮ ದೇಶಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ವೇಮನ ಅವರು ನಮಗೆ ವ್ಯಕ್ತಿಶೀಲವನ್ನು ಹೇಳಿಕೊಟ್ಟಿದ್ದಾರೆ, ಜೊತೆಗೆ ಸಮಾನತೆ, ಮತ್ತು ಸತ್ಯ ಎಂಬ ಎರಡು ತತ್ವವನ್ನು ನೀಡಿದ್ದಾರೆ. ಎಲ್ಲಾ ಕಾಲವೂ, ಎಲ್ಲಾ ಸಮಾಜವು ನೆಮ್ಮದಿಯಿಂದ ಇರಲು ಈ ಎರಡು ತತ್ವಗಳು ಸಾಕು ಎಂದು ವೇಮನ ಅವರು ನಮಗೆ ತಿಳಿಸಿದ್ದಾರೆ ಇದಕ್ಕಿಂತ ನಮಗೆ ಇನ್ನೇನು ಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನದ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ಅಧ್ಯಕ್ಷ ಡಾ.ಬಿ.ಎಂ.ವಾಮದೇವ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಪ್ಯಾಲೆಸ್ತೀನ್‌ನ 90 ಕೈದಿಗಳಿಗೆ ಪ್ರತಿಯಾಗಿ ಮೂವರು ಒತ್ತೆಯಾಳುಗಳನ್ನು ಬಿಟ್ಟ ಹಮಾಸ್



ಗಾಜಾ: ಒಂದು ವರ್ಷಕ್ಕೂ ಹೆಚ್ಚು ಕಾಲ ಇಸ್ರೇಲ್ ಮತ್ತು ಹಮಾಸ್ ನಡುವೆ ನಡೆಯುತ್ತಿದ್ದ ಯುದ್ಧ ಭಾನುವಾರ ತಾತ್ಕಾಲಿಕ ಅಂತ್ಯ ಕಂಡಿದೆ. ಕದನ ವಿರಾಮ ಒಪ್ಪಂದದ ಅಡಿಯಲ್ಲಿ 3 ಇಸ್ರೇಲಿ ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆ ಮಾಡಿದ್ದು, ಅವರು ಇಸ್ರೇಲ್ ತಲುಪಿದ್ದಾರೆ. ಬಿಡುಗಡೆಯಾದ ಒತ್ತೆಯಾಳುಗಳೆಲ್ಲರೂ ಮಹಿಳೆಯರು. ಅದೇ ಸಮಯದಲ್ಲಿ ಒಪ್ಪಂದದ ಅಡಿಯಲ್ಲಿ ಇಸ್ರೇಲ್ 90 ಪ್ಯಾಲೇಸ್ತಿನಿಯನ್ ಕೈದಿಗಳನ್ನು ಬಿಡುಗಡೆ ಮಾಡಿದೆ.

ಇಸ್ರೇಲ್ ಬಂಧಿಸಿರುವ ಹೆಚ್ಚಿನ ಪ್ಯಾಲೆಸ್ತೀನ್ ಕೈದಿಗಳಲ್ಲಿ ಮಹಿಳೆಯರು ಮತ್ತು ಅಪ್ರಾಪ್ತ ಮಕ್ಕಳು ಸೇರಿದ್ದಾರೆ. ಇಸ್ರೇಲ್ ಈ ಪಟ್ಟಿಯಲ್ಲಿರುವ ಎಲ್ಲಾ ಜನರನ್ನು ದೇಶದ ಭದ್ರತೆಗೆ ಸಂಬಂಧಿಸಿದ ಅಪರಾಧಗಳಿಗಾಗಿ ಬಂಧಿಸಿತ್ತು, ಕಲ್ಲು ಎಸೆಯುವಿಕೆಯಿಂದ ಹಿಡಿದು ಕೊಲೆಯ ಯತ್ನದಂತಹ ಗಂಭೀರ ಆರೋಪಗಳವರೆಗೆ. ಇಸ್ರೇಲ್ ಮತ್ತು ಹಮಾಸ್ ನಡುವೆ ಕದನ ವಿರಾಮ ಮುಂದುವರೆದರೆ ಈಗಾಗಲೇ ನಿಗದಿಯಾಗಿರುವ ಜನವರಿ 25ರಂದು ಮುಂದಿನ ಹಂತದ ಕೈದಿಗಳ ವಿನಿಮಯ ನಡೆಯಲಿದೆ. ಮುಂದಿನ ವಿನಿಮಯದಲ್ಲಿ ಹಮಾಸ್ ನಾಲ್ವರು ಇಸ್ರೇಲಿ ಮಹಿಳಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡುತ್ತದೆ.

ಬಾಯ್ ಫ್ರೆಂಡ್ ಹತ್ಯೆ ಮಾಡಿದ ಮಹಿಳೆಗೆ ಮರಣದಂಡನೆ



ತಿರುವನಂತಪುರಂ: 2022ರಲ್ಲಿ ತನ್ನ ಬಾಯ್ ಫ್ರೆಂಡ್ ಶರೋನ್ ರಾಜ್‌ಗೆ ಮಾರಕ ಕಳೆನಾಶಕ ಬೆರೆಸಿದ ಆಯುರ್ವೇದ ಮಿಶ್ರಣವನ್ನು ಕುಡಿಸಿ ಕೊಲೆ ಮಾಡಿದ ಆರೋಪದ ಮೇಲೆ ಕನ್ಯಾಕುಮಾರಿ ಜಿಲ್ಲೆಯ ರಾಮವರ್ಮಂಚಿರದ 24 ವರ್ಷದ ಮಹಿಳೆ ಗ್ರೀಷ್ಮಾಗೆ ನೆಯ್ಯಟ್ಟಿಂಕರಗೆ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ನ್ಯಾಯಮೂರ್ತಿ ಎ.ಎಂ. ಬಶೀರ್ ಅವರು ವಾದ–ಪ್ರತಿವಾದ ಆಲಿಸಿದ ನಂತರ ತೀರ್ಪು ನೀಡಿ, ಇದು ಅಪರೂಪದ ಪ್ರಕರಣ. ಸರಿಯಾಗಿ ಪೂರ್ವನಿಯೋಜಿತವಾಗಿ ನಡೆಸಿದ ಅಪರಾಧ ಕೃತ್ಯವಾಗಿದೆ ಎಂದು ತೀರ್ಮಾನಿಸಿದರು. ಆರೋಪಿಯು ಆಕೆಯ ವಯಸ್ಸು ಮತ್ತು ಶೈಕ್ಷಣಿಕ ಅರ್ಹತೆಯ ಕಾರಣದಿಂದಾಗಿ ಯಾವುದೇ ವಿನಾಯ್ತಿಗೆ ಅರ್ಹಳಲ್ಲ. ಮಹಿಳೆಯ ಕೃತ್ಯವು ಸಮಾಜಕ್ಕೆ ತಪ್ಪು ಸಂದೇಶವನ್ನು ರವಾನಿಸುತ್ತಿದ್ದು ಆರೋಪಿ ಪ್ರೀತಿಯ ಪಾವಿತ್ರ್ಯತೆಯನ್ನು ಉಲ್ಲಂಘಿಸಿದ್ದಾಳೆ ಎಂದು ಕಂಡುಬರುತ್ತಿದೆ ಎಂದರು. ತೀರ್ಪು ಕೇಳಲು ಶರೋನ್ ಪೋಷಕರನ್ನು ನ್ಯಾಯಾಲಯವು ಕರೆಸಿಕೊಂಡಿತ್ತು ತೀರ್ಪು ಪ್ರಕಟಿಸುತ್ತಿದ್ದಂತೆ ಪೋಷಕರು ಕಣ್ಣೀರು ಸುರಿಸಿದರು. ಶರೋನ್‌ರಾಜ್, ಅ.14, 2022ರಂದು ತೀವ್ರ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಫಲಕಾರಿಯಾಗದೆ ನಿಧನ ಹೊಂದಿದ್ದರು.

ಅಮೆರಿಕದ ಓಹಿಯೋ ಗವರ್ನರ್ ಹುದ್ದೆಗೆ ಸ್ಪರ್ಧಿಸಲು ವಿವೇಕ್ ರಾಮಸ್ವಾಮಿ ಪ್ಲಾನ್



ನ್ಯೂಯಾರ್ಕ್: ಸರ್ಕಾರದ ದಕ್ಷತೆಯನ್ನು ಸುಧಾರಿಸುವ ಸಂಸ್ಥೆಯೊಂದರ ಸಹ ಮುಖ್ಯಸ್ಥರಾಗಿ ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇಮಕ ಮಾಡಿರುವ ವಿವೇಕ್ ರಾಮಸ್ವಾಮಿ ಅವರು ಓಹಿಯೋ ಗವರ್ನರ್ ಹುದ್ದೆಗೆ ಸ್ಪರ್ಧಿಸಲು ಯೋಜಿಸುತ್ತಿದ್ದಾರೆ. ವಿವೇಕ್ ರಾಮಸ್ವಾಮಿ ಶೀಘ್ರದಲ್ಲೇ ಈ ಬಗ್ಗೆ ಘೋಷಿಸಲಿದ್ದಾರೆ ಎಂದು ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಒಂದು ವೇಳೆ ಅವರು ಚುನಾಯಿತರಾದರೆ ಲೂಯಿಸಿಯಾನದಲ್ಲಿ ಬಾಬಿ ಜಿಂದಾಲ್ ಮತ್ತು ದಕ್ಷಿಣ ಕೆರೊಲಿನಾದ ನಿಕ್ಕಿ ಹ್ಯಾಲಿ ನಂತರ ಚುನಾಯಿತರಾದ ಮೂರನೇ ಭಾರತೀಯ–ಅಮೆರಿಕನ್ ಗವರ್ನರ್ ಆಗಲಿದ್ದಾರೆ. ಎಡಪಂಥೀಯ ವಿರೋಧಿ ಹೋರಾಟಗಾರ ರಾಮಸ್ವಾಮಿ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ನಾಮ ನಿರ್ದೇಶನಕ್ಕಾಗಿ ಟ್ರಂಪ್ ವಿರುದ್ಧ ಸ್ಪರ್ಧಿಸಿದ್ದರು. ಆದರೆ, ನಂತರ ಅವರ ಬೆಂಬಲಿಗರಲ್ಲಿ ಒಬ್ಬರಾಗಲು ಆ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಟ್ರಂಪ್ ಅವರು ರಾಮಸ್ವಾಮಿ ಅವರನ್ನು ಎಲೋನ್ ಮಸ್ಕ್ ಅವರೊಂದಿಗೆ ಸರ್ಕಾರದ ದಕ್ಷತೆಯ ವಿಭಾಗದ (DOGE) ಸಹ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದರು.

ವಿದೇಶಿಯರು ಸೇರಿದಂತೆ 100ಕ್ಕೂ ಹೆಚ್ಚು ಮಹಿಳೆಯರು ನಾಗಾ ಸನ್ಯಾಸಿನಿಗಳಾಗಿ ದೀಕ್ಷೆ

ಪ್ರಯಾಗ್‌ರಾಜ್: ಸನಾತನ ಧರ್ಮವನ್ನು ರಕ್ಷಿಸುವಲ್ಲಿ ಮಹಿಳಾ ಶಕ್ತಿಯೂ ಹಿಂದೆ ಬಿದ್ದಿಲ್ಲ. ಜುನಾ ಅಖಾರದಲ್ಲಿ 100ಕ್ಕೂ ಹೆಚ್ಚು ಮಹಿಳೆಯರಿಗೆ ನಾಗಾ ಸನ್ಯಾಸಿನಿಗಳಾಗಿ ದೀಕ್ಷೆ ನೀಡಲಾಯಿತು.



ಇದರಲ್ಲಿ ಮೂವರು ವಿದೇಶಿ ಮಹಿಳೆಯರೂ ಸೇರಿದ್ದಾರೆ. ಜುನಾ ಅಖಾರದ ಮಹಿಳಾ ಸಂತ ದಿವ್ಯಾ ಗಿರಿ ಅವರು ತಮ್ಮ ಅಖಾಡದಲ್ಲಿ 100ಕ್ಕೂ ಹೆಚ್ಚು ಮಹಿಳೆಯರಿಗೆ ನಾಗ ಸನ್ಯಾಸಿನಿ ದೀಕ್ಷೆ ನೀಡಲಾಯಿತು ಎಂದರು. ಈ ದೀಕ್ಷೆಗಾಗಿ ನೋಂದಣಿ ನಡೆಯುತ್ತಿದ್ದು, ಮೊದಲ ಹಂತದಲ್ಲಿ 102 ಮಹಿಳೆಯರಿಗೆ ನಾಗ ದೀಕ್ಷೆ ನೀಡಲಾಯಿತು ಎಂದರು.

ಅವರ 12 ವರ್ಷಗಳ ಸೇವೆ ಮತ್ತು ಸಮರ್ಪಣೆಯನ್ನು ನೋಡಿದ ನಂತರ, ಈ ಮಹಿಳೆಯರನ್ನು ಅವಧೂತರನ್ನಾಗಿ ಮಾಡಲಾಯಿತು. ಅವಧೂತ್ನಿಯ ಗುಂಪಿಗೆ ಗಂಗಾನದಿಯ ದಡದಲ್ಲಿ ಅವರ ತಲೆಯನ್ನು ಬೋಳಿಸಲಾಯಿತು.

ಗಂಗೆಯಲ್ಲಿ ಸ್ನಾನ ಮಾಡಿದ ನಂತರ, ಅವರಿಗೆ ಕಮಂಡಲು, ಗಂಗಾಜಲ ಮತ್ತು ಶಿಕ್ಷೆಯನ್ನು ನೀಡಲಾಯಿತು. ಅಂತಿಮ ದೀಕ್ಷೆಯನ್ನು ಆಚಾರ್ಯ ಮಹಾಮಂಡಲೇಶ್ವರ ಸ್ವಾಮಿ ಅವಧೇಶಾನಂದ ಗಿರಿ ನೀಡಲಿದ್ದಾರೆ ಎಂದರು.

ಅಮೆರಿಕದಲ್ಲಿ ಹೈದರಾಬಾದ್ ವಿದ್ಯಾರ್ಥಿ ಗುಂಡಿಕ್ಕಿ ಹತ್ಯೆ

ವಾಷಿಂಗ್ಟನ್: ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿ ಸೋಮವಾರ ದುಷ್ಕರ್ಮಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಹೈದರಾಬಾದ್‌ನ ಚೈತನ್ಯ ಪುರಿಯ



26 ವರ್ಷದ ಯುವಕ ಸಾವನ್ನಪ್ಪಿದ್ದಾರೆ. ಹೈದರಾಬಾದ್‌ನ ಗ್ರೀನ್ ಹಿಲ್ಸ್ ಕಾಲೋನಿ ನಿವಾಸಿ, ಕೊಯ್ಯಡ ರವಿತೇಜ ಅಮೆರಿಕದಲ್ಲಿ ಹತ್ಯೆಗೀಡಾದ ವಿದ್ಯಾರ್ಥಿ. ಅವರ ಸಂಬಂಧಿಕರ ಪ್ರಕಾರ, ರವಿಜೇತ ಮಾರ್ಚ್ 2022ರಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅಮೆರಿಕಕ್ಕೆ ಹೋಗಿದ್ದರು. ಶಿಕ್ಷಣ ಮುಗಿಸಿದ ನಂತರ, ಅವರು ಅಲ್ಲಿಯೇ ಉದ್ಯೋಗ ಹುಡುಕುತ್ತಿದ್ದರು ಮತ್ತು ಈ ಮಧ್ಯೆ ಅರೆಕಾಲಿಕ ಕೆಲಸಗಳಲ್ಲಿ ತೊಡಗಿದ್ದರು.

ರವಿತೇಜ ಅವರ ಸಂಬಂಧಿಯೊಬ್ಬರ ಪ್ರಕಾರ ಕೊರಿಯರ್ ತಲುಪಿಸುವಾಗ ದುಷ್ಕರ್ಮಿಗಳು ಅವರ ಮೇಲೆ ಗುಂಡು ಹಾರಿಸಿದ್ದಾರೆಂದು ತಿಳಿದುಬಂದಿದೆ. ರವಿತೇಜ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ದಾಳಿಯ ಹಿಂದಿನ ಉದ್ದೇಶದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 21 ಜನವರಿ 2025

ಅರೆಭಾಷಿಕ ಗೌಡ ಜನಾಂಗದವರ ಮೌನ ಪ್ರತಿಭಟನೆ



ಅವಹೇಳನಕಾರಿ ಹೇಳಿಕೆ ನೀಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅರೆಭಾಷಿಕ ಗೌಡ ಜನಾಂಗದವರು ಮಡಿಕೇರಿಯಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಮಡಿಕೇರಿ: ಕೊಡಗು ಜಿಲ್ಲೆಯ ಅರೆಭಾಷಿಕ ಗೌಡ ಜನಾಂಗದ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿ, ಸುಳ್ಳು ಇತಿಹಾಸ ಸೃಷ್ಟಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಗೌಡ ಜನಾಂಗದವರು ನಗರದಲ್ಲಿ ಸೋಮವಾರ 'ಬೃಹತ್ ಸ್ವಾಭಿಮಾನ ನಡಿಗೆ' ಹೆಸರಿನಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಮಡಿಕೇರಿಯ ಕೊಡಗು ಗೌಡ ಯುವ ವೇದಿಕೆ, ಕೊಡಗು ಗೌಡ ಮಹಿಳಾ ಒಕ್ಕೂಟ ಮತ್ತು ಕುಶಾಲನಗರದ ಗೌಡ ಯುವಕ ಸಂಘದ ನೇತೃತ್ವದಲ್ಲಿ ನಗರದ ಸುದರ್ಶನ ವೃತ್ತದಿಂದ ಗಾಂಧಿ ಮೈದಾನದವರೆಗೆ ಸಹಸ್ರಾರು ಗೌಡ ಜನಾಂಗದವರು ಭಿತ್ತಿಫಲಕ ಪ್ರದರ್ಶಿಸಿ, ಮೌನ ಪ್ರತಿಭಟನೆ ನಡೆಸಿದರು.

ವೀರ ಸೇನಾನಿಗಳಿಗೆ ಗೌರವ: ಸುದರ್ಶನ ವೃತ್ತದಲ್ಲಿ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಪ್ರತಿಮೆಗಳಿಗೆ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು.

ನಂತರ ಸಾಂಪ್ರದಾಯಿಕ ಉಡುಪು ತೊಟ್ಟ ಅರೆಭಾಷೆ ಪುರುಷರು ಮತ್ತು ಮಹಿಳೆಯರು ಮೆರವಣಿಗೆಯಲ್ಲಿ ಸಾಗಿದರೆ, ಅವರನ್ನು ಹಿಂಬಾಲಿಸಿ ಸಹಸ್ರಾರು ಗೌಡ ಜನಾಂಗದವರು ಹೆಜ್ಜೆ ಹಾಕಿದರು. ಇದೇ ಸಂದರ್ಭ ಜನರಲ್ ಕೆ.ಎಸ್.ತಿಮಯ್ಯ ವೃತ್ತದಲ್ಲಿ ವೀರ ಸೇನಾನಿ ಪ್ರತಿಮೆ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಪುತ್ಥಳಿಗೆ ನಮನ ಸಲ್ಲಿಸಲಾಯಿತು.

ಮೆರವಣಿಗೆಯಲ್ಲಿ ಜಿಲ್ಲೆಯ ಬಹುತೇಕ ಗೌಡ ಸಮಾಜಗಳ ಪ್ರತಿನಿಧಿಗಳು, ಸದಸ್ಯರು ಸೇರಿದಂತೆ ಬೆಂಗಳೂರು, ಮೈಸೂರು, ಪಿರಿಯಾಪಟ್ಟಣ, ಹುಣಸೂರು, ಕೊಡಗು ಗೌಡ ಸಮಾಜಗಳ ಪ್ರತಿನಿಧಿಗಳು, ಜಿಲ್ಲೆಯ ಗಡಿ ಭಾಗವಾದ ಸಂಪಾಜೆ, ಚೆಂಬು ವ್ಯಾಪ್ತಿ ಅರೆಭಾಷೆ ಗೌಡ ಜನಾಂಗದವರು ಪಾಲ್ಗೊಂಡಿದ್ದರು. ಮೆರವಣಿಗೆ ಸಂದರ್ಭ ನಗರ ವ್ಯಾಪ್ತಿಯಲ್ಲಿ ಒಂದಷ್ಟು ವಾಹನ ಸಂಚಾರಕ್ಕೂ ತೊಂದರೆಯಾಯಿತು. ಮೆರವಣಿಗೆ ಉದ್ದಕ್ಕೂ ಭಿತ್ತಿ ಪತ್ರಗಳು ಗಮನ ಸೆಳೆದವು. ಗಾಂಧಿ ಮೈದಾನದಲ್ಲಿ ಮೌನ ಪ್ರತಿಭಟನೆ ಮುಕ್ತಾಯವಾದ ಬಳಿಕ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಮನವಿ ಸಲ್ಲಿಸಲಾಯಿತು.

ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ಮಾತನಾಡಿ, ಪ್ರಮುಖವಾಗಿ, ಸಿಎನ್‌ಸಿಯ ಎನ್.ಯು.ನಾಚಪ್ಪ ಮತ್ತು ಅವರ ಸಂಗಡಿಗರು ಅರೆಭಾಷಿಕ ಗೌಡ ಜನಾಂಗದವರ ವಿರುದ್ಧ ನಿರಂತರವಾಗಿ ಪ್ರಚೋದನಾಕಾರಿ ಆಕ್ಷೇಪಾರ್ಹ ನಿಂದನೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದನ್ನು ಕೂಡಲೇ ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಮತ್ತು ನಾಚಪ್ಪ ಅವರನ್ನು ಕೂಡಲೇ ಬಂಧಿಸಬೇಕು. ಸಿಎನ್‌ಸಿ ಸಂಘಟನೆಯನ್ನು ನಿಷೇಧಿಸಬೇಕೆಂದು ಆಗ್ರಹಿಸಿದರು. ಪೊನ್ನಂಪೇಟೆಯಲ್ಲಿ ಅರೆಭಾಷೆ ಗೌಡ ಜನಾಂಗದ ವಿರುದ್ಧ ಹೇಳಿಕೆ ನೀಡಿರುವ ಸಿಎನ್‌ಸಿಯ 7 ಬೆಂಬಲಿಗರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೊಡಗು ಗೌಡ ಯುವ ವೇದಿಕೆ ಅಧ್ಯಕ್ಷ ಪಾಣತ್ತಲೆ ಜಗದೀಶ್ ಮಂದಪ್ಪ, ಕಾರ್ಯದರ್ಶಿ ಪುದಿಯನೆರವನ ರಿಶಿತ್ ಮಾದಯ್ಯ, ಕಾನೂನು ಸಲಹೆಗಾರ ಕೊಂಬಾರನ ರೋಷನ್ ಗಣಪತಿ, ಕುಶಾಲನಗರ ಗೌಡ ಯುವಕ ಸಂಘದ ಅಧ್ಯಕ್ಷ ಕೊಡಗನ ಹರ್ಷ, ಕೊಡಗು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಅಮೆ ದಮಯಂತಿ, ಉಪಾಧ್ಯಕ್ಷೆ ಬೈತಡ್ಕ ಜಾನಕಿ ಬೆಳ್ಯಪ್ಪ, ಪದಾಧಿಕಾರಿಗಳು, ಗೌಡ ಸಮಾಜಗಳ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

ವಿರಾಜಪೇಟೆ ಅಭಿವೃದ್ಧಿಗೆ 10 ಕೋಟಿ ಅನುದಾನ



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ ಮಾತನಾಡಿದರು.

ವಿರಾಜಪೇಟೆ, ಜ.20–ಎ.ಎಸ್. ಪೊನ್ನಣ್ಣ ಶಾಸಕರಾದ ನಂತರ ವಿರಾಜಪೇಟೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನದೊಂದಿಗೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗಿನ ಕುಶಾಲನಗರ, ಪೊನ್ನಂಪೇಟೆ ಇತರೆ ನಗರಗಳು ಹತ್ತು ವರ್ಷದಲ್ಲಿ ಸಾಕಷ್ಟು ಬೆಳವಣಿಗೆ ಆಗಿಲ್ಲ. ವಿರಾಜಪೇಟೆ ನಗರ ಹಿಂದುಳಿದಿತ್ತು. ಶಾಸಕ ಪೊನ್ನಣ್ಣ ಅವರು ಚುನಾವಣೆಗೂ ಮುಂಚೆ ವಿರಾಜಪೇಟೆಯನ್ನು ಸುಂದರ ನಗರ ಮಾಡುವ ಸಂಕಲ್ಪ ಹೊಂದಿದ್ದರು. ಅದರ ಆಶಯದಂತೆ ಇದೀಗ ಅವರು ಕೆಲಸ ಮಾಡುತ್ತಿದ್ದಾರೆ ಎಂದರು.

ಮುಖ್ಯವಾಗಿ ಐತಿಹಾಸಿಕ ಗೌರಿಕೆರೆ–ಛತ್ರಕೆರೆ ಅಭಿವೃದ್ಧಿ ಕಾರ್ಯ ನಡೆಯುತ್ತಿವೆ. ವಿರಾಜಪೇಟೆ ನಗರ ವಿಸ್ತಾರವಾಗಿದ್ದು, ಗ್ರಾಮಾಂತರ ಪ್ರದೇಶಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಕಾಮಗಾರಿ ನಡೆಯುತ್ತಿದೆ. ಸಾರ್ವಜನಿಕರು ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ನೀಡಬೇಕು. ಗುಣಮಟ್ಟ ಕಾಮಗಾರಿಗೆ ತಜ್ಞರ ಸಮಿತಿ ರಚಿಸಲಾಗಿದೆ. ಜೊತೆಗೆ ಶಾಸಕರೇ ಕಾಮಗಾರಿ ಪರಿಶೀಲಿಸುತ್ತಿದ್ದಾರೆ ಎಂದರು.

ವಿರಾಜಪೇಟೆ ಕಾವೇರಿ ಕಾಲೇಜಿನಿಂದ ಮುಖ್ಯರಸ್ತೆ ಎರಡು ಬದಿಯಲ್ಲಿ ಪಾದಚಾರಿ ಮಾರ್ಗ ಮತ್ತು ರಸ್ತೆ ಅಭಿವೃದ್ಧಿಗೆ 5.74 ಕೋಟಿ ರೂ. ಅನುದಾನ ನೀಡಿದ್ದು, ಕೆಲಸ ಪ್ರಗತಿಯಲ್ಲಿದೆ. ಪಟ್ಟಣದ ಜೈನರ ಬೀದಿಯಲ್ಲಿ ನಿರ್ಮಿಸುತ್ತಿರುವ ನಾಗರಕಟ್ಟೆ ಉದ್ಯಾನಕ್ಕೆ 3.16 ಕೋಟಿ ರೂ., ಅರಸು ನಗರಬೆಟ್ಟ ಪ್ರದೇಶದ ನಿವಾಸಿಗಳಿಗೆ ಕಾಲುದಾರಿ ಮೆಟ್ಟಿಲು ನಿರ್ಮಾಣಕ್ಕೆ 1.72 ಕೋಟಿ ರೂ., ಛತ್ರಕೆರೆಗೆ 1.32 ಕೋಟಿ ರೂ., ಗೌರಿಕೆರೆ 1.32 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ನಗರಕ್ಕೆ ಸಮರ್ಪಕ ಕುಡಿಯುವ ನೀರು ಪೂರೈಕೆಗೆ 58.38 ಕೋಟಿ ರೂ. ಅಮೃತ್ 2.0 ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ. ವಿರಾಜಪೇಟೆ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ಮತ್ತು ತಡೆಗೋಡೆ ದುರಸ್ತಿ ಕಾರ್ಯಕ್ಕೆ 1 ಕೋಟಿ ರೂ. ನೀಡಲಾಗಿದೆ ಎಂದು ಮಾಹಿತಿ ನೀಡಿದರು.


ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರ ಉಪಾಧ್ಯಕ್ಷರಾದ ಕೆ.ಇ.ಹಮೀದ್, ಸಿ.ಎಂ. ದಿನೇಶ್, ಪ್ರಧಾನ ಕಾರ್ಯದರ್ಶಿ ಎಂ.ಎಂ.ಶಶಿಧರನ್, ಸಂಘಟನಾ ಕಾರ್ಯದರ್ಶಿ ಶಾನ್ ಉಪಸ್ಥಿತರಿದ್ದರು.

ಪಠ್ಯಪುಸ್ತಕದಲ್ಲಿ ಇತಿಹಾಸದ ನೈಜತೆ ತಿಳಿಸುವುದು ಸೂಕ್ತ

• ಖ್ಯಾತ ಲೇಖಕ ಡಾ.ವಿಕ್ರಂ ಸಂಪತ್ ಅಭಿಮತ • ಟಿಪ್ಪು ಸುಲ್ತಾನ್ ಕೃತಿ ಲೋಕಾರ್ಪಣೆ

ಮಡಿಕೇರಿ, ಜ.20–ಎಂದಿಗೂ ವಾಸ್ತವತೆ ಮರೆಯಬಾರದು ಎಂಬ ದೃಷ್ಟಿಯಲ್ಲಿ ಪಠ್ಯಪುಸ್ತಕಗಳಲ್ಲಿ ಇತಿಹಾಸದ ನೈಜ ವಿಷಯಗಳನ್ನು ತಿಳಿಸುವುದು ಸೂಕ್ತ. ಆ ಮೂಲಕ ಇತಿಹಾಸದಲ್ಲಿ ಸಂಭವಿಸಿದ್ದ ಕರಾಳ ಘಟನೆಗಳೂ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಛಾಪೊತ್ತಬೇಕು ಎಂದು ಖ್ಯಾತ ಲೇಖಕ ಡಾ.ವಿಕ್ರಂ ಸಂಪತ್ ಅಭಿಪ್ರಾಯಪಟ್ಟರು.

ಗೋಣಿಕೊಪ್ಪಲುವಿನ ಪರಿಮಳ ಮಂಗಳ ಸಭಾ ಭವನದಲ್ಲಿ ನಡೆದ ಕಲಿಸು ಫೌಂಡೇಷನ್ ಪ್ರಕಟಿಸಿರುವ 'ಟಿಪ್ಪು ಸುಲ್ತಾನ್' ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಇತಿಹಾಸ ಎಂಬುದು ಪಠ್ಯಪುಸ್ತಕಗಳಲ್ಲಿ ವಾಸ್ತವತೆಯ ನೆಲೆಗಟ್ಟಿನಲ್ಲಿ ದಾಖಲಾಗಬೇಕು. ಯಾರದ್ದೋ ಅಣತಿ ಪಾಲಿಸಲು, ಯಾರನ್ನೋ ಸಂತೋಷ ಪಡಿಸಲು ಇತಿಹಾಸದ ವಿಚಾರಗಳು ಕೃತಿ ಅಥವಾ ಪಠ್ಯದಲ್ಲಿ ಪ್ರಕಟವಾಗಿರಬಾರದು. ಇತಿಹಾಸದ ನೈಜಾಂಶಗಳನ್ನು ಗ್ರಹಿಸಿಕೊಂಡು ಮುಂದೆ ಸಾಗಿದರೆ ಭಾರತದ ಕನಸಾದ 'ವಿಕಸಿತ ಭಾರತ' ಗುರಿ ತಲುಪಲು ಸುಲಭ ಸಾಧ್ಯ ಎಂದು ಹೇಳಿದರು.



ಗೋಣಿಕೊಪ್ಪ ಪರಿಮಳ ಮಂಗಳ ಸಭಾ ಭವನದಲ್ಲಿ ಟಿಪ್ಪು ಸುಲ್ತಾನ್ ಕೃತಿ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ರಾಜಮನೆತನದ ಆಶ್ರಯ ಬಯಸಿ ಶ್ರೀರಂಗಪಟ್ಟಣಕ್ಕೆ ಬಂದು ನಂತರದ ದಿನಗಳಲ್ಲಿ ರಾಜರ ಸೈನ್ಯದ ನಾಯಕನಾಗಿ ವಿಜೃಂಭಿಸಿದ್ದ ಹೈದರಾಲಿಗೆ ಕನಿಷ್ಠ ಪಕ್ಷ ಧರ್ಮ ಸಂರಕ್ಷಣೆಯ ಅರಿವಾದರೂ ಇತ್ತು. ಮೈಸೂರಿನಲ್ಲಿ ದಸರಾದಂತಹ ನಾಡಹಬ್ಬವನ್ನು ಹೈದರಾಲಿ ಆಚರಿಸುತ್ತಿದ್ದರು. ಆದರೆ, ಇದೇ ಹೈದರಾಲಿ ಮಗನಾದ ಟಿಪ್ಪು ಸುಲ್ತಾನ್ ಕ್ರೂರತೆಗೆ ಉದಾಹರಣೆಯಂತಾದ ಎಂದು ತಮ್ಮ ಕೃತಿಯಲ್ಲಿ ಸಂಶೋಧನೆ ಸಹಿತ ದಾಖಲಿಸಲಾದ ಅಂಶಗಳ ಬಗ್ಗೆ ಮಾಹಿತಿ ನೀಡಿದರು.

ಬ್ರಿಟಿಷರ ವಿರುದ್ಧ ಹೋರಾಡಲು ಟಿಪ್ಪು ಸುಲ್ತಾನ್ ಪರ್ಷಿಯಾ ದೇಶದವರ ನೆರವನ್ನು ಪಡೆದಿದ್ದ. ಹೀಗಾಗಿ ಬ್ರಿಟಿಷರ ವಿರುದ್ಧ ಭಾರತದ ಪರವಾಗಿ ಟಿಪ್ಪು ತಾನೋರ್ವನೇ ಹೋರಾಟ ಮಾಡಿದ ಎನ್ನಲಾಗದು. ತನ್ನ ವಿರುದ್ಧ ಇರುವವರನ್ನು ಮತ್ತು ತನ್ನ ವಿರುದ್ಧ ಇದ್ದಾರೆ ಎಂದು ತನಗೆ ಯಾರಾದರೂ ಹೇಳಿದರೆ ಸಾಕು ಅಂತಹ ವಿರೋಧಿಗಳನ್ನು ಸಂಹಾರ ಮಾಡುವುದೇ ಟಿಪ್ಪುವಿನ ಗುರಿಯಾಗಿತ್ತು. ಟಿಪ್ಪು ನಿಜಕ್ಕೂ ವೀರನಾಗಿದ್ದ. ಆದರೆ, ಆತನ ವೀರತನ ಒಳಿತಿಗಿಂತ ಕೆಡುಕಿಗೆ ಹೆಚ್ಚು ಬಳಕೆಯಾಗಿ ಟಿಪ್ಪುವನ್ನು ಕುಖ್ಯಾತನನ್ನಾಗಿಸಿತು ಎಂದರು.

ಕೊಡವರನ್ನು ದೇವಟ್ ಪರಂಬುವಿನಲ್ಲಿ ಮಾರಣ ಹೋಮ ಮಾಡಲಾದ ಘಟನೆ ಬಗ್ಗೆ ಉಲ್ಲೇಖಿಸಿದ ಡಾ.ವಿಕ್ರಂ ಸಂಪತ್, 5 ರೂಪಾಯಿ ಕೊಡುತ್ತೇನೆ ಕೊಡವರ ತಲೆ ಬೇಕು ಎಂಬ ಟಿಪ್ಪುವಿನ ಆದೇಶದಂತೆ 700 ಕೊಡವರ ತಲೆಗಳನ್ನು ಕಡಿದು ತರಲಾಗಿತ್ತು. ದೇವಟ್ ಪರಂಬುವಿನಲ್ಲಿ ವಾಸ್ತವವಾಗಿ ಎಷ್ಟು ಸಂಖ್ಯೆಯಲ್ಲಿ ಕೊಡವರನ್ನು ಹತ್ಯೆ ಮಾಡಲಾಯಿತು ಎಂಬ ಬಗ್ಗೆ ನಿಖರ ಸಂಖ್ಯೆ ದೊರಕುವುದು ಕಷ್ಟಸಾಧ್ಯ. ಈ ಘಟನೆ ಬಗ್ಗೆ ಉಲ್ಲೇಖಿಸಿರುವ ಪ್ರತಿಯೋರ್ವ ಇತಿಹಾಸಕಾರನು ಒಂದೊಂದು ಸಂಖ್ಯೆಯನ್ನು ದಾಖಲಿಸಿದ್ದಾರೆ. ಇದು 40 ಸಾವಿರದಿಂದ 75 ಸಾವಿರದವರೆಗೂ ಇದೆ. ಆದರೆ, ಘಟನೆ ನಡೆದ 1785ರಲ್ಲಿ ಕೊಡಗಿನಲ್ಲಿ ಇದ್ದದ್ದೇ 1.15 ಲಕ್ಷ ಜನಸಂಖ್ಯೆ ಎಂಬ ಆಧಾರದಲ್ಲಿ ದೇವಟ್ ಪರಂಬುವಿನಲ್ಲಿ ಹತರಾದ ಕೊಡವರ ಸಂಖ್ಯೆ 45 ಸಾವಿರಗಳಷ್ಟಿದ್ದಿರಬಹುದು ಎಂದು ತಿಳಿಸಿದರು.

> ಟಿಪ್ಪು ಸುಲ್ತಾನ್ ಕುರಿತಾದ ದಾಖಲೆ ಮತ್ತು ಸಾಕ್ಷಿಗಳ ಆಧಾರದ ಮೇಲೆ ಐತಿಹಾಸಿಕ ಕೃತಿ ರಚಿಸಲು 4 ಸುದೀರ್ಘ ವರ್ಷಗಳನ್ನು ತೆಗೆದುಕೊಂಡಿದ್ದೇನೆ. ಲಂಡನ್, ಪ್ಯಾರಿಸ್‌ನಲ್ಲಿದ್ದ ದಾಖಲೆಗಳನ್ನು ಸಂಗ್ರಹಿಸಿದ್ದೇನೆ. ಚಿಕ್ಕ ಬಾಲಕನಾಗಿದ್ದಾಗ ಟಿವಿ ಧಾರಾವಾಹಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್‌ನಲ್ಲಿ ಮೈಸೂರು ರಾಜ ಮನೆತನವನ್ನು ಕೆಟ್ಟದ್ದಾಗಿ ಚಿತ್ರೀಕರಿಸಿದ್ದನ್ನು ನೋಡಿ ತಾನೂ ಸತ್ಯ ತಿಳಿಯಲು ಇತಿಹಾಸಕಾರನಾಗಬೇಕೆಂಬ ಹಂಬಲ ಉಂಟಾಗಿ 17 ವರ್ಷಗಳ ಹಿಂದೆ ಮೊದಲ ಕೃತಿಯನ್ನು ರಚಿಸಿದೆ. ಜ್ಞಾನವ್ಯಾಪಿ ದೇವಾಲಯ ಸಂಬಂಧಿತ 'ಶಿವನಿಗಾಗಿ ಕಾಯುತ್ತಿರುವೆ' ಎಂಬ ತಮ್ಮ ಕೃತಿಯ ಲೋಕಾರ್ಪಣೆಗಾಗಿ ನ್ಯಾಯಾಲಯದ ಅನುಮತಿಯ ನಿರೀಕ್ಷೆಯಲ್ಲಿದೆ. ಸದ್ಯದಲ್ಲೇ ಈ ಕೃತಿ ಲೋಕಾರ್ಪಣೆಯಾಗಲಿದೆ ಎಂಬ ಆಶಾಭಾವನೆ ಇದೆ.
>
> –ಡಾ.ವಿಕ್ರಂ ಸಂಪತ್, ಲೇಖಕ

ಟಿಪ್ಪು ಸುಲ್ತಾನ್ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೊಡಗಿನ ಸಂಸ್ಕೃತಿ, ಸಾಂಸ್ಕೃತಿಕ ಶ್ರೀಮಂತಿಕೆಯೇ ಕೊಡಗಿನ ಪರಿಚಯ ಮಾಡಿ ಕೊಡುತ್ತದೆ. ಟಿಪ್ಪು ಕಾಲದ ಕರಾಳತೆಯನ್ನು ಕೃತಿಯಲ್ಲಿ ಹೇಳಲಾಗಿದೆ. ಕೊಡಗಿನ ಸಮಗ್ರ ಇತಿಹಾಸ ಬಿಂಬಿಸುವ ದಾಖಲೆ ಆಧಾರದ ಕೃತಿಯೂ ಅಗತ್ಯವಾಗಿದೆ. ವಿಕಸಿತ ಭಾರತದ ಪರಿಕಲ್ಪನೆಯಲ್ಲಿ ಕೊಡಗನ್ನು ಪ್ರಗತಿಗೊಳಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ತ್ರಿಭಾಷಾ ಸಾಹಿತಿ ಬಾಚರಣಿಯಂಡ ಅಪ್ಪಣ್ಣ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಉದ್ಯಮಿ ಹಿಂದೂ ಸಂಘಟನೆಯ ಮಹಿಳಾ ವಿಭಾಗದ ರಾಷ್ಟ್ರೀಯ ಕಾರ್ಯದರ್ಶಿ ಛಾಯಾ ನಂಜಪ್ಪ ಮತ್ತಿತರರು ಪಾಲ್ಗೊಂಡಿದ್ದರು.


ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ವಿರಾಜಪೇಟೆ ಶಾಖಾ ವ್ಯಾಪ್ತಿ ನಿರ್ವಹಣಾ ಕಾರ್ಯ ನಿಮಿತ್ತ ಜ.21 ರಂದು ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆವರೆಗೆ ಕುಕ್ಲೂರು, ಕದನೂರು, ಅರಮೇರಿ, ಮೈತಾಡಿ, ಕಡಂಗಮರೂರು, ಕಾಕೋಟುಪರಂಬು, ಭೇತ್ರಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈದ್ಯಕೀಯ, ಆರೋಗ್ಯ ಸಾಹಿತ್ಯ ಎರಡೂ ವಿಭಿನ್ನ

• ಪ್ರೊ.ರಾಮಕೃಷ್ಣ ಅಭಿಮತ • ಸ್ವಾಸ್ಥ್ಯ ಮುಖಿ-ಜನಾರೋಗ್ಯ ಪುಸ್ತಕ ಲೋಕಾರ್ಪಣೆ

ಚಾಮರಾಜನಗರ, ಜ.20–ವೈದ್ಯಾಧಿಕಾರಿ ಡಾ.ಎನ್.ಮಧುಸೂದನ್ ಅವರು ಆರೋಗ್ಯ ಸಾಹಿತ್ಯದ ಮೂಲಕ ಜನಸಾಮಾನ್ಯರಿಗೂ ಅರ್ಥವಾಗುವ ಭಾಷೆಯಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದು, ಇದು ಬಹಳ ಪ್ರಯೋಜನಕಾರಿಯಾಗಿದೆ ಎಂದು ಮೈಸೂರಿನ ಮಾನಸ ಗಂಗೋತ್ರಿ ಕುವೆಂಪು ಅಧ್ಯಯನ ಕೇಂದ್ರದ ವಿಶ್ರಾಂತ ನಿರ್ದೇಶಕ ಪ್ರೊ. ರಾಮಕೃಷ್ಣ ಹೇಳಿದರು.



ಚಾ.ನಗರ ರೋಟರಿ ಭವನದಲ್ಲಿ ಡಾ.ಎನ್.ಮಧುಸೂದನ್ ಅವರ ಸ್ವಾಸ್ಥ್ಯ ಮುಖಿ ಜನಾರೋಗ್ಯ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು.

ನಗರದ ರೋಟರಿ ಭವನದಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಚಾ.ನಗರ ರೋಟರಿ ಸಂಸ್ಥೆ ಹಾಗೂ ಕೊಳ್ಳೇಗಾಲ ರೋಟರಿ ಮಿಡ್‌ಟೌನ್ ವತಿಯಿಂದ ನಡೆದ ಡಾ.ಮಧುಸೂದನ್ ಅವರ ಸ್ವಾಸ್ಥ್ಯ ಮುಖಿ–ಜನಾರೋಗ್ಯ ಕುರಿತ ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ವೈದ್ಯಕೀಯ ಮತ್ತು ಆರೋಗ್ಯ ಸಾಹಿತ್ಯ ಎರಡೂ ವಿಭಿನ್ನವಾದವು. ವೈದ್ಯಕೀಯ ಪರಿಭಾಷೆಯಲ್ಲಿ ಅಲ್ಲಿನ ತಜ್ಞರು ಅರ್ಥಮಾಡಿಕೊಳ್ಳಬಹುದಾದ ತಾಂತ್ರಿಕ ಭಾಷೆಯಲ್ಲಿ ರಚನೆಯಾದ ವೈದ್ಯಕೀಯ ಜರ್ನಲ್‌ಗಳಲ್ಲಿ ಪ್ರಕಟವಾಗುವ ಲೇಖನಗಳು ವೈದ್ಯಕೀಯ ಸಾಹಿತ್ಯ ಆದರೆ, ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಆರೋಗ್ಯ ಸಂಬಂಧಿ ಲೇಖನಗಳನ್ನು ಬರೆಯುವುದು ಆರೋಗ್ಯ ಸಾಹಿತ್ಯವಾಗಿದೆ ಎಂದರು.

ಈ ರೀತಿಯ ಆರೋಗ್ಯ ಸಾಹಿತ್ಯವನ್ನು ಡಾ.ಮಧುಸೂದನ್ ಕರಗತ ಮಾಡಿಕೊಂಡಿದ್ದಾರೆ. ವೈದ್ಯಕೀಯ, ವಿಜ್ಞಾನ, ತಾಂತ್ರಿಕ ಕ್ಷೇತ್ರದ ಬಗ್ಗೆ ಕನ್ನಡದಲ್ಲಿ ಬರೆಯುವಾಗ ತಾಂತ್ರಿಕ ಶಬ್ದಗಳನ್ನು ಕನ್ನಡದಲ್ಲಿ ವಿವರಿಸುವುದು ಸವಾಲಿನ ಕೆಲಸ. ಈ ಸಮಸ್ಯೆಯನ್ನು ನಿವಾರಿಸಿಕೊಂಡು ಲೇಖನಗಳನ್ನು ಬರೆಯುತ್ತಾ, ಸ್ವಾಸ್ಥ್ಯ ಮುಖಿ ಪುಸ್ತಕವನ್ನು ಡಾ.ಮಧುಸೂದನ್ ಹೊರತಂದಿದ್ದಾರೆ. ಇದು ಶ್ಲಾಘನೀಯ ಎಂದು ಹೇಳಿದರು.

ಕನ್ನಡದಲ್ಲಿ ಆರೋಗ್ಯ ಸಂಬಂಧಿ ಲೇಖನಗಳನ್ನು ಬರೆಯುತ್ತಿರುವ ಪ್ರಮುಖ ವೈದ್ಯರಲ್ಲಿ ಡಾ.ಮಧುಸೂದನ್ ಕೂಡ ಪ್ರಮುಖರಾಗಿದ್ದಾರೆ. ಅವರ ಬರಹದಲ್ಲಿ ಸರಳತೆ, ಜನಸಾಮಾನ್ಯರ ಕಾಳಜಿ ಕಾಣುತ್ತದೆ ಎಂದರು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲೂಹೆಚ್‌ಓ) ಮೈಸೂರು ವಿಭಾಗದ ಸರ್ವೇಕ್ಷಣಾಕಾರಿ ಡಾ.ಸುಧೀರ್ ನಾಯಕ್, ಸ್ವಾಸ್ಥ್ಯ ಮುಖಿ ಪುಸ್ತಕದಲ್ಲಿ ಸಾಮಾನ್ಯ ಮತ್ತು ಸಾಮಾಜಿಕ ಆರೋಗ್ಯ ಅರಿವು ಮೂಡಿಸುವ ಅನೇಕ ಲೇಖನಗಳಿವೆ. ಎದೆ ಹಾಲು ಏಕೆ ಶ್ರೇಷ್ಠ ಎಂಬುದರಿಂದ ಹಿಡಿದು ಲಸಿಕೆಗಳು, ವೈರಸ್, ಸಾಂಕ್ರಾಮಿಕ, ಜೀವನ ಶೈಲಿ ಕಾಯಿಲೆ ಏಕೆ ಬರುತ್ತವೆ? ಅವುಗಳು ಬಾರದಂತೆ ತಡೆಯಲು ನಾವು ಯಾವ ರೀತಿಯ ಜೀವನ ಶೈಲಿ ರೂಢಿಸಿಕೊಳ್ಳಬೇಕು? ಎಂಬುದನ್ನು ವಿವರಿಸುವ ವಿವಿಧ ಲೇಖನಗಳಿವೆ. ಇದು ರೋಗಿಗಳು, ಆರೋಗ್ಯವಂತರಿಗೆ ಆರೋಗ್ಯ ಇಲಾಖೆ ಕಾರ್ಯಕರ್ತರಿಗೂ ಅನುಕೂಲವಾಗುವ ಪುಸ್ತಕ ಎಂದು ಶ್ಲಾಘಿಸಿದರು.

ನಿವೃತ್ತ ಮುಖ್ಯ ಶಿಕ್ಷಕ ಶಿವಣ್ಣ ಇಂದ್ವಾಡಿ ಪುಸ್ತಕ ಕುರಿತು ಮಾತನಾಡಿ, ಡಾ.ಮಧುಸೂದನ್ ಅವರು ಸ್ಟೆತೋಸ್ಕೋಪ್ ಹಿಡಿದರೆ ಅವರು ಹೃದಯದಲ್ಲಿ ಓಂಕಾರವನ್ನು ಕೇಳುವಂಥ ಆಧ್ಯಾತ್ಮಿಕ ವ್ಯಕ್ತಿ ಇದೆ. ಅವರು ವೈದ್ಯರು, ಲೇಖಕರು, ಆಧ್ಯಾತ್ಮ ಧ್ಯಾನ ತರಬೇತುದಾರರಾಗಿದ್ದಾರೆ. ಈ ಪುಸ್ತಕದಲ್ಲಿ ಅವರು 26 ವರ್ಷಗಳ ಕಾಲ ತಮ್ಮ ವೈದ್ಯವೃತ್ತಿಯಲ್ಲಿ ಕಂಡುಂಡ ಅನುಭವಗಳನ್ನಾಧರಿಸಿದ ಲೇಖನಗಳಿವೆ. ಮನೆ, ಗ್ರಂಥಾಲಯ ಹಾಗೂ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಈ ಪುಸ್ತಕ ಇರಬೇಕು ಎಂದರು.

> ಎಲ್ಲಾ ಕ್ಷೇತ್ರಗಳಿಗಿಂತ ಅಮೂಲ್ಯವಾದುದು ವೈದ್ಯಕೀಯ ಕ್ಷೇತ್ರ. ಈ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾ ಸಾವಿರಾರು ರೋಗಿಗಳಿಗೆ ಡಾ.ಮಧುಸೂದನ್ ನೆರವಾಗಿದ್ದಾರೆ.
>
> –ಪ್ರೊ.ಡಾ. ಕೇಶವನ್ ಪ್ರಸಾದ್, ಹಂಪಿ ಜಾನಪದ ಅಧ್ಯಯನ ಕೇಂದ್ರದ ವಿಶ್ರಾಂತ ನಿರ್ದೇಶಕ

ಕಾರ್ಯಕ್ರಮದಲ್ಲಿ ಪುಸ್ತಕ ಲೇಖಕ ಡಾ.ಎನ್.ಮಧುಸೂದನ್, ಉಪನ್ಯಾಸಕ ಆರ್.ಜಯಕುಮಾರ್, ಆರ್.ಸುಷ್ಮಾ, ಶಿವನಂಜು, ಕೊಳ್ಳೇಗಾಲದ ಹಾರ್ಟ್‌ಫುಲ್‌ನೆಸ್ ಧ್ಯಾನ ಕೇಂದ್ರದ ಸದಸ್ಯರು, ಮಾಲಂಗಿ ಆರೋಗ್ಯ ಕೇಂದ್ರದ ಸಿಬ್ಬಂದಿ ಮತ್ತಿತರರು ಉಪಸ್ಥಿತರಿದ್ದರು.

ಬೇಗೂರಿನಲ್ಲಿ ಆರೋಗ್ಯ ತಪಾಸಣೆ ಶಿಬಿರ...



ಬೇಗೂರಿನ ಮೈಸೂರು–ಊಟಿ ಹೆದ್ದಾರಿ ಬಳಿ ಪ್ರಲಕ್ಷ ಆಸ್ಪತ್ರೆ ಕ್ಲಿನಿಕ್ ಮತ್ತು ಡೇ ಕೇರ್ ಸೆಂಟರ್ ವತಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಪಡಗೂರು ಮಠಾಧೀಶರಾದ ಶ್ರೀ ಶಿವಲಿಂಗೇಂದ್ರಸ್ವಾಮೀಜಿ, ಸೋಮಹಳ್ಳಿ ಮಠದ ಶ್ರೀ ಸಿದ್ದಮಲ್ಲಸ್ವಾಮೀಜಿ ಉದ್ಘಾಟಿಸಿದರು. ಮುಡಗುಂಡ ಮಠದ ಶ್ರೀಕಂಠಸ್ವಾಮೀಜಿ, ಮೂಡಗೂರು ಇಮ್ಮಡಿ ಉದ್ದಾನಸ್ವಾಮೀಜಿ, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಆರ್‌ಎಸ್‌ಎಸ್ ಹಿರಿಯ ಪ್ರಮುಖ ಸಂಚಾಲಕ ಮ.ವೆಂಕಟರಾಂ, ದಕ್ಷಿಣ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ತಜ್ಞ ವೈದ್ಯ ಡಾ.ಎನ್.ಎಸ್.ಮೋಹನ್ ಇದ್ದರು.

ಕುಂದುಕೊರತೆ ನಿವಾರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಕೆ



ವಿದ್ಯಾರ್ಥಿಗಳ ಕುಂದುಕೊರತೆ ನಿವಾರಿಸುವಂತೆ ಒತ್ತಾಯಿಸಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಉಪಕುಲಪತಿ ಎಂ.ಆರ್.ಗಂಗಾಧರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಜ.20–ಚಾಮರಾಜನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಕುಂದುಕೊರತೆ ನಿವಾರಿಸುವಂತೆ ಒತ್ತಾಯಿಸಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಉಪಕುಲಪತಿ ಎಂ.ಆರ್.ಗಂಗಾಧರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ರಫೀ ಅಲಿ, ಜಿಲ್ಲಾಧ್ಯಕ್ಷ ಮೋಹನ್ ನಗು ಅವರು ವಿವಿಯ ಉಪಕುಲಪತಿ ಅವರನ್ನು ಭೇಟಿ ಮಾಡಿ, ವಿದ್ಯಾರ್ಥಿಗಳ ಕುಂದುಕೊರತೆ ನಿವಾರಿಸುವಂತೆ ಮಾನವಿ ಮಾಡಿದರು.

ಇದೇ ಸಂದರ್ಭದಲ್ಲಿ ಸಂಘಟನೆಗೆ ರಾಯಭಾರಿಯಾಗಿ ಮಹದೇವ ಪ್ರಸಾದ್ ಮುತ್ತು ಅವರನ್ನು ನೇಮಕ ಮಾಡಲಾಯಿತು. ಉಪಾಧ್ಯಕ್ಷ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್, ದರ್ಶನ್, ಜಾನ್ ಪ್ರಸಾದ್, ಜಿಲ್ಲಾ ಕಾರ್ಯದರ್ಶಿ ನಂದನ್, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಶಿವರಾಜ್, ಪದಾಧಿಕಾರಿಗಳು ಹಾಜರಿದ್ದರು.

ಬೇಗೂರಿನಲ್ಲಿ ರಸ್ತೆ ಸುರಕ್ಷತಾ ಜಾಗೃತಿ

ಬೇಗೂರು, ಜ.20–ಇಲ್ಲಿನ ಸಾರಿಗೆ ಬಸ್ ನಿಲ್ದಾಣ ಎದುರು ಬೇಗೂರು ಸರ್ಕಲ್ ಇನ್ಸ್‌ಪೆಕ್ಟರ್ ವಿ.ಸಿ.ವನರಾಜು ನೇತೃತ್ವದಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸಲಾಯಿತು.

ಇದೇ ವೇಳೆ ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ ಬೇಗೂರು ಠಾಣೆ ಪೊಲೀಸರು ಬೈಕ್ ಜಾಥಾ ನಡೆಸಿದರು. ಜಾಥಾಗೆ ಸರ್ಕಲ್ ಇನ್ಸ್‌ಪೆಕ್ಟರ್ ವಿ.ಸಿ. ವನರಾಜು ಚಾಲನೆ ನೀಡಿದದರು. ಸಬ್ ಇನ್ಸ್‌ಪೆಕ್ಟರ್ ಬಿ.ಎಂ.ಚರಣ್‌ಗೌಡ, ಬೇಗೂರು ಠಾಣೆ ಪೊಲೀಸರು ಗ್ರಾಮದ ಪರಿಮಿತಿಯಲ್ಲಿ ಹೆಲ್ಮೆಟ್ ಧರಿಸಿ ಜಾಥಾ ನಡೆಸಿ, ಜನರಿಗೆ ಅರಿವು ಮೂಡಿಸಿದರು.



ಬೇಗೂರು ಸಾರಿಗೆ ಬಸ್ ನಿಲ್ದಾಣ ಎದುರು ಬೇಗೂರು ಠಾಣೆ ಪೊಲೀಸರು ರಸ್ತೆ ಸುರಕ್ಷತಾ ಜಾಗೃತಿ ಮೂಡಿಸಿದರು.

ಎ.ಎಸ್.ನಾಗರಾಜು ನಿಧನ



ಆಲೂರು, ಜ.20–ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ವೀರಶೈವ ಸಮಾಜದ ಅಧ್ಯಕ್ಷ ಎ.ಎಸ್.ನಾಗರಾಜು (70) ಅನಾರೋಗ್ಯದಿಂದ ಸೋಮವಾರ ಮುಂಜಾನೆ ನಿಧನರಾದರು.

ಮೃತರು ಪತ್ನಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕ್ರೀಡಾಂಗಣದ ಕಾಂಪೌಂಡ್ ಕಾಮಗಾರಿ ಕಳಪೆ ಆರೋಪ

ಕ್ರಮ ಕೈಕೊಳ್ಳದಿದ್ದರೆ ಪ್ರತಿಭಟನೆ ಎಚ್ಚರಿಕೆ



ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ನಡೆದ ಕರವೇ ಜಿಲ್ಲಾ ಘಟಕದ ಸಭೆಯಲ್ಲಿ ಜಿಲ್ಲಾಧ್ಯಕ್ಷ ಆರ್.ಮೋಹನ್ ಮಾತನಾಡಿದರು.

ಚಾಮರಾಜನಗರ: ಗುಂಡ್ಲುಪೇಟೆ ಪಟ್ಟಣದ ಡಿ.ದೇವರಾಜು ಅರಸು ಕ್ರೀಡಾಂಗಣದ ಕಾಂಪೌಂಡ್ ಕಾಮಗಾರಿ ಕಳಪೆಯಾಗಿದ್ದು, ಈ ಸಂಬಂಧ ಕ್ರೀಡಾ ಇಲಾಖೆ ಅಧಿಕಾರಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಳಪೆ ಕಾಮಗಾರಿ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಡಳಿತ ಭವನ ಎದುರು ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಜಿಲ್ಲಾಧ್ಯಕ್ಷ ಆರ್.ಮೋಹನ್ ಎಚ್ಚರಿಸಿದರು.

ನಗರದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ನಡೆದ ಕರವೇ ಜಿಲ್ಲಾ ಘಟಕದ ಸಭೆಯಲ್ಲಿ ಮಾತನಾಡಿದ ಅವರು, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ವತಿಯಿಂದ 1.50 ಕೋಟಿ ರೂ. ವೆಚ್ಚದಲ್ಲಿ ನಡೆಯುತ್ತಿರುವ ಗುಂಡ್ಲುಪೇಟೆ ದೇವರಾಜು ಅರಸು ಕ್ರೀಡಾಂಗಣದ ಕಾಮಗಾರಿ ಸಂಪೂರ್ಣ ಕಳಪೆಯಿಂದ ಕೂಡಿದೆ. ಕಳಪೆ ಎಂ ಸ್ಯಾಂಡ್, ಪಿಲ್ಲರ್‌ಗಳಿಗೆ ಸಣ್ಣ ಪ್ರಮಾಣದ ಕಬ್ಬಿಣ ಬಳಸಲಾಗಿದೆ ಎಂದು ಆರೋಪಿಸಿದರು.

ಕ್ರಿಯಾ ಯೋಜನೆ ಪ್ರಕಾರ ಕಾಮಗಾರಿ ನಡೆಸಿಲ್ಲ. ಅಲ್ಲದೆ, ಕ್ರೀಡಾಂಗಣ ಒತ್ತುವರಿಯನ್ನು ತೆರವುಗೊಳಿಸದೆ ಒತ್ತುವರಿದಾರರಿಗೆ ಅನುಕೂಲ ಮಾಡಿದ್ದಾರೆ. ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಗೆ ದೂರು ಸಲ್ಲಿಸಲಾಗಿದೆ ಎಂದು ಹೇಳಿದರು.

ಕೂಡಲೇ ಜಿಲ್ಲಾಡಳಿತ ದೇವರಾಜು ಅರಸು ಕ್ರೀಡಾಂಗಣದ ಕಳಪೆ ಕಾಮಗಾರಿ ಕಾಂಪೌಂಡ್ ಅನ್ನು ತೆರವುಗೊಳಿಸಿ, ಸರ್ಕಾರದ ಕ್ರಿಯಾ ಯೋಜನೆ ಪ್ರಕಾರ ಮತ್ತೆ ಗುಣಮಟ್ಟದ ಕಾಮಗಾರಿ ಮಾಡಬೇಕು. ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಇಲ್ಲದಿದ್ದರೆ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸಭೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ಕೃಷ್ಣನಾಯಕ, ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷ, ಉಪಾಧ್ಯಕ್ಷರಾದ ವೆಂಕಟೇಶ ನಾಯಕ, ನಾಗೇಶ್, ಸಿಂಗನಪುರ ಮಾದೇಶ್, ಕೆಂಪರಾಜು, ಮಲ್ಲೇಶಗೌಡ ಇತರರು ಹಾಜರಿದ್ದರು.

ಜ.24, ಚನ್ನಬಸವೇಶ್ವರ ಶಾಲಾ ವಾರ್ಷಿಕೋತ್ಸವ

ಚಾಮರಾಜನಗರ, ಜ.20–ತಾಲೂಕಿನ ಹರವೆ ಗ್ರಾಮದ ಶ್ರೀ ಚನ್ನಬಸವೇಶ್ವರ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಾರ್ಷಿಕೋತ್ಸವ ಜ.24ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ.

ಚನ್ನಬಸವೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷರಾದ ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅಧ್ಯಕ್ಷತೆ ವಹಿಸಲಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಬಿಇಓ ಹನುಮಶೆಟ್ಟಿ ಬಹುಮಾನ ವಿತರಿಸಲಿದ್ದಾರೆ.

ಅಂತರರಾಜ್ಯ ಪ್ರವಾಸಿ ತಾಣಗಳಿಗೆ ಕೆಎಸ್‌ಟಿಡಿಸಿ ಪ್ಯಾಕೇಜ್ ಟೂರ್

ಬೆಂಗಳೂರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಅಂತರರಾಜ್ಯ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್ ಆಯೋಜನೆ ಮಾಡಲಾಗುತ್ತಿದೆ. ಪ್ರಮುಖವಾಗಿ ವಿವಿಧ ಹಾಗೂ ಪ್ರಖ್ಯಾತ 9 ಸ್ಥಳಗಳಿಗೆ ಸರ್ಕಾರದಿಂದ ಕೈಗೆಟಕುವ ದರದಲ್ಲಿ ಪ್ಯಾಕೇಜ್ ಮಾಡಲಾಗಿದೆ. ಇಂದಿನಿಂದಲೇ ಬುಕ್ಕಿಂಗ್ ಆರಂಭವಾಗಿವೆ.

ಈ ಪ್ಯಾಕೇಜ್‌ನಲ್ಲಿ ಪ್ರವಾಸಿಗರ ಊಟ, ಹೋಟೆಲ್, ವಸತಿ ವ್ಯವಸ್ಥೆಯನ್ನು ಕೆಎಸ್‌ಟಿಡಿಸಿಯಿಂದಲೇ ಆಯೋಜನೆ ಮಾಡಲಾಗಿದೆ. ಎಲ್ಲಾ ಪ್ಯಾಕೇಜ್‌ಗಳಲ್ಲೂ ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡಲಾಗಿದೆ. ಒಂದು ಟಿಕೆಟ್‌ಗಿಂತ ಮೂರು ಜನ ಬುಕ್ ಮಾಡಿದರೆ ಟೂರ್ ಪ್ಯಾಕೇಜ್ ರೇಟ್‌ನಲ್ಲಿ ಕಡಿಮೆ ದರ ದೊರೆಯಲಿದೆ.

ಯಾವ ಸ್ಥಳಕ್ಕೆ ಎಷ್ಟು: ಕೃಷ್ಣಗಿರಿ ಡ್ಯಾಮ್ ಹೊಗೇನಕಲ್ ಒಂದು ದಿನದ ಟೂರ್ ಪ್ಯಾಕೇಜ್ – ಒಬ್ಬರಿಗೆ 1,480 ರೂ., ಸೀನಿಯರ್ ಸಿಟಿಜನ್‌ಗೆ 200 ರೂಪಾಯಿ ರಿಯಾಯಿತಿ, ತಿರುವಣ್ಣಮಲೈ–ಗಿರಿವಲಂ 2 ದಿನದ ಟೂರ್ ಪ್ಯಾಕೇಜ್ – ಒಬ್ಬರಿಗೆ 5,210 ರೂ., ಸೀನಿಯರ್ ಸಿಟಿಜನ್ 300 ರೂ. ರಿಯಾಯಿತಿ, ಯಗಚಿ–ಚಿಕ್ಕಮಗಳೂರು ಟೂರ್ ಪ್ಯಾಕೇಜ್ – ಎರಡು ದಿನದ ಪ್ಯಾಕೇಜ್‌ಗೆ 6,460 ರೂ., ಸೀನಿಯರ್ ಸಿಟಿಜನ್ 325 ರೂ. ರಿಯಾಯಿತಿ, ಕೊಚ್ಚಿ–ಆಲೆಪ್ಪಿ ಟೂರ್ ಪ್ಯಾಕೇಜ್ –ನಾಲ್ಕು ದಿನಕ್ಕೆ 12,980 ರೂ., ಸೀನಿಯರ್ ಸಿಟಿಜನ್ 675 ರೂ. ರಿಯಾಯಿತಿ, ತಮಿಳುನಾಡು–ನವಗ್ರಹ ಟೂರ್ ಪ್ಯಾಕೇಜ್ – ನಾಲ್ಕು ದಿನಕ್ಕೆ ಒಬ್ಬರಿಗೆ 7,820 ರೂ., ತೆಕ್ಕಡಿ–ಮುನ್ನಾರ್ ಟೂರ್ ಪ್ಯಾಕೇಜ್ ಐದು ದಿನಕ್ಕೆ ಒಬ್ಬರಿಗೆ 13,030 ರೂ., ತೆಕ್ಕಡಿ–ಆಲೆಪ್ಪಿ–ಮುನಾರ್ –ಆರು ದಿನಕ್ಕೆ ಒಬ್ಬರಿಗೆ 20,050 ರೂ., ಪಂಡಾರಪುರ–ಶಿರಡಿ–ಎಲ್ಲೋರ–ಕೊಲ್ಲಾಪುರ ಟೂರ್ ಒಬ್ಬರಿಗೆ ಆರು ದಿನಕ್ಕೆ 18,590 ರೂ.

ಸಮವಸ್ತ್ರ ವಿತರಣೆ



ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಸೋಮವಾರ ಸಂಜೆ ಕುವೆಂಪು ಯೂತ್ಸ್ ಕ್ರಿಕೆಟ್ ಕ್ರೀಡಾ ತಂಡಕ್ಕೆ ಸಮವಸ್ತ್ರವನ್ನು ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ವಿತರಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಗೋಪಾಲ ರಾಜ ಅರಸು, ಬಿಜೆಪಿ ಮುಖಂಡರಾದ ರಾಜೇಶ್, ಹೇಮಂತ್ ಇತರರು ಭಾಗವಹಿಸಿದ್ದರು.

ಅಪರಾಧ ತಡೆಗಟ್ಟಲು ಗಸ್ತಿಗೆ ಗಮನ ನೀಡಿ

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೂಚನೆ



ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಸೋಮವಾರ ಸಭೆ ನಡೆಯಿತು.

ಮೈಸೂರು,ಜ.20(ಪಿಎಂ)– ನಗರದಲ್ಲಿ ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಗಸ್ತಿಗೆ ಹೆಚ್ಚು ಗಮನ ನೀಡುವಂತೆ ನಗರದ ಎಲ್ಲಾ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೂಚನೆ ನೀಡಿದರು.

ತಮ್ಮ ಕಚೇರಿಯಲ್ಲಿ ಸೋಮವಾರ ಸಭೆ ನಡೆಸಿ ಮಾತನಾಡಿದ ಅವರು, ನಿಮ್ಮ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್, ಎಟಿಎಂಗಳ ಸುತ್ತಮುತ್ತ ನಿಗಾ ವಹಿಸಬೇಕು. ಜೊತೆಗೆ ಸಿಸಿ ಕ್ಯಾಮಾರಗಳ ಕಾರ್ಯನಿರ್ವಹಣೆ ಬಗ್ಗೆ ಗಮನ ನೀಡಬೇಕು. ಆ ಮೂಲಕ ನಗರದಲ್ಲಿ ಅಪರಾಧ ತಡೆಗಟ್ಟಲು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಾಕಾಬಂದಿ ಹಾಕಿ ವಾಹನಗಳ ತಪಾಸಣೆ ನಡೆಸಬೇಕು. ಜೊತೆಗೆ ಮುಖ್ಯ ರಸ್ತೆಗಳು, ಸರ್ಕಾರಿ ಕಚೇರಿಗಳು ಮತ್ತು ಬ್ಯಾಂಕ್‌ಗಳ ಕಡೆ ಹೆಚ್ಚಿನ ಗಮನ ಹರಿಸಿ, ಗಸ್ತು ನಡೆಸಬೇಕು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು. ಡಿಸಿಪಿಗಳಾದ ಎಂ.ಮುತ್ತುರಾಜು, ಎಸ್.ಜಾಹ್ನವಿ ಸಭೆಯಲ್ಲಿ ಹಾಜರಿದ್ದರು.

ಗಾಂಧಿನಗರ ಆದಿ ಕರ್ನಾಟಕ ಸಮುದಾಯದ ರುದ್ರಭೂಮಿ ಸಮಸ್ಯೆ ಪರಿಹಾರಕ್ಕೆ ಉಸ್ತುವಾರಿ ಸಚಿವರಿಂದ ಪಾಲಿಕೆ ಆಯುಕ್ತರಿಗೆ ಸೂಚನೆ



ಮೈಸೂರು, ಜ.20(ಎಂಕೆ)– ಮೈಸೂರಿನ ಗಾಂಧಿನಗರದ ಆದಿ ಕರ್ನಾಟಕ ಸಮುದಾಯದ ರುದ್ರಭೂಮಿಯಲ್ಲಿರುವ ಸಮಸ್ಯೆಗಳನ್ನು ಕೂಡಲೇ ಪರಿಹರಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನಗರಪಾಲಿಕೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ರುದ್ರಭೂಮಿಗೆ ಪಕ್ಕದ ದೊಡ್ಡ ಮೋರಿಯ ನೀರು ಹರಿಯುತ್ತಿದ್ದು, ಶವ ಸಂಸ್ಕಾರಕ್ಕೆ ತೊಂದರೆಯಾಗು ತ್ತಿದೆ. ಗುಂಡಿ ತೆಗೆದರೆ ಕೊಳಚೆ ನೀರು ತುಂಬಿಕೊಳ್ಳುವುದಲ್ಲದೆ ಬೀದಿ ದೀಪಗಳಿಲ್ಲದೆ ಶವಸಂಸ್ಕಾರ ತೀವ್ರ ತೊಂದರೆಯಾಗುತ್ತಿರುವ ಕುರಿತು 2024ರ ಆ.28 ರಂದು 'ಮೈಸೂರು ಮಿತ್ರ'ನಲ್ಲಿ ಸುದ್ದಿ ಪ್ರಕಟಿಸಲಾಗಿತ್ತು ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದೆ ಪಾಲಿಕೆ ಅಧಿಕಾರಿಗಳು ತೀವ್ರ ನಿರ್ಲಕ್ಷ್ಯ ತೋರಿದ್ದು, ಸ್ಥಳೀಯ ನಿವಾಸಿಗಳನ್ನು ಹೈರಾಣಾಗಿಸಿದೆ. ಈ ಸಂಬಂಧ ಕರ್ನಾಟಕ ದಲಿತ ಪ್ಯಾಂಥರ್ಸ್ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದು, ಕೂಡಲೇ ರುದ್ರಭೂಮಿಯಲ್ಲಿರುವ ಸಮಸ್ಯೆಗಳನ್ನು ಪರಿಸಲು ಸೂಚನೆ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

ಮನವಿ ಸ್ವೀಕರಿಸಿ ಪಾಲಿಕೆ ಆಯುಕ್ತರಿಗೆ ಕರೆ ಮಾಡಿದ ಸಚಿವರು, ಕೂಡಲೇ ಗಾಂಧಿನಗರದ ಆದಿ ಕರ್ನಾಟಕ ಸಮುದಾಯದ ರುದ್ರಭೂಮಿಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಖಡಕ್ ಸೂಚನೆ ನೀಡಿದ್ದಾರೆ. ಮನವಿ ಸಲ್ಲಿಸುವ ವೇಳೆ ಕರ್ನಾಟಕ ದಲಿತ ಪ್ಯಾಂಥರ್ಸ್‌ನ ಅಧ್ಯಕ್ಷ ಯೋಗನರಸಿಂಹ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಭಿನಂದನೆ



ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನೂತನ ನ್ಯಾಯಾಧೀಶರಾದ ಉಷಾರಾಣಿ ಅವರನ್ನು ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಸಂಘದ ಅಧ್ಯಕ್ಷ ಬಿ.ಎಸ್. ಚಂದ್ರಶೇಖರ ಶಾಲು ಹೊದಿಸಿ, ಹೂಗುಚ್ಛ ನೀಡಿ ಅಭಿನಂದಿಸಿದರು. ಈ ಸಂದರ್ಭ ಕರ್ನಾಟಕ ಹೈಕೋರ್ಟ್ ರಿಜಿಸ್ಟಾರ್ ಆದೇಶದಂತೆ ಸೊಸೈಟಿಗೆ ತುರ್ತಾಗಿ ಕಟ್ಟಡ ಮಂಜೂರಾತಿ ಮಾಡುವಂತೆ ಕೋರಿ ನ್ಯಾಯಾಧೀಶರಿಗೆ ಮನವಿ ನೀಡಿದರು. ಈ ವೇಳೆ ಸೊಸೈಟಿ ಉಪಾಧ್ಯಕ್ಷ ಚೆನ್ನನಾಯಕ, ನಿರ್ದೇಶಕರಾದ ಬಸವರಾಜು, ಗಂಗರತ್ನ, ರಮೇಶ, ಯೋಗೇಶ್, ರಘು, ಶ್ರೀನಿವಾಸ್, ಸೊಸೈಟಿ ಕಾರ್ಯದರ್ಶಿ ಗಣೇಶ್ ಇತರರು ಉಪಸ್ಥಿತರಿದ್ದರು.

ಮತ್ತು ಬರಲಿದೆ ಎಂದು ತಿಳಿದು ಖೈದಿಗಳು ಕೇಕ್ ತಯಾರಿಸಲು ಬಳಸುವ ಎಸೆನ್ಸ್ ಸೇವನೆ ಸಾಧ್ಯತೆ

● ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಅನುಮಾನ ● ಸದ್ಯಕ್ಕೆ ಎಸೆನ್ಸ್ ಸೇವಿಸಿಯೇ ಈ ಮೂವರು ಸಾವನ್ನಪ್ಪಿರುವ ಶಂಕೆ ವ್ಯಕ್ತ ● ಕೇವಲ 5 ಎಂಎಲ್ ಈ ರಸಾಯನಿಕ ಸೇವಿಸಿದರೆ ಸಾಯುವ ಸಾಧ್ಯತೆ: ಎಫ್‌ಎಸ್‌ಎಲ್ ವರದಿ ನಂತರ ದೃಢ



ಕೆ.ಆರ್.ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಂ ಭಟ್ ಹಾಗೂ ಸದಸ್ಯರಾದ ಎಸ್.ಕೆ.ವಂಟಿಗೋಡಿ, ಮೈಸೂರು ಕೇಂದ್ರ ಕಾರಾಗೃಹದಲ್ಲಿದ್ದ ಮೂವರು ಕೈದಿಗಳು ಸಾವನ್ನಪ್ಪಿದ ಕುರಿತು ದಾಖಲೆ ಮತ್ತು ಮಾಹಿತಿ ಪಡೆಯುತ್ತಿರುವುದನ್ನು ಕಾಣಬಹುದು. ಎಂಎಂಸಿ ಅಂಡ್ ಆರ್‌ಐ ನಿರ್ದೇಶಕಿ ಕೆ.ಆರ್.ದಾಕ್ಷಾಯಿಣಿ, ಕೆ.ಆರ್.ಆಸ್ಪತ್ರೆ ಪ್ರಭಾರ ಅಧೀಕ್ಷಕ ಡಾ.ಹೆಚ್.ಎನ್.ದಿನೇಶ್ ಮತ್ತಿತರರಿದ್ದರು.

ಮೈಸೂರು, ಜ.20(ಎಂಕೆ)– ಮೈಸೂರು ಕೇಂದ್ರ ಕಾರಾಗೃಹದಲ್ಲಿದ್ದ ಮೂವರು ಕೈದಿಗಳು ವೈದ್ಯರ ಟಾಕ್ಸಿಕಾಲಜಿ ರಿಪೋರ್ಟ್ ಪ್ರಕಾರ ಕೇಕ್ ತಯಾರಿಸಲು ಬಳಸುವ ಎಸೆನ್ಸ್ ಸೇವಿಸಿ ಸಾವನ್ನಪ್ಪಿರುವುದಾಗಿ ಕಂಡುಬಂದಿದ್ದು, ಎಫ್‌ಎಸ್‌ಎಲ್(ವಿಧಿ ವಿಜ್ಞಾನ ಪ್ರಯೋಗಾಲಯ) ವರದಿ ನಂತರ ದೃಢವಾಗಲಿದೆ ಎಂದು ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಂ ಭಟ್ ತಿಳಿಸಿದರು.

ಮೈಸೂರು ಕೇಂದ್ರ ಕಾರಾಗೃಹದ ಮೂರು ಕೈದಿಗಳು ಸಾವನ್ನಪ್ಪಿದ ಪ್ರಕರಣದ ಹಿನ್ನಲೆಯಲ್ಲಿ ಸೋಮವಾರ ಆಯೋಗದ ಸದಸ್ಯರಾದ ಎಸ್.ಕೆ. ವಂಟಿಗೋಡಿ ಅವರೊಂದಿಗೆ ಕೆ.ಆರ್. ಆಸ್ಪತ್ರೆಗೆ ಭೇಟಿ ನೀಡಿ, ಕೈದಿಗಳಿಗೆ ನೀಡಿರುವ ಚಿಕಿತ್ಸೆ ಹಾಗೂ ಇನ್ನಿತರೆ ಮಾಹಿತಿ ಪಡೆದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮೂವರು ಕೈದಿಗಳು ಕಾರಾಗೃಹದ ಕೇಕ್ ತಯಾರಿಕಾ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಕೇಕ್ ತಯಾರಿಕೆಗೆ ಬಳಸುವ ಎಸೆನ್ಸ್ ಪ್ಯಾಕೆಟ್‌ನಲ್ಲಿ 'ರಮ್ ಎಕ್ಸಲೆಂಟ್' ಎಂಬ ಬರಹವಿದ್ದು, ನಶೆ ಬರಬಹುದೇನೋ ಎಂದು ಸೇವಿಸಿರುವ ಸಾಧ್ಯತೆ ಇದೆ ಎಂಬ ಅನುಮಾನವಿದೆ. ಆದರೆ ಯಾವುದೇ ಆಧಾರವಿಲ್ಲ ಎಂದು ಮಾಹಿತಿ ನೀಡಿದರು.

ಮೂವರು ಕೈದಿಗಳಲ್ಲಿ ರಮೇಶ್ ಎಂಬಾತ ಡಿ.26ರಂದು ಕೆ.ಆರ್.ಆಸ್ಪತ್ರೆಗೆ ದಾಖಲಾಗಿದ್ದು, ಅದಕ್ಕೂ ಮುನ್ನ ಜೈಲಿನಲ್ಲಿಯೂ ಹೊಟ್ಟೆ ಸಮಸ್ಯೆ ಎಂದು ಚಿಕಿತ್ಸೆ ನೀಡಲಾಗಿದೆ. ನಂತರ ಮಾದೇಶ್ ಡಿ.29 ಹಾಗೂ ನಾಗರಾಜ್ ಎಂಬಾತನನ್ನು ಡಿ.30 ರಂದು ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿ.24 ರಂದು ಕೆಲಸದ ನಡುವೆ ಕೇಕ್ ತಯಾರಿಕೆಗೆ ಬಳಸುವ ಎಸೆನ್ಸ್ ರಸಾಯನಿಕ ಸೇವಿಸಿರುವುದರಿಂದ ಹೊಟ್ಟೆನೋವು ಕಾಣಿಸಿಕೊಂಡಿದೆ. ಆದರೆ, ಎಸೆನ್ಸ್ ಸೇವಿಸಿರುವ ವಿಚಾರವನ್ನು ವೈದ್ಯರಿಂದ ಮುಚ್ಚಿಟ್ಟಿದ್ದರಿಂದ ಕೈದಿಗಳು ಸಾವನ್ನಪ್ಪಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ.

ವೈದ್ಯರು ಪದೇ ಪದೆ ಕೇಳಿದಾಗ ಜ.1 ರಂದು ಮಾದೇಶ್, ತಾನು ಎಸೆನ್ಸ್ ಸೇವಿಸಿರುವುದಾಗಿ ಹೇಳಿದ್ದು, ಇನ್ನುಳಿದ ಇಬ್ಬರೂ ಕೂಡ ಸೇವಿಸಿದ್ದಾರೆ ಎಂದು ತಿಳಿಸಿದ್ದಾನೆ. ಅಷ್ಟರಲ್ಲಾಗಲೇ ಪರಿಸ್ಥಿತಿ ಗಂಭೀರವಾಗಿತ್ತು. ಡಯಾಲಿಸಿಸ್ ಚಿಕಿತ್ಸೆ ನೀಡಿದರೂ, ಗುಣಮುಖರಾಗಲಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ ಎಂದರು.

60 ಎಂಎಲ್ ಎಸೆನ್ಸ್: ಕಾರಾಗೃಹದ ಬೇಕರಿ ತಯಾರಿಕಾ ಘಟಕಕ್ಕೆ ಐವರನ್ನು ನಿಯೋಜಿಸಲಾಗಿತ್ತು. ಅದರಲ್ಲಿ ಒಬ್ಬರು ನವೆಂಬರ್‌ನಲ್ಲೇ ಪೆರೋಲ್‌ನಲ್ಲಿ ತೆರಳಿದ್ದರು. ಉಳಿದವರಿಗೆ ಡಿ.24ರಂದು 15 ಕೆ.ಜಿ ಕೇಕ್ ತಯಾರಿಗಾಗಿ 60 ಎಂ.ಎಲ್ ಎಸೆನ್ಸ್ ನೀಡಲಾಗಿದೆ. ಪ್ರಸನ್ನ ಎಂಬ ಕೈದಿಯು ಊಟಕ್ಕೆ ತೆರಳಿದ್ದಾಗ, ಮಾದೇಶ, ನಾಗರಾಜ್ ಮತ್ತು ರಮೇಶ್ ಎಸೆನ್ಸ್ ಸೇವಿಸಿದ್ದಾರೆ. ಆದರೆ ಎಷ್ಟು ಪ್ರಮಾಣದಲ್ಲಿ ಸೇವಿಸಿದ್ದಾರೆ ಎಂಬುದು ತಿಳಿದು ಬಂದಿಲ್ಲ ವೈದ್ಯರ ಪ್ರಕಾರ 5 ಎಂಎಲ್ ಎಸೆನ್ಸ್ ಸೇವಿಸಿದರೆ ಒಬ್ಬ ಸಾಯಲು ಸಾಧ್ಯವಾಗುವಷ್ಟು ವಿಷದ ಅಂಶವಿದೆ ಎಂದು ಹೇಳಿದರು.

ಆತ್ಮಹತ್ಯೆ ಉದ್ದೇಶ ಇರಲಿಲ್ಲ!: ಕೈದಿಗಳು ಕೇಕ್ ತಯಾರಿಸಲು ಬಳಸುವ ಎಸೆನ್ಸ್ ಸೇವಿಸಿ ಮೃತಪಟ್ಟಿರುವುದಾಗಿ ಜೈಲಿನ ಅಧಿಕಾರಿಗಳು ಹಾಗೂ ವೈದ್ಯರು ತಿಳಿಸಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಸೇವಿಸಿಲ್ಲ. ಪ್ಯಾಕೆಟ್ ಮೇಲೆ ರಮ್ ಎಕ್ಸಲೆನ್ಸ್ ಎಂದು ಬರೆದಿದ್ದು, ನಶೆಯ ಆಸೆಯಿಂದ ಕುಡಿದಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಕಳೆದ ಎರಡು ವರ್ಷದಿಂದ ಕಾರಾಗೃಹದಲ್ಲಿ ಕೇಕ್ ತಯಾರಿಸುತ್ತಿದ್ದು, ಸಾವನ್ನಪ್ಪಿರುವ ಮೂವರು ಕೇಕ್ ತಯಾರಿಸುತ್ತಿದ್ದರು. ಅವರಲ್ಲಿ ಮಾದೇಶ್ ಎಂಬಾತ ಜೈಲಿಗೆ ಬರುವ ಮುಂಚೆಯೂ ಕೇಕ್ ತಯಾರಿಕೆ ಕೆಲಸ ಮಾಡುತ್ತಿದ್ದ ಎಂಬ ಮಾಹಿತಿ ಇದೆ ಹಾಗಾಗಿ ಎಸೆನ್ಸ್ ಅನ್ನು ಎಷ್ಟು ಪ್ರಮಾಣದಲ್ಲಿ ಬಳಸಬೇಕು ಎಂಬ ಬಗ್ಗೆ ಅವರಿಗೆ ತಿಳಿದಿತ್ತು. ವೈದ್ಯರ ಪ್ರಕಾರ ಎಸೆನ್ಸ್ ಸೇವನೆಯಿಂದ ನಶೆ ಬರಲ್ಲ. ಆದರೆ, ಎಸೆನ್ಸ್ ಪ್ಯಾಕೆಟ್ ಮೇಲೆ ರಮ್ ಎಕ್ಸಲೆನ್ಸ್ ಎಂದು ಬರೆದಿದ್ದರಿಂದ ನಶೆ ಬರಬಹುದೆಂದು ಸೇವನೆ ಮಾಡಿರುವ ಸಾಧ್ಯತೆ ಇದ್ದು, ಆತ್ಮಹತ್ಯೆ ಉದ್ದೇಶ ಇರಲಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದರು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಕೆ.ಆರ್. ದಾಕ್ಷಾಯಿಣಿ, ಕೆ.ಆರ್.ಆಸ್ಪತ್ರೆ ಪ್ರಭಾರ ಅಧೀಕ್ಷಕ ಡಾ.ಹೆಚ್.ಎನ್.ದಿನೇಶ್ ಮತ್ತಿತರರಿದ್ದರು.

ಸಿಸಿ ಕ್ಯಾಮರಾ ಅಳವಡಿಕೆಗೆ ಸೂಚನೆ...

ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿರುವ ಉತ್ಪಾದನಾ ಘಟಕಗಳಿಗೆ ಸಿಸಿ ಕ್ಯಾಮೆರಾ ಅಳವಡಿಸಲು ಸೂಚಿಸಲಾಗುವುದು ಎಂದು ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಂ ಭಟ್ ತಿಳಿಸಿದರು.

ಮೈಸೂರು ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದಾಗ ಬೇಕರಿ ಉತ್ಪಾದನಾ ಘಟಕದಲ್ಲಿ ಸಿಸಿ ಕ್ಯಾಮೆರಾ ಇಲ್ಲದಿರುವುದು ಹಾಗೂ ಜೈಲರ್‌ಗೆ ಘಟಕ ನಿರ್ವಹಣೆಯ ಹೆಚ್ಚುವರಿ ಜವಾಬ್ದಾರಿ ನೀಡಿರುವುದು ಗಮನಕ್ಕೆ ಬಂದಿದೆ. ಹೀಗಾಗಿ ಎಲ್ಲಾ ಘಟಕಕ್ಕೆ ಸಿಸಿ ಕ್ಯಾಮೆರಾ ಅಳವಡಿಸಬೇಕು ಮತ್ತು ತಯಾರಿಕಾ ಘಟಕಗಳ ನಿರ್ವಹಣೆಗಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು. ಹಾಗೆಯೇ ಕಾರಾಗೃಹದಲ್ಲಿ ಕೆಲವು ವ್ಯವಸ್ಥೆಗಳ ಸುಧಾರಣೆಗಾಗಿ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಕೈದಿಗಳು ನಿದ್ದೆ ಬರುವುದಿಲ್ಲ ಎಂದಾಗ ನೇರವಾಗಿ ನಿದ್ರೆ ಮಾತ್ರೆ ನೀಡದೆ, ಕಾರಾಗೃಹದ ವಾರ್ಡನ್ ಮೂಲಕ ಮಾತ್ರೆ ವಿತರಿಸಬೇಕು ಎಂದು ತಿಳಿಸಿದ್ದೇವೆ ಎಂದು ಮಾಹಿತಿ ನೀಡಿದರು.

5 ಎಂ.ಎಲ್ ವಿಷ ಸೇವಿಸಿದರೆ ಮೃತಪಡುವ ಸಾಧ್ಯತೆ...!

5 ಗ್ರಾಂ ಎಸೆನ್ಸ್‌ನಲ್ಲಿ 22 ಗ್ರಾಂ ಪ್ರೊಪಿಲೀನ್ ಗ್ಲೈಕೋಲ್ ಎಂಬ ಕೆಮಿಕಲ್ ಇರುತ್ತದೆ. ಇದು ಎಲ್ಲಾ ಎಸೆನ್ಸ್‌ನಲ್ಲಿ ಇರುವ ಕೆಮಿಕಲ್. ಇದನ್ನು ಎಷ್ಟು ನೀಡಿದರೆ ಅಪಾಯಕಾರಿ ಎಂಬುದು ಪ್ರಪಂಚದ ಯಾವುದೇ ವೈದ್ಯ ಸಂಶೋಧನೆಯಲ್ಲಿ ಉಲ್ಲೇಖವಾಗಿಲ್ಲ. ಹೀಗಾಗಿ ಈ ಬಗ್ಗೆ ಸಿಎಫ್‌ಟಿಆರ್‌ಐ ಮತ್ತು ಬೆಂಗಳೂರಿನ ಸಿಎಂಸಿಯಿಂದ ಮಾಹಿತಿ ಪಡೆದಿದ್ದು, ವಿಷಶಾಸ್ತ್ರ ವರದಿ ಪ್ರಕಾರ ಒಬ್ಬ ವ್ಯಕ್ತಿ 5 ಎಂ.ಎಲ್‌ನಷ್ಟು ಎಸೆನ್ಸ್ ಸೇವಿಸಿದರೆ ಸಾಯುವ ಸಾಧ್ಯತೆಯಿದೆ ಎಂಬುದು ತಿಳಿದುಬಂದಿದೆ.

- **ಡಾ.ಹೆಚ್.ಎನ್.ದಿನೇಶ್,** ಪ್ರಭಾರ ಅಧೀಕ್ಷಕ, ಕೆ.ಆರ್.ಆಸ್ಪತ್ರೆ

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ: 57 ಮಂದಿ ಬಂಧನ

ಪತ್ತನಂತಿಟ್ಟ: ಕೇರಳದ ಪತ್ತಂತಿಟ್ಟ ಜಿಲ್ಲೆಯಲ್ಲಿ ಅಪ್ರಾಪ್ತ ವಯಸ್ಸಿನ ದಲಿತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 59 ಮಂದಿ ಆರೋಪಿಗಳ ಪೈಕಿ 57 ಮಂದಿಯನ್ನು ಇದುವರೆಗೆ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಜನವರಿ 10 ರಂದು ಇಳವುಂತಿಟ್ಟ ಪೊಲೀಸ್ ಠಾಣೆಯಲ್ಲಿ ಮೊದಲ ಪ್ರಕರಣ ದಾಖಲಾದಾಗಿನಿಂದ ಇಲ್ಲಿಯವರೆಗೂ ವಿದೇಶದಲ್ಲಿರುವ ಇಬ್ಬರನ್ನು ಹೊರತುಪಡಿಸಿ ಪಟ್ಟಿಯಲ್ಲಿರುವ ಎಲ್ಲಾ ಆರೋಪಿಗಳನ್ನು ಸಮಗ್ರ ತನಿಖೆಯ ಮೂಲಕ ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿ.ಜಿ. ವಿನೋದ್ ಕುಮಾರ್ ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಕೊನೆಯ ಆರೋಪಿ 25 ವರ್ಷದ ಯುವಕನನ್ನು ಭಾನುವಾರ ಬೆಳಿಗ್ಗೆ ಅವರ ಮನೆಯ ಸಮೀಪದಲ್ಲಿಯೇ ಬಂಧಿಸಲಾಗಿದೆ. ಮಹಿಳಾ ಐಪಿಎಸ್ ಅಧಿಕಾರಿ ಎಸ್ ಅಜಿತಾ ಬೇಗಂ ನೇತೃತ್ವದ ವಿಶೇಷ ತನಿಖಾ ತಂಡವು ಜಿಲ್ಲಾ ಪೊಲೀಸ್ ಮುಖ್ಯಸ್ಥರ ಮೇಲ್ವಿಚಾರಣೆಯಲ್ಲಿ ಪ್ರಕರಣದ ತನಿಖೆ ನಡೆಸುತ್ತಿದೆ.

ಆರೋಪಿಗಳ ಹೇಳಿಕೆ ಆಧರಿಸಿ ಜಿಲ್ಲೆಯ ನಾಲ್ಕು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಒಟ್ಟು 30 ಪ್ರಕರಣಗಳು ದಾಖಲಾಗಿದ್ದು, ಆರೋಪಿಗಳಲ್ಲಿ ಐವರು ಅಪ್ರಾಪ್ತರು ಕೂಡ ಇದ್ದಾರೆ. ತನಿಖೆ ಪೂರ್ಣಗೊಳಿಸಿ ಆದಷ್ಟು ಬೇಗ ದೋಷಾರೋಪ ಪಟ್ಟಿ ಸಲ್ಲಿಸುವುದು ಪೊಲೀಸ್ ತಂಡದ ಉದ್ದೇಶವಾಗಿದೆ ಎಂದು ಅಧಿಕಾರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪತ್ತನಂತಿಟ್ಟದ ಖಾಸಗಿ ಬಸ್ ನಿಲ್ದಾಣದಲ್ಲಿ ಹಲವು ಆರೋಪಿಗಳು ಬಾಲಕಿಯನ್ನು ಭೇಟಿಯಾಗಿದ್ದು, ನಂತರ ಆಕೆಯನ್ನು ವಾಹನಗಳಲ್ಲಿ ವಿವಿಧ ಸ್ಥಳಗಳಿಗೆ ಕರೆದೊಯ್ದು ದೌರ್ಜನ್ಯವೆಸಗಿರುವುದು ಇವರೆಗಿನ ತನಿಖೆಯಿಂದ ತಿಳಿದುಬಂದಿದೆ.

ಕಳೆದ ವರ್ಷ ಹನ್ನೆರಡನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕಿಯನ್ನು ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾಗಿದ್ದ ಯುವಕನೊಬ್ಬ ರಾನ್ನಿಯ ರಬ್ಬರ್ ತೋಟಕ್ಕೆ ಕರೆದೊಯ್ದು ಇತರ ಮೂವರೊಂದಿಗೆ ಸೇರಿ ಆಕೆಯ ಮೇಲೆ ಅತ್ಯಾಚಾರ ಎಸಗಿರುವುದು ತನಿಖೆಯಿಂದ ತಿಳಿದುಬಂದಿದೆ.

2024 ರ ಜನವರಿಯಲ್ಲಿ ಕಾರಿನೊಳಗೆ ಮತ್ತು ಪಥನಂತಿಟ್ಟ ಜನರಲ್ ಆಸ್ಪತ್ರೆಯಲ್ಲಿ ನಡೆದ ಘಟನೆಗಳು ಸೇರಿದಂತೆ ಐದು ಸಂದರ್ಭಗಳಲ್ಲಿ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಲಾಗಿದೆ. ಈಗ 18 ವರ್ಷ ತುಂಬಿರುವ ಯುವತಿ 13 ವರ್ಷದಿಂದ 62 ವ್ಯಕ್ತಿಗಳು ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ. ಮಕ್ಕಳ ಕಲ್ಯಾಣ ಸಮಿತಿ ನಡೆಸಿದ ಕೌನ್ಸೆಲಿಂಗ್‌ನಲ್ಲಿ ಈ ವಿಷಯ ಬೆಳಕಿಗೆ ಬಂದಿದೆ. ಆಕೆಯ ನಡವಳಿಕೆಯಲ್ಲಿ ಗಮನಾರ್ಹ ಬದಲಾವಣೆಗಳ ಬಗ್ಗೆ ಸಂಸ್ಥೆಯು ಸಮಿತಿಗೆ ತಿಳಿಸಿದೆ. ನಂತರ ಸಮಿತಿಯು ಪೊಲೀಸರಿಗೆ ಸೂಚನೆ ನೀಡಿದ್ದು, ತನಿಖೆ ನಡೆಯುತ್ತಿದೆ.

ದೆಹಲಿ ವಿಧಾನಸಭೆ ಚುನಾವಣೆ: 70 ಸ್ಥಾನಗಳಿಗೆ 719 ಅಭ್ಯರ್ಥಿಗಳು ಸ್ಪರ್ಧೆ

ನವದೆಹಲಿ: ಫೆಬ್ರವರಿ 5 ರಂದು ನಡೆಯಲಿರುವ 70 ಕ್ಷೇತ್ರಗಳ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 719 ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ.

ಒಬ್ಬ ಅಭ್ಯರ್ಥಿ ಬಹು ನಾಮಪತ್ರಗಳನ್ನು ಸಲ್ಲಿಸಬಹುದಾದ್ದರಿಂದ 981 ಅಭ್ಯರ್ಥಿಗಳು 1,522 ನಾಮಪತ್ರಗಳನ್ನು ಸಲ್ಲಿಸಿದ್ದರೆ, 477 ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ಜನವರಿ 17 ಆಗಿದ್ದು, ಸ್ಪರ್ಧೆಯಿಂದ ಹಿಂದೆ ಸರಿಯಲು ಇಂದು ಸೋಮವಾರದವರೆಗೆ ಅವಕಾಶವಿದೆ

ದೆಹಲಿ ಕ್ಷೇತ್ರದಲ್ಲಿ ಅತೀ ಹೆಚ್ಚು 23 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಪಟೇಲ್‌ನಗರ ಮತ್ತು ಕಸ್ತೂರ್ಬಾ ನಗರಗಳಲ್ಲಿ ಅತಿ ಕಡಿಮೆ ತಲಾ ಐದು ಅಭ್ಯರ್ಥಿಗಳು ಇದ್ದಾರೆ.

ದೆಹಲಿ ಕ್ಷೇತ್ರಕ್ಕೆ 29 ಅಭ್ಯರ್ಥಿಗಳು 40 ನಾಮಪತ್ರಗಳನ್ನು ಸಲ್ಲಿಸಿದ್ದಾರೆ, ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ದೆಹಲಿಯ ಮಾಜಿ ಸಿಎಂಗಳ ಪುತ್ರರಾದ ಬಿಜೆಪಿಯ ಪರ್ವೇಶ್ ವರ್ಮಾ ಮತ್ತು ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ ವಿರುದ್ಧ ಸ್ಪರ್ಧಿಸಲಿದ್ದಾರೆ.

ಗ್ರಾಮೀಣ ಮತ್ತು ಅನಧಿಕೃತ ಕಾಲೊನಿ ಕ್ಷೇತ್ರಗಳ ನಾಮಪತ್ರಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದ್ದು, ಮಟಿಯಾಲದಲ್ಲಿ 25 ಮತ್ತು ಬುರಾರಿಯಲ್ಲಿ 22 ನಾಮಪತ್ರಗಳು ಸಲ್ಲಿಕೆಯಾಗಿವೆ. ಮುಂಡ್ಕಾ, ರೋಹ್ತಾಸ್ ನಗರ ಮತ್ತು ಲಕ್ಷ್ಮಿ ನಗರ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ತಲಾ 20 ಕ್ಕೂ ಹೆಚ್ಚು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಬಿಜೆಪಿ ಬುರಾರಿ ಸ್ಥಾನವನ್ನು ತನ್ನ ಮಿತ್ರಪಕ್ಷ ನಿತೀಶ್ ಕುಮಾರ್ ಅವರ ಸಂಯುಕ್ತ ಜನತಾದಳಕ್ಕೆ ಬಿಟ್ಟುಕೊಟ್ಟಿದೆ. ಕಸ್ತೂರ್ಬಾ ನಗರದಲ್ಲಿ ಒಟ್ಟು 9 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಆರು ಅಭ್ಯರ್ಥಿಗಳು ಅತಿ ಕಡಿಮೆ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಇಲ್ಲಿನ ಪ್ರಮುಖ ಅಭ್ಯರ್ಥಿಗಳಲ್ಲಿ ರಮೇಶ್ ಪಹಲ್ವಾನ್ (ಎಎಪಿ), ನೀರಜ್ ಬಸೋಯಾ (ಬಿಜೆಪಿ), ಮತ್ತು ಅಭಿಷೇಕ್ ದತ್ (ಕಾಂಗ್ರೆಸ್) ಇದ್ದಾರೆ.

ಮತದಾನದ ದಿನ ಸಮೀಪಿಸುತ್ತಿದ್ದಂತೆ, ದೆಹಲಿಯಲ್ಲಿ ರಾಜಕೀಯ ಕಾವು ಹೆಚ್ಚಾಗುತ್ತಿದೆ. ಎಎಪಿ, ಬಿಜೆಪಿ ಮತ್ತು ಕಾಂಗ್ರೆಸ್ ತೀವ್ರ ಹೋರಾಟದಲ್ಲಿವೆ. 2020 ರಲ್ಲಿ 70 ಸ್ಥಾನಗಳಲ್ಲಿ 62 ಸ್ಥಾನಗಳನ್ನು ಗೆದ್ದ ಎಎಪಿ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಕಳೆದ ಬಾರಿ 8 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಹೆಚ್ಚಿನ ಸ್ಥಾನಗಳಲ್ಲಿ ಜಯ ಸಾಧಿಸುವ ಗುರಿ ಹೊಂದಿದೆ. ಕಳೆದ ಎರಡು ಚುನಾವಣೆಗಳಲ್ಲಿ ಸೋತ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಹವಣಿಸುತ್ತಿದೆ. ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಫೆಬ್ರವರಿ 8 ರಂದು ಮತ ಎಣಿಕೆ ನಡೆಯಲಿದೆ.

ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳ ಮುಚ್ಚುವ ಹುನ್ನಾರ!

'ಹಬ್ ಅಂಡ್ ಸ್ಪೋಕ್ ಮಾದರಿ'ಗೆ ಶಿಕ್ಷಣ ತಜ್ಞರ ವಿರೋಧ

ಮೈಸೂರು, ಜ.20(ಎಸ್‌ಪಿಎನ್)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ ಕಡಿಮೆ ದಾಖಲಾತಿ ಹೊಂದಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು 'ಹಬ್ ಅಂಡ್ ಸ್ಪೋಕ್ ಮಾಡಲ್' ಹೆಸರಿನಲ್ಲಿ ಮುಚ್ಚಲು ಮುಂದಾಗಿರುವುದನ್ನು ಶಿಕ್ಷಣ ವಲಯದ ತಜ್ಞರು ಹಾಗೂ ವಿವಿಧ ಸಂಘಟನೆಗಳಿಂದ ವಿರೋಧ ವ್ಯಕ್ತವಾಗುತ್ತಿದೆ.

ಒಂದರಿಂದ ಅರವತ್ತು ಸಂಖ್ಯೆಯ ವಿದ್ಯಾರ್ಥಿಗಳಿರಬಹುದಾದ ಶಾಲೆಯಲ್ಲಿ ಕನಿಷ್ಟ ಇಬ್ಬರು ಶಿಕ್ಷಕರಿರಬೇಕು ಎನ್ನುವುದು ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ನಿಯಮ. ಆದರೆ, ನಿಯಮ ಪಾಲನೆ ಆಗುತ್ತಿಲ್ಲ. ಆದರೆ ಸರ್ಕಾರಿ ದಾಖಲೆಗಳ ಪ್ರಕಾರ ಕರ್ನಾಟಕದಲ್ಲಿ ಕನಿಷ್ಟ 4,767 ಸರ್ಕಾರಿ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ. ಈ ಶಿಕ್ಷಕರೇ ಶಾಲಾ ವ್ಯವಹಾರವನ್ನೆಲ್ಲಾ ನೋಡಿಕೊಳ್ಳುವ ಪರಿಸ್ಥಿತಿಯಿದೆ.

ಕರ್ನಾಟಕ ಆರನೇ ಸ್ಥಾನ: ಇತ್ತೀಚೆಗೆ ಮುಕ್ತಾಯವಾದ ಲೋಕಸಭೆಯ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ನೀಡಿದ ಮಾಹಿತಿ ಪ್ರಕಾರ, ಮಧ್ಯಪ್ರದೇಶದಲ್ಲಿ 18,307 ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ. ರಾಜಸ್ಥಾನದಲ್ಲಿ 12,052, ಉತ್ತರ ಪ್ರದೇಶದ 8,092,



ಜಾರ್ಖಂಡ್‌ನಲ್ಲಿ 7,564, ಆಂಧ್ರ ಪ್ರದೇಶದಲ್ಲಿ 7,483 ಹಾಗೂ ಕರ್ನಾಟಕದಲ್ಲಿ 4,767 ಏಕೋಪಾಧ್ಯಾಯ ಶಾಲೆಗಳಿವೆ. ಭಾರತದಾದ್ಯಂತ ಇಂತಹ 92,275 ಶಾಲೆಗಳಿವೆ ಎಂದು ಕೇಂದ್ರ ಸರ್ಕಾರ ಅಂಕಿ–ಅಂಶಗಳನ್ನು ಬಿಡುಗಡೆಗೊಳಿಸಿದೆ ಎಂದು ಶಿಕ್ಷಣಾಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ರಾಜ್ಯ ಸರ್ಕಾರ ವಿಫಲ: ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಿ, ವಿದ್ಯಾರ್ಥಿಗಳನ್ನು ಮತ್ತೆ ಸರ್ಕಾರಿ ಶಾಲೆಗೆ ಆಕರ್ಷಿಸಲು ರಾಜ್ಯ ಸರ್ಕಾರ ವಿಫಲವಾಗಿದೆ. ಈ ನಡುವೆ ನಾನಾ ಕಾರಣಗಳಿಂದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ ಆಗಿಲ್ಲ. ವಿದ್ಯಾರ್ಥಿಗಳ ಸಂಖ್ಯೆ 1ರಿಂದ 60ರ ನಡುವೆ ಇದ್ದರೆ ಇಬ್ಬರು ಶಿಕ್ಷಕರು ಇರಬೇಕು ಎಂದು ಆರ್‌ಟಿಇ ನಿಯಮವಿದೆ. ಆದರೂ ಏಕೋಪಾಧ್ಯಾಯ ಶಾಲೆಗಳ ಕಾರಣದಿಂದಾಗಿ ಕರ್ನಾಟಕದ ಕೆಲವು ಶಾಲೆಗಳಲ್ಲಿ 1ನೇ ತರಗತಿ ವಿದ್ಯಾರ್ಥಿಯೂ 5ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಕುಳಿತು ಪಾಠ ಕೇಳಬೇಕಾದ ಅನಿವಾರ್ಯತೆ ಎದುರಾಗಿದೆ.

> ಶಿಕ್ಷಣ ಇಲಾಖೆಯಿಂದ ಜಾರಿಗೊಳಿಸಿರುವ 'ಹಬ್ ಅಂಡ್ ಸ್ಪೋಕ್ ಮಾಡಲ್' ಆದೇಶ ನಮ್ಮ ಕೈಸೇರಿಲ್ಲ. ಆದೇಶ ಪ್ರತಿ ಬಂಧ ತಕ್ಷಣ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತೇನೆ.
> - **ಜವರೇಗೌಡ,** ಡಿಡಿಪಿಐ

ಒಂದು ಶಾಲೆಯಲ್ಲಿ 150 ರಷ್ಟು ವಿದ್ಯಾರ್ಥಿಗಳು ದಾಖಲಾತಿ ಹೊಂದಿದಾಗ ಮಾತ್ರ ವಿದ್ಯಾರ್ಥಿ–ಶಿಕ್ಷಕ ಅನುಪಾತ ನೀತಿ ನೆರವಿಗೆ ಬರಲಿದೆ. ಆದರೆ ಒಂದು ಶಾಲೆಗಳಲ್ಲಿ 10 ವಿದ್ಯಾರ್ಥಿಗಳಿದ್ದು, ಅದರಲ್ಲಿ ಐವರು ಒಂದನೇ ತರಗತಿಗೆ, ಮತ್ತೆ ಐವರು ಬೇರೆ ಬೇರೆ ಮೇಲಿನ ತರಗತಿಗಳಲ್ಲಿ ಕಲಿಯುತ್ತಿದ್ದರೆ ಅಂತಹ ಶಾಲೆಗೆ ಕನಿಷ್ಟ ಇಬ್ಬರು ಶಿಕ್ಷಕರು ಬೇಕೇ ಬೇಕಾಗುತ್ತದೆ ಎಂದು ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗುತ್ತಿರುವುದಕ್ಕೆ ಪ್ರಮುಖ ಕಾರಣವನ್ನು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

'ಹಬ್ ಅಂಡ್ ಸ್ಪೋಕ್ ಮಾಡಲ್'ಗೆ ತೀವ್ರ ವಿರೋಧ: ಅತೀ ಕಡಿಮೆ ದಾಖಲಾತಿ ಹೊಂದಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ ಅಲ್ಲಿನ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅಂತಹ ಶಾಲೆಗಳನ್ನು ಹತ್ತಿರದ ಸರ್ಕಾರಿ ಶಾಲೆಗೆ ಸಂಯೋಜಿಸುವುದು. ಸಂಯೋಜಿತ ಶಾಲೆಯನ್ನು 'ಹಬ್ ಅಂಡ್ ಸ್ಪೋಕ್ ಮಾಡಲ್' (Hub and Spoke Model) ರೀತಿಯಲ್ಲಿ ಕೇಂದ್ರ ಶಾಲೆಯಾಗಿ ಅಭಿವೃದ್ಧಿಪಡಿಸುವ ರಾಜ್ಯ ಸರ್ಕಾರ ತೀರ್ಮಾನಿಸಿಕೊಂಡಿದೆ. ಇದಕ್ಕೆ ಪೂರಕವಾಗಿ ಆಯಾಯ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಶಿಕ್ಷಣ ಸುಧಾರಣಾ ಸಮಿತಿ ರಚನೆ ಮಾಡಿ ಆದೇಶಿಸಿರುವುದಕ್ಕೆ ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ನಿತಿನ್ ತೀವ್ರವಾಗಿ ವಿರೋಧಿಸಿದ್ದು, ರಾಜ್ಯ ಸರ್ಕಾರ ಇಂತಹ ಜನವಿರೋಧಿ ನಿರ್ಧಾರವನ್ನು ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

> ರಾಜ್ಯ ಸರ್ಕಾರ ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿ, ಖಜಾನೆಯನ್ನು ಸಂಪೂರ್ಣ ಖಾಲಿ ಮಾಡಿದೆ. ಹಾಗಾಗಿ ಶಾಲಾ ಶಿಕ್ಷಣ ಇಲಾಖೆಯಲ್ಲಿ ಪ್ರತಿವರ್ಷ ಖಾಲಿಯಾಗುವ ಶಿಕ್ಷಕರ ಹುದ್ದೆಗಳನ್ನು ಕಾಲಕಾಲಕ್ಕೆ ನೇಮಕ ಮಾಡುತ್ತಿಲ್ಲ. ಶಿಕ್ಷಣ ಸಚಿವರೇ ನೀಡಿದ ಮಾಹಿತಿ ಪ್ರಕಾರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಂದಾಜು 59 ಸಾವಿರಕ್ಕೂ ಹೆಚ್ಚು ಶಿಕ್ಷಕರ ಕೊರತೆ ಇದೆ ಎಂದು ಬೆಳಗಾವಿ ಅಧಿವೇಶನದಲ್ಲಿ ಮಾಹಿತಿ ನೀಡಿದ್ದರು. ಇದರಿಂದ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವೇ..?
> - **ಕೆ.ವಸಂತ್ ಕುಮಾರ್,** ಮಾಜಿ ಸಿಂಡಿಕೇಟ್ ಸದಸ್ಯ, ಜಾನಪದ ವಿವಿ

> ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಇದೇ ನೆಪವೊಡ್ಡಿ ಎನ್‌ಇಪಿ–2020ರ ಅಡಿಯಲ್ಲಿ 13,800 ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿತ್ತು. ಇದರ ವಿರುದ್ಧ ರಾಜ್ಯದ ಶಿಕ್ಷಣ ತಜ್ಞರು, ಎಐಡಿಎಸ್‌ಓ ನೇತೃತ್ವದಲ್ಲಿ ಬೃಹತ್ ಆಂದೋಲನ ನಡೆಸಿ 35 ಲಕ್ಷಕ್ಕೂ ಹೆಚ್ಚು ಶಿಕ್ಷಣ ತಜ್ಞರ ಸಹಿಗಳನ್ನು ಸಂಗ್ರಹಿಸಿ ಈ ಶಾಲೆಗಳನ್ನು ಮುಚ್ಚುವುದನ್ನು ತಡೆಗಟ್ಟಲಾಗಿತ್ತು. ಇದೀಗ ಈಗಿನ ಸರ್ಕಾರವು ಆಯಾಯ ವಿಧಾನಸಭಾ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ತಾಲೂಕು ಮಟ್ಟದ ಶಿಕ್ಷಣ ಸುಧಾರಣಾ ಸಮಿತಿ ರಚಿಸಿ, ದಾಖಲಾತಿ ಕೊರತೆ ನೆಪದಲ್ಲಿ ಮತ್ತೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಬಗ್ಗೆ ಪ್ರಸ್ತಾಪಿಸಿರುವುದು ದುರದೃಷ್ಟಕರ.
> - **ನಿತಿನ್,** ಜಿಲ್ಲಾ ಕಾರ್ಯದರ್ಶಿ, ಎಐಡಿಎಸ್‌ಓ

ಮಾ.3, 4 ಜಯಪುರ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ಜಾತ್ರೆ

ಮೈಸೂರು, ಜ.20– ತಾಲೂಕಿನ ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಮಾ.3 ಮತ್ತು 4 ರಂದು ನಡೆಯಲಿದೆ.

ಸೋಮವಾರ ಜಯಪುರ, ಮಾವಿನಹಳ್ಳಿ, ಬರಡನಪುರ ಸೇರಿದಂತೆ 3 ಗ್ರಾಮಗಳ ಪ್ರಮುಖ ಮುಖಂಡರು ಜೇಡಿಕಟ್ಟೆ ಮಹದೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಸಭೆ ಸೇರಿ, ಒಮ್ಮತದಿಂದ ಜಾತ್ರಾ ಮಹೋತ್ಸವ ದಿನಾಂಕ ನಿಗದಿ ಮಾಡಿದ್ದಾರೆ.

ಜ.31 ರಂದು ಕೊಂಡೋತ್ಸವಕ್ಕೆ ಕಗ್ಗಲಿ ಸೌದೆ ಶೇಖರಿಸಲಾಗುತ್ತದೆ. ಮಾ.3ರಂದು ಮಹದೇಶ್ವರಸ್ವಾಮಿ ಹುಲಿ ವಾಹನೋತ್ಸವ, ಮಾ.4ರಂದು ಕೊಂಡೋತ್ಸವ ಜರುಗಲಿದೆ. ಜಾತ್ರೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಜಾತ್ರೋತ್ಸವ ಸಮಿತಿ ಅಧ್ಯಕ್ಷ ಎಂ.ಬಿ.ಚೌಡೇಗೌಡ ತಿಳಿಸಿದರು.

ಸಭೆಯಲ್ಲಿ ಮಾವಿನಹಳ್ಳಿ ಎಸ್.ಸಿದ್ದೇಗೌಡ, ಬರಡನಪುರ ಬಸವಣ್ಣ, ಜಯಪುರ ಡೇರಿ ಬಸವಣ್ಣ ಸೇರಿದಂತೆ 3 ಗ್ರಾಮಗಳ ಯಜಮಾನರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

ನಿವೇಶನ, ವಸತಿ ಯೋಜನೆ ಮಂಜೂರು ಮಾಡುವಂತೆ ಆಗ್ರಹಿಸಿ

ಅಲೆಮಾರಿ ಕೊರಚ ಸಮುದಾಯದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ



ನಿವೇಶನ ಮತ್ತು ವಸತಿ ಯೋಜನೆ ಮಂಜೂರಿಗೆ ಆಗ್ರಹಿಸಿ ಕೊರಚ ಸಮುದಾಯದ ಕುಟುಂಬಗಳು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ತಿ.ನರಸೀಪುರ, ಜ.20– ಹಲವು ದಶಕಗಳಿಂದ ಸ್ವಂತ ಸೂರಿಲ್ಲದೆ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿರುವ ಕುಟುಂಬಗಳಿಗೆ ನಿವೇಶನ ಮತ್ತು ವಸತಿ ಯೋಜನೆ ಮಂಜೂರು ಮಾಡುವಂತೆ ಆಗ್ರಹಿಸಿ ಪಟ್ಟಣದಲ್ಲಿ ಸೋಮವಾರ ಪರಿಶಿಷ್ಟ ಜಾತಿ ಅಲೆಮಾರಿ ಕೊರಚ ಸಮುದಾಯದ 40 ಕುಟುಂಬಗಳು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಆರಂಭಿಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಶಾಮಿಯಾನ ಹಾಕಿ ವಯೋವೃದ್ಧರಿಂದ ಹಿಡಿದು ಎಳೆ ವಯಸ್ಸಿನ ಮಕ್ಕಳೊಂದಿಗೆ ಪ್ರತಿಭಟನಾ ಧರಣಿ ಕುಳಿತಿರುವ ಕೊರಚ ಸಮುದಾಯದ ಕುಟುಂಬಗಳು ಖಾಸಗಿ ಭೂಮಿಯಲ್ಲಿ ನೆಲಬಾಡಿಗೆ ಕಟ್ಟಿಕೊಂಡು ವಾಸಿಸುತ್ತಿರುವ ನಮಗೆ ಸ್ವಂತ ನಿವೇಶನ ಮತ್ತು ಮನೆ ಮಂಜೂರಾತಿ ಆದೇಶ ನೀಡುವವರೆಗೂ ಇಲ್ಲಿಯೇ ಬಿಡಾರ ಹೂಡುತ್ತೇವೆ ಎಂದು ಪಟ್ಟು ಹಿಡಿದರು. ಅಲ್ಲದೇ ರಾಷ್ಟ್ರೀಯ ಹೆದ್ದಾರಿ ಜಂಕ್ಷನ್ ಬಳಿ ವಾಸವಿದ್ದ ಖಾಸಗಿ ಭೂಮಿ ಸ್ವಾಧೀನಪಡಿಸಿಕೊಂಡು ಪರ್ಯಾಯ ನಿವೇಶನ ನೀಡದೆ ಬಯಲಲ್ಲಿ ಬದುಕುವಂತೆ ಮಾಡಿರುವ ಸರ್ಕಾರ, ಜನಪ್ರತಿನಿಧಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಸ್ವಂತ ನಿವೇಶನ, ಸೂರು ಇಲ್ಲದೇ ಬದುಕುತ್ತಿರುವ ಅಲೆಮಾರಿ ಕೊರಚ ಸಮುದಾಯದ ಕುಟುಂಬಗಳ ಪರಿಸ್ಥಿತಿಯನ್ನು ಎಳೆಎಳೆಯಾಗಿ ಬಿಡಿಸಿಟ್ಟ ಅವರು ಸರ್ಕಾರ, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತಕ್ಕಾಗಲೀ ಸ್ಪಂದಿಸುವ ಕನಿಷ್ಠ ಮಾನವೀಯತೆ ಇಲ್ಲದಂತಾಗಿದೆ. ಜನಪ್ರತಿನಿಧಿಗಳಂತೂ ಕಣ್ಣಿದ್ದು ಕುರುಡರಂತಾಗಿದ್ದಾರೆ. ನೊಂದವರ ಪರ ಧ್ವನಿ ಎತ್ತುವ ದಸಂಸ ಹೋರಾಟವನ್ನು ತೀವ್ರ ಸ್ವರೂಪಕ್ಕೆ ಕೊಂಡೊಯ್ಯಲಿದ್ದು, ಜನಪ್ರತಿನಿಧಿಗಳು ಮತ್ತು ಕಾರ್ಯಾಂಗ ಸ್ಪಂದಿಸದಿದ್ದರೆ ತಾಲೂಕು ಕಚೇರಿ ಎದುರೇ 40 ಕುಟುಂಬಗಳ ವಾಸಕ್ಕೆ ಗುಡಿಸಲುಗಳನ್ನು ನಿರ್ಮಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ತಾಲೂಕು ಕುಳುವ ಸಂಘದ ಅಧ್ಯಕ್ಷ ಕೊಡಗಹಳ್ಳಿ ರವಿಕುಮಾರ್ ಮಾತನಾಡಿ, ಶೋಷಿತರು ಮತ್ತು ದಮನಿತರ ಪರವಾಗಿ ಆಡಳಿತ ನಡೆಸುವ ಸಿಎಂ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಪ್ರತಿನಿಧಿಸುವ ನರಸೀಪುರದಲ್ಲಿ ಕೊರಚ ಸಮುದಾಯದ ನಿವೇಶನದ ಕೂಗು ಅವರಿಬ್ಬರ ಕಿವಿಗೆ ಮುಟ್ಟದಿರುವುದು ನಿಜಕ್ಕೂ ವಿಪರ್ಯಾಸ. ಹೋರಾಟ ತೀವ್ರ ಸ್ವರೂಪ ಪಡೆಯುವ ಮುನ್ನವೇ ಮುಖ್ಯಮಂತ್ರಿಗಳು ಹಾಗೂ ಸಚಿವರು ಎಚ್ಚೆತ್ತುಕೊಂಡು ಕೊರಚರ 40 ಕುಟುಂಬಗಳಿಗೆ ನಿವೇಶ ಮಂಜೂರು ಮಾಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಖಜಾಂಚಿ ಶಿವಬುದ್ಧಿ, ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಕುಕ್ಕೂರು ರಾಜು, ಸಂಘಟನಾ ಸಂಚಾಲಕ ಕಿರಗಸೂರು ರಜನಿ, ನಾಗರಾಜ ಮೂರ್ತಿ, ಬನ್ನಹಳ್ಳಿ ಉಮೇಶ್, ಮಾದಿಗಹಳ್ಳಿ ರಾಮು, ಕುಕ್ಕೂರು ಪ್ರಭು, ಮಹದೇವ, ಕೊರಚ ಸಮುದಾಯದ ಮುಖಂಡರಾದ ರಾಜು, ವೆಂಕಟೇಶ್, ಭಾಸ್ಕರ್, ಮೂಗಪ್ಪ, ರಮೇಶ್, ಪರಶುರಾಮ, ಶಾಂತರಾಜು ಹಾಗೂ ಕುಟುಂಬಗಳ ಮಹಿಳೆಯರು ಮತ್ತು ಮಕ್ಕಳು ಇದ್ದರು.

ಪ್ರಾಣಿಗಳಿಗಿಂತಲೂ ನಿಕೃಷ್ಟರಾಗಿದ್ದೇವೆ

ಮೂರ್ನಾಲ್ಕು ದಶಕಗಳಿಂದ ತಿ.ನರಸೀಪುರ ನಿವಾಸಿಗಳಾಗಿರುವ ನಮಗೆ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಯಿಂದಾಗಲೀ ಯಾವುದೇ ಮೂಲ ಸೌಕರ್ಯ ಕಲ್ಪಿಸಿಲ್ಲ. ವಾಸವಿದ್ದ ಜಮೀನನ್ನು ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಬಳಿಕ ನಿವೇಶನ ಅಥವಾ ಮನೆಯೂ ಇಲ್ಲದೆ ಪ್ರಾಣಿಗಿಂತಲೂ ನಿಕೃಷ್ಟರಾಗಿ ಜೀವನ ನಡೆಸುತ್ತಿದ್ದೇವೆ. ಸಚಿವರು, ಶಾಸಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಕೊಟ್ಟರೂ ಪ್ರಯೋಜನವಾಗದ್ದರಿಂದ ಅಂತಿಮವಾಗಿ ಧರಣಿ ಕುಳಿತಿದ್ದೇವೆ.

-ಗಂಗಮ್ಮ, ಕೊರಚ ಸಮುದಾಯದ ಹಿರಿಯ ಮಹಿಳೆ.

ವಿಜೃಂಭಣೆಯ ಶ್ರೀವೇಣುಗೋಪಾಲಸ್ವಾಮಿ ಉತ್ಸವ



ಹುಲಿಕುರ ಗ್ರಾಮದಲ್ಲಿ ಶ್ರೀವೇಣಗೋಪಾಲಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಜ.20– ತಾಲೂಕಿನ ಹುಲಿಕುರ ಗ್ರಾಮದಲ್ಲಿ ಶ್ರೀವೇಣುಗೋಪಾಲಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯವನ್ನು ತಳಿರು ತೋರಣ ಹಾಗೂ ವಿವಿಧ ಬಣ್ಣ ಬಳಿದು ಸಿಂಗರಿಸಲಾಗಿತ್ತು. ಮುಂಜಾನೆಯಿಂದಲೇ ದೇವರಿಗೆ ವಿಶೇಷ ಪೂಜಾ ಕೈಂಕರ್ಯ ನಡೆಸಲಾಯಿತು. ಸರತಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು. ಅಲ್ಲದೇ ಬಳಿಕ ಬಳಿಕ ವಾದ್ಯಗೋಷ್ಠಿ, ಸತ್ತಿಗೆಗಳೊಂದಿಗೆ ಶ್ರೀವೇಣುಗೋಪಾಲಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಭಕ್ತರು ಹಣ್ಣು, ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಅಲ್ಲದೇ ಗೋವಿಂದನ ನಾಮ ಸ್ಮರಣೆ ಮಾಡುತ್ತಾ ದಾಸ ಗುಡ್ಡರು ದೊಣ್ಣೆ ವರಸೆ ಆಡಿದರು. ಇನ್ನು ಕೆಲಮು ಹರಕೆ ತೀರಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸರಗೂರು ಪೊಲೀಸರು ಮುನ್ನೆಚ್ಚರಿಕೆ ವಹಿಸಿದ್ದರು. ದೇವಸ್ಥಾನದ ಪ್ರಧಾನ ಅರ್ಚಕ ವೇಣುಗೋಪಾಲ ಅವರ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಯಿತು. ಭಕ್ತರಿಗೆ ಅನ್ನ ಸಂತರ್ಪಣೆ ನಡೆಸಲಾಯಿತು.

ಈ ವೇಳೆ ದೇವಸ್ಥಾನ ಸಮಿತಿ ಅಧ್ಯಕ್ಷ ಕೆ.ಜಿ.ಸ್ವಾಮಿ, ಉಪಾಧ್ಯಕ್ಷ ಸಣ್ಣನಾಯಕ, ಕಾರ್ಯದರ್ಶಿ ಹೆಚ್.ಬಿ.ಬಾಲಕೃಷ್ಣ, ಗೌರವಾಧ್ಯಕ್ಷ ಚಿಕ್ಕವೀರನಾಯಕ, ಪದ್ಮರಾಜ್, ನಿರ್ದೇಶಕರಾದ ವೇಣು ಗೋಪಾಲ್, ಖಜಾಂಚಿ ಮೋಹನ್ ರಾಜ್, ನಂಜೇಗೌಡ, ಪಾಟೇಲ್ ಹೆಚ್.ಎಲ್.ನಂಜೇಗೌಡ, ಕೆ.ಗೋಪಾಲ್, ಎನ್.ರಮೇಶ್, ಬಿ.ಸಿ.ಬಸಪ್ಪ, ಚಿಕ್ಕದೇವನಾಯಕ, ನವನೀತ್, ನಿರಂಜನ್ ರಾಜ್ ಅರಸ್, ಗೋವಿಂದೇಗೌಡ, ರವಿಕುಮಾರ್, ಶ್ರೀನಿವಾಸ್, ಅಭಿಕುಮಾರ್, ಬಾಲಕೃಷ್ಣ ಗೋಪಾಲಯ್ಯ ಇನ್ನಿತರರಿದ್ದರು.

ಅಶ್ಲೀಲ ಪದ ಬಳಕೆ ಮಾಡಿ 'ಕೈ' ಮುಖಂಡರ ವಿರುದ್ಧ ಹಾಕಿದ್ದ

ಫ್ಲೆಕ್ಸ್ ತೆರವುಗೊಳಿಸಿದ ಬಿಳಿಗೆರೆ ಪೊಲೀಸರು

ನಂಜನಗೂಡು, ಜ.20– ತಾಲೂಕಿನ ನಗರ್ಲೆ ಗ್ರಾಮದಲ್ಲಿ ಅಶ್ಲೀಲ ಪದ ಬಳಕೆ ಮಾಡಿ ಕಾಂಗ್ರೆಸ್ ಮುಖಂಡರನ್ನು ಗ್ರಾಮಕ್ಕೆ ನಿಷೇಧಿಸಲಾಗಿದೆ ಎಂಬ ಸಂದೇಶವಿರುವ ಫ್ಲೆಕ್ಸ್‌ಗಳನ್ನು ಬಿಳಿಗೆರೆ ಠಾಣೆ ಪೊಲೀಸರು ಸೋಮವಾರ ಸಂಜೆ ತೆರವುಗೊಳಿಸಿದರು.

ಪ್ರಕಟಣೆ ಹೆಸರಿನಲ್ಲಿ ಗ್ರಾಮದ ಮುಖ್ಯರಸ್ತೆ ಹಾಗೂ ಅಂಬೇಡ್ಕರ್ ಭವನದ ಮುಂಭಾಗ ಸೋಮವಾರ ಬೆಳಗ್ಗೆ ನಗರ್ಲೆ ಗ್ರಾಮದ ಕಾಂಗ್ರೆಸ್ ಮುಖಂಡರು ಕೈಲಾಗದವರು ಆದ ಕಾರಣ ಕಾಂಗ್ರೆಸ್ ಮುಖಂಡರನ್ನು ಗ್ರಾಮಕ್ಕೆ ನಿಷೇಧಿಸಲಾಗಿದೆ. ವರುಣಾ ವಿಧಾನಸಭಾ ಕ್ಷೇತ್ರ ಎಂಬ ಒಕ್ಕಣೆ ಒಳಗೊಂಡಿದ್ದ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು. ಇದರಿಂದ ಸ್ಥಳೀಯ ಕಾಂಗ್ರೆಸ್ ಮುಖಂಡರು ಕಿರಿಕಿರಿ ಅನುಭವಿಸುವಂತಾಗಿತ್ತು. ಬಳಿಕ ಸಂಜೆ ವೇಳೆಗೆ ಬಿಳಿಗೆರೆ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕಾಗಮಿಸಿ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿದರು.

ಜನಸಂಪರ್ಕ ಸಭೆ ಮೂಲಕ ಸಮಸ್ಯೆಗಳಿಗೆ ಪರಿಹಾರ

ಶಾಸಕ ದರ್ಶನ್



ಶಾಸಕ ದರ್ಶನ್ ಜನಸಂಪರ್ಕ ಸಭೆ ನಡೆಸಿ, ಜನರ ಅಹವಾಲು ಆಲಿಸಿದರು.

ನಂಜನಗೂಡು, ಜ.20– ಜನರ ಬಳಿಗೆ ಹೋಗಿ ಸಂಕಷ್ಟ ಆಲಿಸಿದಾಗ ಮಾತ್ರ ನಿಜಾಂಶ ತಿಳಿಯಲಿದ್ದು, ಜೊತೆಗೆ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲು ಪ್ರತಿ ಸೋಮವಾರ ಅಧಿಕಾರಿಗಳೊಂದಿಗೆ ಜನಸಂಪರ್ಕ ಸಭೆ ನಡೆಸಿ, ಜನರ ಸಮಸ್ಯೆಗಳಿಗೆ ಪರಿಹಾರ ನೀಡಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ತಾಪಂ ಕಚೇರಿಯಲ್ಲಿರುವ ತಮ್ಮ ಕೊಠಡಿಯಲ್ಲಿ ಸೋಮವಾರ ಜನಸಂಪರ್ಕ ಸಭೆ ನಡೆಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದ ಜನರು ತಮ್ಮ ಸಮಸ್ಯೆ ಹೇಳಿಕೊಳ್ಳಲು ನಮ್ಮ ಮನೆಗೆ ಅಲೆದಾಡುವುದನ್ನು ತಪ್ಪಿಸಲು ಕಳೆದ ಒಂದೂವರೆ ವರ್ಷದಿಂದ ಪ್ರತಿ ಸೋಮವಾರ ನಂಜನಗೂಡಿನಲ್ಲಿ ಒಂದು ವಾರ, ಹುಲ್ಲಹಳ್ಳಿಯಲ್ಲಿ ಮತ್ತೊಂದು ವಾರ ಜನಸಂಪರ್ಕ ಸಭೆ ನಡೆಸುತ್ತಿದ್ದು, ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಜೊತೆಗೆ ಶಾಸಕನಾಗಿ ಜನರ ಸಂಕಷ್ಟ ಆಲಿಸಿ ಸಮಸ್ಯೆ ಪರಿಹರಿಸುವುದು ನಮ್ಮ ಜವಾಬ್ದಾರಿ. ಆ ನಿಟ್ಟಿನಲ್ಲಿ ದಿನದ 24 ಗಂಟೆಯೂ ಲಭ್ಯವಿದ್ದು, ಜನತೆ ದೂರವಾಣಿ ಮೂಲಕ ಸಮಸ್ಯೆ ಹೇಳಿಕೊಂಡರೆ ಸಮಸ್ಯೆಗಳನ್ನು ಪರಿಹರಿಸಲು ಬದ್ಧನಾಗಿದ್ದೇನೆ ಎಂದರು.

ಜನಸಂಪರ್ಕ ಸಭೆ ವೇಳೆ ಕಂದಾಯ ಇಲಾಖೆಯಿಂದ ಆಗಬೇಕಾಗಿರುವ ಕೆಲಸಗಳಿಗಾಗಿ ಹೆಚ್ಚಿನ ಮಂದಿ ಬರುತ್ತಾರೆ. ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿ, ಪೌತಿ ಖಾತೆ, ಜಮೀನು ಸರ್ವೆ, ಜಮೀನುಗಳಿಗಳಿಗೆ ಬಂಡಿದಾರಿ ವಿಚಾರವಾಗಿ ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ ನೀಡಿ ಪರಿಹರಿಸಲಾಗುವುದು. ಸರ್ಕಾರ ಕೆರೆ, ಸ್ಮಶಾನ ಒತ್ತುವರಿ ತೆರವು ಪ್ರಕರಣವನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ತಹಸೀಲ್ದಾರ್ ಅವರಿಗೆ ಅಧಿಕಾರ ನೀಡಿದ್ದು, ಈ ವಿಚಾರವಾಗಿ ಬಂದ ದೂರುಗಳನ್ನು ಕಾಲಮಿತಿಯಲ್ಲಿ ಪರಿಹರಿಸುವಂತೆ ತಾಕೀತು ಮಾಡಲಾಗಿದೆ. ವಿವಿಧ ಇಲಾಖೆಗಳಲ್ಲಿ ನನೆಗುದಿಗೆ ಬಿದ್ದಿರುವ ಜನರ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಪರಿಹರಿಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಸದಸ್ಯ ಪ್ರದೀಪ್, ಮುಖಂಡರಾದ ಕುರಿಹುಂಡಿ ರಾಜು, ನಾಗರಾಜಯ್ಯ, ವಿಜಯ್ ಕುಮಾರ್, ಶ್ರೀನಿವಾಸಮೂರ್ತಿ, ಕಾಂಗ್ರೆಸ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಪ್ರದೀಪ್, ತಾಪಂ ಇಓ ಜೆರಾಲ್ಡ್ ರಾಜೇಶ್ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ವಡ್ಡರಗುಡಿಯಲ್ಲಿ ಕೆಪಿಟಿಸಿಎಲ್ ಟವರ್ ನಿರ್ಮಾಣ ಕಾಮಗಾರಿ ಆರಂಭ

ಮೈಸೂರು, ಜ.20– ಭೂ ಮಾಲೀಕರ ಜೊತೆಗಿನ ಯಶಸ್ವಿ ಸಂಧಾನ ಹಾಗೂ ಸೂಕ್ತ ಪರಿಹಾರ ಭರವಸೆ ಬಳಿಕ ಹೆಚ್.ಡಿ.ಕೋಟೆ ತಾಲೂಕು ವಡ್ಡರಗುಡಿ ಗ್ರಾಮದಲ್ಲಿ ಹಲವು ತಿಂಗಳಿಂದ ನನೆಗುದಿಗೆ ಬಿದ್ದಿದ್ದ ಕೆಪಿಟಿಸಿಎಲ್‌ನ 66/11 ಕೆವಿ ವಿದ್ಯುತ್ ಗೋಪುರ ಮತ್ತು ಲೈನ್ ನಿರ್ಮಾಣ ಕಾರ್ಯಕ್ಕೆ ಇದ್ದ ವಿಘ್ನ ನಿವಾರಣೆಯಾಗಿದೆ.

ಪೊಲೀಸರ ಸಮ್ಮುಖದಲ್ಲಿ ಕೆಪಿಟಿಸಿಎಲ್ ಅಧಿಕಾರಿಗಳು ಮತ್ತು ಜಮೀನು ಮಾಲೀಕರ ಜೊತೆ ನಡೆದ ಮಾತುಕತೆ ಬಳಿಕ ಸೂಕ್ತ ಪರಿಹಾರದೊಂದಿಗೆ ನಿಗದಿತ ಸ್ಥಳದಲ್ಲಿ ಟವರ್ ನಿರ್ಮಾಣಕ್ಕೆ ಸರ್ವೆ ನಡೆಸಿ ಕಾಮಗಾರಿ ಆರಂಭಿಸಲು ಜಮೀನು ಮಾಲೀಕರು ಸಮ್ಮತಿಸಿದ್ದಾರೆ.

ಕಾಡಂಚಿನ ನೂರಕ್ಕೂ ಹೆಚ್ಚು ಗ್ರಾಮಗಳಿಗೆ ವಿದ್ಯುತ್ ಕಲ್ಪಿಸುವ ಉದ್ದೇಶದಿಂದ ಹೆಚ್.ಡಿ.ಕೋಟೆ ತಾಲೂಕು ವಡ್ಡರಗುಡಿ ಗ್ರಾಮದ ಜಮೀನಿನಲ್ಲಿ 66/11 ವಿದ್ಯುತ್ ಗೋಪುರ ನಿರ್ಮಿಸಲು ಸ್ಥಳ ನಿಗದಿ ಮಾಡಲಾಗಿತ್ತು. ಆದರೆ, ಕಾನೂನಿನ ಮಾಹಿತಿ ಕೊರತೆಯಿಂದಾಗಿ ಸ್ಥಳೀಯರು ಕಾಮಗಾರಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಅಲ್ಲದೆ, ಕೆಲಸ ಆರಂಭಿಸಲು ಅವಕಾಶ ನೀಡಿರಲಿಲ್ಲ. ಈ ಮಧ್ಯೆ ಜಿಲ್ಲಾಧಿಕಾರಿಗಳ ನ್ಯಾಯಾಲಯವು ಜಮೀನು ಮಾಲೀಕರಿಗೆ ಸೂಕ್ತ ಪರಿಹಾರ ನೀಡಿ ನಿಗದಿತ ಸ್ಥಳದಲ್ಲಿಯೇ ಕಾಮಗಾರಿ ಆರಂಭಿಸುವಂತೆ ಆದೇಶ ನೀಡಿತ್ತು. ಅಲ್ಲದೆ, ಕಾಮಗಾರಿ ನಡೆಸಲು ಸೂಕ್ತ ಪೊಲೀಸ್ ಭದ್ರತೆ ಕಲ್ಪಿಸುವಂತೆಯೂ ಸೂಚಿಸಿತ್ತು. ಅದರಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಟಿಎಸ್.ರಮೇಶ್, ಅಧೀಕ್ಷಕ ಇಂಜಿನಿಯರ್, ಯೋಜನೆ, ಕೆಪಿಟಿಸಿಎಲ್ ಮೈಸೂರು ವಿಭಾಗ ಇವರ ನೇತೃತ್ವದಲ್ಲಿ ಸೋಮವಾರ ಜಮೀನು ಮಾಲೀಕರೊಂದಿಗೆ ಮಾತುಕತೆ ನಡೆಸಿ, ಜಮೀನು ಮಾಲೀಕರಿಗೆ ಸೂಕ್ತ ಪರಿಹಾರ ಕಲ್ಪಿಸುವ ಭರವಸೆ ನೀಡಲಾಯಿತು. ಇದರಿಂದ ಸಮಾಧಾನಗೊಂಡ ಜಮೀನು ಮಾಲೀಕರು ಕಾಮಗಾರಿ ಆರಂಭಿಸಲು ಒಪ್ಪಿಗೆ ಸೂಚಿಸಿದರು. ಅದರಂತೆ ಸೋಮವಾರವೇ ಕೆಲಸ ಆರಂಭಿಸಲಾಗಿದೆ.

ಎಸ್‌ಡಿಎಂಸಿ ಸದಸ್ಯನಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ

ಶಿರಮಹಳ್ಳಿ ಗ್ರಾಮದ ಮುಖಂಡ ಮಹದೇವು ಆರೋಪ



ಸುದ್ದಿಗೋಷ್ಠಿಯಲ್ಲಿ ಗ್ರಾಮದ ಮುಖಂಡ ಮಹದೇವು ಮಾತನಾಡಿದರು.

ಹೆಚ್.ಡಿ.ಕೋಟೆ, ಜ.20– ತಾಲೂಕಿನ ಶಿರಮಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಸದಸ್ಯ ಸೋಮಣ್ಣ ಅವರು ಪಿತೂರಿ ಮತ್ತು ಜಾತಿ ತಾರತಮ್ಯ ಮಾಡುವ ಮೂಲಕ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಮಾಡುತ್ತಿದ್ದಾರೆ ಎಂದು ಗ್ರಾಮದ ಮುಖಂಡ ಮಹದೇವು ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲೆ ಮುಖ್ಯೋಪಾಧ್ಯಾಯ ಪುಟ್ಟರಾಜು, ಎಸ್‌ಡಿಎಂಸಿ ಅಧ್ಯಕ್ಷ ನಂಜಯ್ಯ ಅಡುಗೆ ಸಿಬ್ಬಂದಿ ದಲಿತ ಜನಾಂಗಕ್ಕೆ ಸೇರಿದ್ದು, ನನ್ನನ್ನು ಎಸ್‌ಡಿಎಂಸಿ ಅಧ್ಯಕ್ಷನ್ನಾಗಿ ಮಾಡಲಿಲ್ಲ ಎಂಬುದನ್ನು ಮನದಲ್ಲಿಟ್ಟುಕೊಂಡು ಸೋಮಣ್ಣ ಅವರು ಪಿತೂರಿ ಮತ್ತು ಜಾತಿ ತಾರತಮ್ಯ ಮಾಡುವ ಮೂಲಕ ವಿದ್ಯಾರ್ಥಿಗಳನ್ನು ಎತ್ತಿ ಕಟ್ಟಿ ಅವರಿಂದ ಪ್ರತಿಭಟನೆ ಮಾಡಿಸುತ್ತಿದ್ದಾರೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ ಎಂದು ಆರೋಪಿಸಿದರು.

ಸೋಮಣ್ಣ ಅವರು ಮುಖ್ಯೋಪಾಧ್ಯಾಯ ಪುಟ್ಟರಾಜು ಅವರಿಗೆ ಜಾತಿನಿಂದನೆ ಮಾಡಿ, ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದು ಈ ಸಂಬಂಧ ಕಳೆದ 8 ದಿನಗಳ ಹಿಂದೆ ಅಂತರಸಂತೆ ಠಾಣೆ ಇನ್‌ಸ್ಪೆಕ್ಟರ್ ಚಂದ್ರಹಾಸ ಅವರಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಮುಂದಿನ ದಿನಗಳಲ್ಲಿ ಪೊಲೀಸರು ಈ ಸಂಬಂಧ ಕ್ರಮ ಕೈಗೊಳ್ಳದಿದ್ದರೇ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ನಂಜಯ್ಯ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕುಮಾರ್, ಚಿಕ್ಕಚಲುವಯ್ಯ, ರಾಜಶೇಖರ್, ನಾಗರಾಜು, ನವೀನ, ಕರಿಯಯ್ಯ, ಮಹದೇವಮೂರ್ತಿ, ಸೋಮಶೇಖರ್, ರಾಜು, ರಾಜಶೇಖರ್, ನಂಜುಂಡಮೂರ್ತಿ, ತಮ್ಮಯ್ಯ, ಶಿವು, ನಾಗರಾಜು, ಆನಂದ, ನವೀನ, ನಂಜುಂಡಮೂರ್ತಿ, ತಮ್ಮಯ್ಯ, ಶಿವು, ನಾಗರಾಜು ಇದ್ದರು.

ರಾಜ್ಯ ಭೀಮ್ ಸೇನೆ ತಾಲೂಕು ಘಟಕ ರಚನೆ



ರಾಜ್ಯ ಭೀಮ್‌ಸೇನೆ ಸಂಘಟನೆ ತಾಲೂಕು ಘಟಕ ರಚಿಸಲಾಯಿತು.

ಹುಣಸೂರು, ಜ.20– ನಗರದಲ್ಲಿ ಕರ್ನಾಟಕ ರಾಜ್ಯ ಭೀಮ್‌ಸೇನೆ ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಆರ್.ಸರ್ವೇಶ್ ಅಧ್ಯಕ್ಷತೆಯಲ್ಲಿ ತಾಲೂಕು ಘಟಕ ರಚಿಸಲಾಯಿತು.


ಭೀಮ್ ಸೇನೆ ತಾಲೂಕು ಗೌರವಾಧ್ಯಕ್ಷರಾಗಿ ಶಿವಶೇಖರ್, ಸುರೇಶ್, ಕಾರ್ಯಾಧ್ಯಕ್ಷ ಕೆಂಪರಾಜು, ಪ್ರಧಾನ ಕಾರ್ಯದರ್ಶಿ ಹರೀಶ್, ಉಪಾಧ್ಯಕ್ಷ ಮೋಹನ್, ಖಜಾಂಚಿಯಾಗಿ ಚಂದ್ರಶೇಖರ್ ಅವರನ್ನು ನೇಮಕ ಮಾಡಲಾಯಿತು. ಇದೇ ವೇಳೆ ಮಹಿಳಾಧ್ಯಕ್ಷೆ ಪಾರ್ವತಿ, ಕಾರ್ಯದರ್ಶಿ ರಾಜೇಶ್, ಜಿಲ್ಲಾಧ್ಯಕ್ಷ ಜಗದೀಶ್ ಸಂಘಟನೆ ಬಗ್ಗೆ ಚರ್ಚೆ ನಡೆಸಿದರು. ಅಲ್ಲದೇ ಪಕ್ಷ ಜಾತಿ ಚೌಕಟ್ಟು ದಾಟಿ ಅಂಬೇಡ್ಕರ್ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮನಸ್ಥಿತಿ ಇರುವವರು ಸಂಘಟನೆ ಸೇರಬಹುದು ಎಂದರು.

ಹೆಚ್.ಮಟಕೆರೆ ಪಿಎಸಿಎಸ್ ಕ್ಯಾಲೆಂಡರ್ ಬಿಡುಗಡೆ



ಹೆಚ್.ಡಿ.ಕೋಟೆ ತಾಲೂಕಿನ ಹೆಚ್.ಮಟಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2025ನೇ ನೂತನ ಕ್ಯಾಲೆಂಡರ್ ಅನ್ನು ಅಧ್ಯಕ್ಷ ಬೊಪ್ಪನಹಳ್ಳಿ ಭಾಸ್ಕರ್ ಉದ್ಘಾಟಿಸಿದರು. ಈ ವೇಳೆ ಉಪಾಧ್ಯಕ್ಷ ಇಸ್ಮಾಯಿಲ್, ನಿರ್ದೇಶಕರಾದ ರೆಹಮತ್ ಆಲಿ ಬೇಗ್, ಗೋಪಾಲಯ್ಯ, ದೇವಮ್ಮ, ಜೈಶಂಕರ್, ರಾಜೇಶ್, ರವಿಕುಮಾರ್, ಶಾರದ, ಶಾಂತಮ್ಮ, ರವಿ, ಶಿವಣ್ಣೇಗೌಡ ಇತರರಿದ್ದರು.

ಖಜಾನೆಗೆ ಶ್ರೀರಾಮನ ಆಭರಣ ರವಾನೆ




ಶ್ರೀರಾಮ ದೇವರ ಆಭರಣಗಳಿಗೆ ಪೂಜೆ ಸಲ್ಲಿಸಿ ಖಜಾನೆಗೆ ಕಳುಹಿಸಲಾಯಿತು

ಚುಂಚನಕಟ್ಟೆ, ಜ.20– ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮದೇವರ ಆಭರಣಗಳನ್ನು ಸೂಕ್ತ ಭದ್ರತೆಯೊಂದಿಗೆ ಕೆ.ಆರ್.ನಗರದ ಖಜಾನೆಗೆ ಸೋಮವಾರ ರವಾನಿಸಲಾಯಿತು.

ದೇವಾಲಯದ ಆವರಣದಲ್ಲಿ ಆಭರಣಗಳಿಗೆ ಪೂಜೆ ಸಲ್ಲಿಸಿ ನಂತರ ಮಾತನಾಡಿದ ದೇವಾಲಯದ ಇಓ ರಘು, ಶಾಸಕ ಡಿ.ರವಿಶಂಕರ್ ಮಾರ್ಗದರ್ಶನದಲ್ಲಿ ದನಗಳ ಜಾತ್ರೆ ಮತ್ತು ಬ್ರಹ್ಮ ರಥೋತ್ಸವ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ನಿರ್ವಿಘ್ನವಾಗಿ ಮುಗಿದಿದೆ. ಹೀಗಾಗಿ ದೇವಾಲಯದ ಪರವಾಗಿ ಶಾಸಕ ರವಿಶಂಕರ್ ಮತ್ತು ಕುಟುಂಬ, ತಹಸೀಲ್ದಾರ್ ನರಗುಂದ, ಉಪ ತಹಸೀಲ್ದಾರ್ ಶರತ್ ಕುಮಾರ್, ಪಾರುಪತ್ತೇದಾರ ಯತಿರಾಜ್, ಅರ್ಚಕ ಶ್ರೀನಿವಾಸಭಟ್ಟ, ಪರಿಚಾರಕ ವಾಸುದೇವನ್, ನಾರಾಯಣ ಅಯ್ಯಂಗಾರ್, ದೇವಾಲಯದ ಸಿಬ್ಬಂದಿಗಳಾದ ಅನಂತ, ಚಂದ್ರು ನಾಯಕ್, ಮಣಿ, ತಿಮ್ಮಣ್ಣ, ಶಿವಣ್ಣ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ಜನತೆಗೆ ಕೃತಜ್ಞತೆ ಸಲ್ಲಿಸಿದರು.

ಫೆ.2ಕ್ಕೆ ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಚುನಾವಣೆ

● ನಾಮಪತ್ರ ಸಲ್ಲಿಸಲು ಜ.25 ಕೊನೆ ದಿನ ● ಇದುವರೆಗೆ 7 ನಾಮಪತ್ರ ಸಲ್ಲಿಕೆ





ಅತ್ತಹಳ್ಳಿ ಕ್ಷೇತ್ರದಿಂದ ಎ.ಎಂ.ಮಹದೇವ(ಮಧು), ಯಾಚೇನಹಳ್ಳಿ ಕ್ಷೇತ್ರದಿಂದ ತುರುಗನೂರು ಟಿ.ಎಸ್.ಪ್ರಸನ್ನ ನಾಮಪತ್ರ ಸಲ್ಲಿಸಿದರು.

ತಿ.ನರಸೀಪುರ, ಜ.20– ತಾಲೂಕಿನ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಗೆ ದಿನಾಂಕ ನಿಗದಿಪಡಿಸಲಾಗಿದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿದೆ.

ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ 5 ವರ್ಷಗಳ ಅವಧಿಗೆ 14 ಮಂದಿ ನಿರ್ದೇಶಕರ ಆಯ್ಕೆಗಾಗಿ ಫೆ.2ರಂದು ಚುನಾವಣೆ ನಡೆಯಲಿದೆ. ಜ.19 ರಿಂದಲೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಂಡಿದ್ದು, ಜ.25 ಕೊನೆ ದಿನ. ಸಾಲ ಪಡೆದವರ ಕ್ಷೇತ್ರಗಳ ಪೈಕಿ ಕುಪ್ಯ, ಬನ್ನೂರು, ಯಾಚೇನಹಳ್ಳಿ, ಅತ್ತಹಳ್ಳಿ, ಸೋಮನಾಥಪುರ, ಚಿದರವಳ್ಳಿ, ಕೊತ್ತೇಗಾಲ ಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳಾಗಿ, ಸೋಸಲೆ(ಪ.ಜಾತಿ), ಮಾದಾಪುರ(ಪ.ಪಂಗಡ), ಮೂಗೂರು (ಮಹಿಳಾ ಮೀಸಲು), ಕಸಬಾ(ಮಹಿಳಾ ಮೀಸಲು), ದೊಡ್ಡೇಬಾಗಿಲು (ಹಿಂದುಳಿದ ಪ್ರವರ್ಗ ಎ), ತಲಕಾಡು (ಹಿಂದುಳಿದ ಪ್ರವರ್ಗ ಬಿ) ಹಾಗೂ ತಿ.ನರಸೀಪುರ ತಾಲೂಕು ಕಾರ್ಯ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಸಾಲಗಾರರಲ್ಲದ ಕ್ಷೇತ್ರಗಳೆಂದು ವಿಂಗಡಣೆ ಮಾಡಲಾಗಿದೆ.

ಇದುವರೆಗೂ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆ ಬಯಸಿ ಎಸ್‌ಟಿ ವರ್ಗಕ್ಕೆ ಮೀಸಲಾದ ಮಾದಾಪುರ ಕ್ಷೇತ್ರದಿಂದ ಕೆ.ಬಿ.ಪ್ರಭುಸ್ವಾಮಿ, ಹೆಮ್ಮಿಗೆ ಸೋಮಣ್ಣ, ಮಹಿಳಾ ಮೀಸಲು ಕಸಬಾ ಕ್ಷೇತ್ರದಿಂದ ಮನ್ನೇಹುಂಡಿ ಎಂ.ನಾಗರತ್ನ, ಸಾಮಾನ್ಯ ವರ್ಗಕ್ಕೆ ಮೀಸಲಾದ ಯಾಚೇನಹಳ್ಳಿ ಕ್ಷೇತ್ರದಿಂದ ಟಿ.ಸಿ.ಸಂದೀಪ್ ಹಾಗೂ ತುರುಗನೂರು ಟಿ.ಎಸ್.ಪ್ರಸನ್ನ, 2ಎ ವರ್ಗಕ್ಕೆ ಮೀಸಲಾದ ದೊಡ್ಡೆಬಾಗಿಲು ಕ್ಷೇತ್ರದಿಂದ ಎಂ.ಮಲ್ಲಿಕಾರ್ಜುನ ಸ್ವಾಮಿ ನಾಮಪತ್ರ ಸಲ್ಲಿಸಿದರೇ, ಸಾಮಾನ್ಯ ವರ್ಗಕ್ಕೆ ಮೀಸಲಾದ ಅತ್ತಹಳ್ಳಿ ಕ್ಷೇತ್ರದಿಂದ ಎ.ಎಂ.ಮಹದೇವ(ಮಧು) ಅವರು ಸಹಾಯಕ ಚುನಾವಣಾಧಿಕಾರಿ ವಿಮಲ್ ಕುಮಾರ್ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು.

ನಾಮಪತ್ರಗಳ ಪರಿಶೀಲನೆ ಜ.26 ರಂದು ನಡೆಯಲಿದ್ದು, ನಾಮಿನೇಷನ್ ವಾಪಸ್ ಪಡೆಯಲು ಜ.27 ಕೊನೆ ದಿನ. ಚುನಾವಣೆ ಫೆ.2 ರಂದು ಗುರುಭವನದ ಹಿಂಭಾಗದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ವ್ಯವಸ್ಥಾಪಕ ಎನ್.ಮಹೇಶ್ ತಿಳಿಸಿದರು.

ನಾಮಪತ್ರ ಸಲ್ಲಿಕೆ ವೇಳೆ ಮುಖಂಡರಾದ ಹೆಚ್.ದೇವರಾಜು, ಹೆಚ್.ನಾಗರಾಜು ಬಿ.ಆರ್.ರಾಮಕೃಷ್ಣ, ವೈ.ಕೆ.ರವಿಕುಮಾರ್, ಸಿ.ಲಿಂಗಣ್ಣ, ಎ.ಎನ್.ಸುನೀಲ್, ಸತೀಶ್, ಚಂದ್ರಶೇಖರ್, ಗಂಗಮ್ಮ, ಮಾದೇಗೌಡ, ಶಿವಕುಮಾರ್, ಸಂಜಯ್, ಸ್ವಾಮಿ(ಎಲೆಕ್ಟ್ರಿಕಲ್), ಪಿ.ಸತೀಶ್, ಮಹದೇವ, ಎ.ಆರ್.ನಾಗರಾಜು, ಬಿ.ಚೇತನ, ಕೀರ್ತಿ, ನಾಗೇಂದ್ರ, ರವಿ ಮತ್ತಿತರಿದ್ದರು.

ಪ್ರೇಯಸಿಗೆ ಚಿನ್ನ ಖರೀದಿಸಲು

ಎಟಿಎಂಗೆ ತುಂಬಬೇಕಿದ್ದ ಹಣ ದೋಚಿದ್ದ ಯುವಕನ ಬಂಧನ



ಹುಣಸೂರು, ಜ.20– ಪ್ರೇಯಸಿಗೆ ಬಂಗಾರದ ಉಡುಗೊರೆ ನೀಡಲು ಎಟಿಎಂಗಳಿಗೆ ಹಣ ತುಂಬುವ ಕೆಲಸಕ್ಕಿದ್ದ ಯುವಕನೋರ್ವ ಎಟಿಎಂಗೆ ಹಣ ತುಂಬದೆ ಲಪಟಾಯಿಸಿ ಇದೀಗ ಜೈಲು ಪಾಲಾಗಿರುವ ಘಟನೆ ತಾಲೂಕಿನ ಗದ್ದಿಗೆ ಗ್ರಾಮದಲ್ಲಿ ನಡೆದಿದೆ.

ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ತುರುಗನೂರಿನ ಅಕ್ಷಯ್ ಎಂಬಾತನನ್ನು ಬಿಳಿಕೆರೆ ಠಾಣಾ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಮೈಸೂರಿನ ಟಿ.ಎಲ್.ಎಂಟರ್ ಪ್ರೈಸಸ್‌ನಲ್ಲಿ ಕೆಲಸಕ್ಕಿದ್ದ ಅಕ್ಷಯ್‌ಗೆ ಕಂಪನಿಯವರು ಜಿಲ್ಲೆಯ ವಿವಿಧ 16 ಎಟಿಎಂಗಳಿಗೆ ಹಣ ತುಂಬುವ ಕೆಲಸ ನೀಡಿದ್ದರು. ಕಂಪನಿ ಪರವಾಗಿ ಹಣ ಪಡೆದು ಗದ್ದಿಗೆ ಎಟಿಎಂಗೆ ಹಣ ತುಂಬುವಂತೆ ನಾಟಕವಾಡಿ 5.80 ಲಕ್ಷ ರೂ. ತನ್ನ ಬ್ಯಾಗಿಗಿಳಿಸಿದ್ದ ಅಕ್ಷಯ್ ಘಟನೆ ನಂತರ ಕೆಲಸಕ್ಕೆ ಗೈರಾಗಿದ್ದ. ಎಟಿಎಂಗೆ ಹಣ ತುಂಬದ ಬಗ್ಗೆ ಏಜೆನ್ಸಿಯವರಿಗೆ ಬ್ಯಾಂಕಿನಿಂದ ಮಾಹಿತಿ ನೀಡಿದ್ದರು. ಈ ಬಗ್ಗೆ ಅನುಮಾನಗೊಂಡ ಕಂಪನಿಯವರು ಸಿಸಿ ಕ್ಯಾಮರಾ ಪರಿಶೀಲಿಸಿದ ವೇಳೆ ಹಣ ತುಂಬದೆ ತನ್ನ ಬ್ಯಾಗಿನಲ್ಲಿ ಹಾಕಿಕೊಂಡ ದೃಶ್ಯ ಸೆರೆಯಾಗಿತ್ತು. ಗಾಬರಿಗೊಂಡ ಕಂಪನಿ ವ್ಯವಸ್ಥಾಪಕರು ಬಿಳಿಕೆರೆ ಠಾಣೆಯಲ್ಲಿ ದೂರು ದಾಖಲಿಸಿದ್ದ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಅಕ್ಷಯ್ ಮೊಬೈಲ್ ಜಾಡು ಹಿಡಿದು ತುರಗನೂರಿಗೆ ತೆರಳಿದ ವೇಳೆ ಪಕ್ಕದ ಗ್ರಾಮದಲ್ಲಿ ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಗುಂಡೇರಿಸುತ್ತಿದ್ದ ವೇಳೆ ವಶಕ್ಕೆ ಪಡೆಯಲು ಮುಂದಾಗುತ್ತಿದ್ದಂತೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಪೊಲೀಸರ ಎಚ್ಚರಿಕೆಯಿಂದ ಪಾರ್ಟಿಯಲ್ಲಿದ್ದ ಇತರರು ಜಾಗ ಖಾಲಿ ಮಾಡಿದ್ದಾರೆ. ಅಕ್ಷಯ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ ತನ್ನ ಪ್ರೇಯಸಿಗೆ ಚಿನ್ನ ಖರೀದಿಸಿದ್ದ ಬಗ್ಗೆ ಮಾಹಿತಿ ನೀಡಿದ್ದಾನೆ. ಇದೀಗ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ಅಕ್ಷಯ್‌ನನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದ್ದು, ಆತನ ಪ್ರೇಯಸಿ ಪತ್ತೆಗೆ ಕ್ರಮ ವಹಿಸಿದ್ದಾರೆ.

ಜಮೀನು ಮಾರಿಕೊಳ್ಳಬೇಡಿ; ಸರಳ ವಿವಾಹ ಮಾಡಿ

● ಶಾಸಕ ಜಿ.ಟಿ. ದೇವೇಗೌಡ ಮನವಿ ● ಮೈಸೂರು ತಾಲೂಕು ಮಟ್ಟದ ಮಹಿಳಾ ಸಮಾವೇಶ
● ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸೇವಾ ಪ್ರತಿನಿಧಿಗಳಿಗೆ ದ್ವಿಚಕ್ರ ವಾಹನ ವಿತರಣೆ




ಮೈಸೂರಿನ ಕಳಸ್ತವಾಡಿಯ ಸಂಕಲ್ಪಸೌಧದಲ್ಲಿ ಸೋಮವಾರ ಏರ್ಪಡಿಸಿದ್ದ ತಾಲೂಕು ಮಟ್ಟದ ಮಹಿಳಾ ಸಮಾವೇಶವನ್ನು ಕ್ಷೇಮವನ ಪ್ರಕೃತಿ ಚಿಕಿತ್ಸಾ ಕೇಂದ್ರದ ಸಿಇಒ ಶ್ರದ್ಧಾ ಅಮಿತ್ ಉದ್ಘಾಟಿಸಿದರು. ಶಾಸಕ ಜಿ.ಟಿ. ದೇವೇಗೌಡ, ವಕೀಲೆ ಎಚ್.ಎಸ್. ಯಶೋದಾ, ಪ್ರಾಧ್ಯಾಪಕಿ ಡಾ.ಎಚ್.ಪಿ. ಜ್ಯೋತಿ, ಜಯರಾಂ ನೆಲ್ಲಿತಾಂಯ, ಅಂಶಿ ಪ್ರಸನ್ನಕುಮಾರ್, ಪ್ರಭುಸ್ವಾಮಿ, ವಿಜಯಕುಮಾರ್ ನಾಗನಾಳ, ಶಶಿರೇಖಾ ಉಪಸ್ಥಿತರಿದ್ದಾರೆ. ಮತ್ತೊಂದು ಚಿತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸೇವಾ ಪ್ರತಿನಿಧಿಗಳಿಗೆ ಶಾಸಕ ಜಿ.ಟಿ. ದೇವೇಗೌಡರು ದ್ವಿಚಕ್ರ ವಾಹನಗಳನ್ನು ವಿತರಿಸಿದರು.

ಮೈಸೂರು, ಜ.20– ಜಮೀನು ಮಾರಿಕೊಳ್ಳಬೇಡಿ, ಸರಳ ವಿವಾಹ ಮಾಡಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ಎಂದು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಸಲಹೆ ನೀಡಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಕಳಸ್ತವಾಡಿಯ ಸಂಕಲ್ಪ ಸೌಧದಲ್ಲಿ ಸೋಮವಾರ ಏರ್ಪಡಿಸಿದ್ದ ತಾಲೂಕು ಮಟ್ಟದ ಮಹಿಳಾ ಸಮಾವೇಶದಲ್ಲಿ ಸೇವಾ ಪ್ರತಿನಿಧಿಗಳಿಗೆ ದ್ವಿಚಕ್ರ ವಾಹನಗಳನ್ನು ವಿತರಿಸಿ ಅವರು ಮಾತನಾಡಿದರು.

ರೈತರ ಆತ್ಮಹತ್ಯೆಗಳಿಗೆ ಅದ್ದೂರಿ ಮದುವೆಗಳು ಸಹ ಕಾರಣವಾಗುತ್ತಿವೆ. ಮಗಳ ಮದುವೆಗಾಗಿ ಜಮೀನು ಮಾರಾಟ ಮಾಡುವ ಪ್ರವೃತ್ತಿ ಇದೆ. ಇದರ ಬದಲು ಮದುವೆಯನ್ನು ಸರಳವಾಗಿ ಮಾಡಿ, ಆ ಜಮೀನನ್ನು ಮಗಳ ಹೆಸರಿಗೆ ಬರೆದುಕೊಟ್ಟರೆ ಮುಂದೆ ಸುಂದರ ಬದುಕು ಕಟ್ಟಿಕೊಳ್ಳುತ್ತಾರೆ ಎಂದು ಅವರು ಹೇಳಿದರು.

ಮಹಿಳೆಯರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಜೊತೆಗೆ ಸಂಸ್ಕಾರ, ಸದ್ಗುಣಗಳನ್ನು ಕೂಡ ಕಲಿಸಬೇಕು. ತಂದೆ–ತಾಯಿ, ಗುರು– ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸಿ, ಇಲ್ಲದಿದ್ದಲ್ಲಿ ಅಡ್ಡದಾರಿ ಹಿಡಿಯುತ್ತವೆ ಎಂದು ಎಚ್ಚರಿಸಿದರು.

ಮಹಿಳೆಯರು ಇವತ್ತು ಅಬಲೆಯರಲ್ಲ, ಸ್ವಾತಂತ್ರ್ಯ, ಸ್ವಾಯತ್ತತೆಯಿಂದ ಎಲ್ಲಾ ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿದ್ದಾರೆ. ಮೊದಲೆಲ್ಲಾ ಮಹಿಳೆಯರಲ್ಲಿ ಉಳಿತಾಯ ಮನೋಭಾವ ಇರಲಿಲ್ಲ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅವರಲ್ಲಿ ಉಳಿತಾಯ ಮನೋಭಾವನೆ ಬೆಳೆಸಿದೆ ಎಂದು ಹೇಳಿದರು.

ಎಲ್ಲರೂ ಪರಸ್ಪರ ಪ್ರೀತಿಯಿಂದ ಇರಿ, ಹಗೆತನ ಬಿಡಿ, ಶಾಂತಿ, ಸಾಮರಸ್ಯದಿಂದ ಬಾಳಿ. ಸರಳತೆಯಿಂದ ಇದ್ದರೆ, ಶಾಂತಿ, ನೆಮ್ಮದಿಯಿಂದ ಇದ್ದರೆ ಬದುಕು ಕೂಡ ಸುಂದರವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಡಾ. ಡಿ. ವೀರೇಂದ್ರ ಹೆಗ್ಗಡೆ, ಡಾ.ಹೇಮಾವತಿ ವಿ. ಹೆಗ್ಗಡೆ ಅವರ ನೇತೃತ್ವದಲ್ಲಿ ಟ್ರಸ್ಟ್ ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿದೆ. ಕೆರೆ, ಕಟ್ಟೆಗಳು, ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಿದೆ. ಬಡವರಿಗೆ ಮನೆ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಅಶಕ್ತರಿಗೆ ಪಿಂಚಣಿ ನೀಡಿದೆ ಎಂದು ಅವರು ಶ್ಲಾಘಿಸಿದರು.

ಸೋಲಿಗೆ ಹೆದರಬಾರದು: ಸಮಾವೇಶ ಉದ್ಘಾಟಿಸಿದ ಬೆಂಗಳೂರಿನ ಕ್ಷೇಮವನ ಪ್ರಕೃತಿ ಚಿಕಿತ್ಸಾ ಕೇಂದ್ರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರದ್ಧಾ ಅಮಿತ್ ಮಾತನಾಡಿ, ಹೆಣ್ಣು ಮಕ್ಕಳು ಸೋಲಿಗೆ ಯಾವುದೇ ಕಾರಣಕ್ಕೂ ಹೆದರಬಾರದು. ಸೋಲು ಬದುಕಿನ ಪಾಠ ಕಲಿಸುತ್ತದೆ ಎಂದರು.

ಟ್ರಸ್ಟಿನ ಜ್ಞಾನವಿಕಾಸ ಯೋಜನೆಯಿಂದ ಮಹಿಳೆಯರ ವ್ಯಕ್ತಿತ್ವ ವಿಕಸನವಾಗುತ್ತದೆ ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಒತ್ತು ನೀಡುವುದನ್ನು ಕಲಿಸುತ್ತದೆ ಎಂದು ಅವರು ಹೇಳಿದರು.

ಮಹಿಳೆಯರಿಗೆ ಜ್ಞಾನ, ತಾಕತ್ತು, ಆರ್ಥಿಕಶಕ್ತಿ, ಕೌಶಲಬೇಕು. ಜೊತೆಗೆ ಗುರಿಯನ್ನು ಹೊಂದಿ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.

ಖಾಲಿ ಚೆಕ್‌ಗೆ ಸಹಿ ಬೇಡ: ಅಧ್ಯಕ್ಷತೆ ವಹಿಸಿದ್ದ ವಕೀಲೆ ಎಚ್.ಎಸ್. ಯಶೋಧಾ ಮಾತನಾಡಿ, ಯಾವುದೇ ಕಾರಣಕ್ಕೂ ಖಾಲಿ ಚೆಕ್ಕುಗಳಿಗೆ ಸಹಿ ಹಾಕಬೇಡಿ. ಇದರಿಂದ ಮೋಸ ಆಗುತ್ತದೆ. ಅದೇ ರೀತಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಎಚ್ಚರ ವಹಿಸಿ, ಸರಿ– ತಪ್ಪುಗಳ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ಮೂಡಿಸಿ ಎಂದರು.

ಸಂವಹನ ಕೌಶಲ್ಯ ಮುಖ್ಯ: ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಕುರಿತು ಮೈವಿವಿ ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಎಚ್.ಪಿ. ಜ್ಯೋತಿ ಮಾತನಾಡಿ, ಮಹಿಳೆಯರಿಗೆ ಸಂವಹನ ಕೌಶಲ ಮುಖ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪ್ರತಿಯೊಬ್ಬರ ಬದುಕಿನಲ್ಲೂ ಬದಲಾವಣೆ ಆಗಿದೆ ಎಂದರು.

ಬಿ.ಸಿ.ಟ್ರಸ್ಟಿನ ಪ್ರಾದೇಶಿಕ ನಿರ್ದೇಶಕ ಜಯರಾಮ್ ನೆಲ್ಲಿತ್ತಾಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ, ಕ್ಷೇತ್ರ ಯೋಜನಾಧಿಕಾರಿ ಪಿ. ಶಶಿರೇಖಾ ಮೊದಲಾದವರು ಉಪಸ್ಥಿತರಿದ್ದರು.

ರೈಲಿಗೆ ಸಿಲುಕಿ ಇಬ್ಬರು ಅಪರಿಚಿತರ ಸಾವು

ಮೈಸೂರು,ಜ.20– ಜ.18 ರಂದು ಪಾಂಡವಪುರ ರೈಲು ನಿಲ್ದಾಣಗಳ ನಡುವೆ ಸುಮಾರು 50 ವರ್ಷದ ಅಪರಿಚಿತ ವ್ಯಕ್ತಿ ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿದ್ದು, ಮೃತ ದೇಹವು ಮಂಡ್ಯ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜ.19 ರಂದು ಪಾಂಡವಪುರ–ನಾಗನಹಳ್ಳಿ ರೈಲು ನಿಲ್ದಾಣಗಳ ನಡುವೆ ರೈಲ್ವೆ ಸುಮಾರು 65 ವರ್ಷದ ಅಪರಿಚಿತ ವ್ಯಕ್ತಿ ರೈಲು ಗಾಡಿಗೆ ಸಿಕ್ಕಿ ಮೃತಪಟ್ಟಿದ್ದು, ಮೃತ ದೇಹವು ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರದಲ್ಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತರ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ: 0821–2516579 ನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೈಲಿನ ಬೇಕರಿ ಘಟಕಕ್ಕೆ ಸಿಸಿ ಕ್ಯಾಮರಾ ಅಳವಡಿಸಿ

ಕಾರಾಗೃಹ ಅಧಿಕಾರಿಗಳಿಗೆ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ. ಶ್ಯಾಂ ಭಟ್ ತಾಕೀತು



ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ. ಶ್ಯಾಂ ಭಟ್, ಸದಸ್ಯ ಎಸ್.ಕೆ. ಒಂಟಿಗೋಡಿ ಸೋಮವಾರ ಮೈಸೂರು ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು, ಜ. 20(ಆರ್‌ಕೆ)– ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಮೂವರು ಖೈದಿಗಳು ದುರಂತ ರೀತಿ ಸಾವನ್ನಪ್ಪಿದ ಪ್ರಕರಣದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ. ಶ್ಯಾಂ ಭಟ್, ಸದಸ್ಯ ಎಸ್.ಕೆ. ಒಂಟಿಗೋಡಿ ಇಂದು ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೆಳಗ್ಗೆ 10.15 ಗಂಟೆ ವೇಳೆಗೆ ಜೈಲಿಗೆ ಆಗಮಿಸಿದ ಅವರನ್ನು ಮುಖ್ಯ ಜೈಲು ಅಧೀಕ್ಷಕ ರಮೇಶ್ ಬರಮಾಡಿಕೊಂಡು ಜೈಲು ವಾಸಿಗಳಿಗೆ ಒದಗಿಸಿರುವ ಮೂಲ ಸೌಲಭ್ಯ, ಭದ್ರತಾ ವ್ಯವಸ್ಥೆ, ನೀಡುತ್ತಿರುವ ತರಬೇತಿ, ಇತರ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಇತ್ತೀಚೆಗೆ ಬೇಕರಿ ಉತ್ಪನ್ನ ತಯಾರಿಕಾ ಘಟಕದಲ್ಲಿ ಕೇಕ್ ಸಿದ್ಧಪಡಿಸಲು ಬಳಸುತ್ತಿದ್ದ ಎಸೆನ್ಸ್ ರಾಸಾಯನಿಕ ಸೇವಿಸಿ ಮೂವರು ಖೈದಿಗಳು ಸಾವನ್ನಪ್ಪಿದ ಘಟನೆ ಕುರಿತು ಮಾಹಿತಿ ಪಡೆದುಕೊಂಡ ಶ್ಯಾಂ ಭಟ್, ಘಟಕದ ಬಳಿ ಸಿಸಿ ಕ್ಯಾಮರಾ ಅಳವಡಿಸಿ ಒಬ್ಬ ಇನ್‌ಸ್ಪೆಕ್ಟರ್ ಅನ್ನು ಬೇಕರಿ ಉತ್ಪನ್ನ ತಯಾರಿಸುವ ಸಮಯ ತಪ್ಪದೇ ಮೇಲ್ವಿಚಾರಣೆಗೆ ನೇಮಿಸುವಂತೆ ಮುಖ್ಯ ಅಧೀಕ್ಷಕ ರಮೇಶ್ ಅವರಿಗೆ ನಿರ್ದೇಶನ ನೀಡಿದರು.

ರಾಸಾಯನಿಕಯುಕ್ತ ಎಸೆನ್ಸ್ ಶೇಖರಣೆ, ಬಳಕೆ ಹಾಗೂ ವಿಲೇವಾರಿಗೆ ನಿಗದಿತ ನಿಯಮಾವಳಿಯನ್ನು ಪಾಲಿಸುವ ಬಗ್ಗೆ ತರಬೇತಿ, ತಿಳುವಳಿಕೆ ನೀಡುವ ಮೂಲಕ ಯಾವುದೇ ಅಪಾಯ ಸಂಭವಿಸದಂತೆ ಕ್ರಮ ವಹಿಸುವಂತೆಯೂ ಆಯೋಗದ ಅಧ್ಯಕ್ಷರು ತಾಕೀತು ಮಾಡಿದರು.

ದೈಹಿಕ, ಮಾನಸಿಕ ಆರೋಗ್ಯದ ಜೊತೆಗೆ ಸಾಮಾಜಿಕ ಆರೋಗ್ಯವೂ ಮುಖ್ಯ

● ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಚಾಂಪಿಯನ್‌ಶಿಪ್ ಸಂಪನ್ನ ● ಐವರು ಸಾಧಕರಿಗೆ ಚೈತನ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಂಎಲ್ಸಿ ಡಾ.ಡಿ. ತಿಮ್ಮಯ್ಯ ಅಭಿಮತ



ಆರ್. ರವಿರಾಜ್,. ಡಾ.ಸಿ. ಶರತ್‌ಕುಮಾರ್, ವಿ, ಶೇಷಾದ್ರಿ, ಎಂ.ಎಸ್. ರಮೇಶ್‌ಕುಮಾರ್, ಬಿ. ಶಾಂತರಾಮ್ ಅವರಿಗೆ ಚೈತನ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಎಚ್.ಎಂ. ಮಂಜುನಾಥ್, ಟಿ. ಜಲೇಂದ್ರಕುಮಾರ್, ಅಂಶಿ ಪ್ರಸನ್ನ ಕುಮಾರ್, ಎಂ.ಆರ್. ಸತ್ಯನಾರಾಯಣ, ಡಾ. ಶಶಿರೇಖಾ, ಎಂ.ಎಸ್. ಶಿವಪ್ರಕಾಶ್, ಡಾ.ಬಿ.ಪಿ. ಮೂರ್ತಿ, ಎನ್. ಅನಂತ, ಯೋಗ ಕುಮಾರ್ ಉಪಸ್ಥಿತರಿದ್ದಾರೆ.

ಮೈಸೂರು, ಜ.20–ದೈಹಿಕ, ಮಾನಸಿಕ ಆರೋಗ್ಯದ ಜೊತೆಗೆ ಸಾಮಾಜಿಕ ಆರೋಗ್ಯವೂ ಮುಖ್ಯ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಹೇಳಿದರು.

ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ತನ್ನ 25ನೇ ವಾರ್ಷಿಕೋತ್ಸವ ಅಂಗವಾಗಿ ನಗರದ ಜಗನ್ಮೋಹನ ಅರಮನೆಯಲ್ಲಿ ಭಾನುವಾರ ಏರ್ಪಡಿಸಿದ್ದ ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಚಾಂಪಿಯನ್‌ಶಿಪ್ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಆರೋಗ್ಯ ಕಾಪಾಡಿಕೊಳ್ಳಲು ಪ್ರತಿಯೊಂದು ಅಂಗಾಂಗವೂ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಯೋಗದಿಂದ ಎಲ್ಲಾ ಅಂಗಾಂಗಗಳಿಗೂ ಕಸರತ್ತು ಆಗುತ್ತದೆ. ಯೋಗಗಳಲ್ಲಿ ಅಷ್ಟಾಂಗ ಯೋಗ ಮುಖ್ಯ ಎಂದರು. ಆರೋಗ್ಯಕ್ಕೆ ದೈಹಿಕ ಕಸರತ್ತು ವಾಯುವಿಹಾರದ ಜೊತೆಗೆ ಆಹಾರ ಕೂಡ ಮುಖ್ಯವಾಗುತ್ತದೆ ಎಂದರು.

ಮೈಸೂರು ಯೋಗನಗರಿಯಾಗಿ ಹೆಸರು ಮಾಡಿದೆ. ಇದಕ್ಕೆ ಕಾರಣರಾದ ಬಿಕೆಎಸ್ ಅಯ್ಯಂಗಾರ್, ಕೃಷ್ಣಮಾಚಾರ್ಯರನ್ನು ಸದಾ ಸ್ಮರಿಸಬೇಕು ಎಂದು ಅವರು ಹೇಳಿದರು.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿವೃತ್ತ ಸದಸ್ಯ ಎಚ್.ಎಂ. ಮಂಜುನಾಥ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಬಿ. ಲಕ್ಷ್ಮೀನಾರಾಯಣ ಶೆಣೈ, ಸರ್ಕಾರಿ ಆಯುರ್ವೇದ ಆಸ್ಪತ್ರೆ ಸ್ಥಾಯಿ ವೈದ್ಯಾಧಿಕಾರಿ ಡಾ.ಶಶಿರೇಖಾ, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನ ಕುಮಾರ್, ಎಂ.ಆರ್. ಸತ್ಯನಾರಾಯಣ, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಎಂ.ಎಸ್. ಶಿವಪ್ರಕಾಶ್, ಪ್ರಧಾನ ಕಾರ್ಯದರ್ಶಿ ಯೋಗ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು.

ಚೈತನ್ಯ ಯೋಗ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಡಾ.ಬಿ.ಪಿ. ಮೂರ್ತಿ ಸ್ವಾಗತಿಸಿದರು. ಮೈಸೂರು ಯೋಗ ಅಸೋಸಿಯೇಷನ್ ಕಾರ್ಯದರ್ಶಿ ಎನ್. ಅನಂತ ಮೊದಲಾದವರು ಇದ್ದರು.

ಪ್ರಶಸ್ತಿ ಪ್ರದಾನ : ಇದೇ ಸಮಾರಂಭದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಯೋಗ ಮಂದಿರ ಟ್ರಸ್ಟ್‌ಸಂಸ್ಥಾಪಕ ಬಿ. ಶಾಂತಾರಾಂ, ಮೈಸೂರು ಅಕಾಡೆಮಿ ಆಫ್ ಯೋಗ ಸಂಸ್ಥಾಪಕ ಎಂ.ಎಸ್. ರಮೇಶ್ ಕುಮಾರ್ ಅವರಿಗೆ ಯೋಗ ಚೈತನ್ಯ, ಮೆಡಿವೇವ್ ಗರ್ಭಧಾರಣಾ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಸಿ. ಶರತ್ ಕುಮಾರ್ ಅವರಿಗೆ ವೈದ್ಯ ಚೈತನ್ಯ, ಚಿತ್ರ ಕಲಾವಿದ ಆರ್. ರವಿರಾಜ್‌ಅವರಿಗೆ ಚಿತ್ರಕಲಾ ಚೈತನ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮ : ಸಿಂಧು ಕಿರಣ್ – ಒಡಿಸ್ಸಿ ನೃತ್ಯ, ಕೆ.ವಿ. ಮಹಾಬಲ– ಸಿತಾರ್ ವಾದನ, ವಿಜಯಲಕ್ಷ್ಮಿ ಮತ್ತು ತಂಡ– ಜನಪದ ನೃತ್ಯ ನಡೆಸಿಕೊಟ್ಟರು.

ಅಂಚೆ ಇಲಾಖೆಯ ಏಜೆಂಟ್ ನೇಮಕಾತಿಗಾಗಿ ಸಂದರ್ಶನ

ಮೈಸೂರು, ಜ.20– ಅಂಚೆ ಜೀವ ವಿಮೆ, ಗ್ರಾಮೀಣ ಅಂಚೆ ಜೀವ ವಿಮೆ ಮಾರಾಟಕ್ಕೆ ತೊಡಗಿಸಿಕೊಳ್ಳುವ ಏಜೆಂಟ್‌ಗಳಿಗಾಗಿ ವಾಕ್–ಇನ್–ಇಂಟರ್ ವ್ಯೂ O/o SPOs ನ್ನು ಕರೆಯಲಾಗಿದ್ದು, ಜ.23 ರಂದು ಬೆಳಗ್ಗೆ 11 ಗಂಟೆಗೆ ನಂಜನಗೂಡಿನಲ್ಲಿ ನಡೆಯಲಿದೆ.

ವಿದ್ಯಾರ್ಹತೆ 10ನೇ ತರಗತಿ ಉತೀರ್ಣವಾಗಿರಬೇಕು, ಹಾಗೂ 18 ವರ್ಷ ಮೇಲ್ಪಟ್ಟಿರಬೇಕು. ಹೆಚ್ಚಿನ ಮಾಹಿತಿಗಾಗಿ 08221 226291, 9980702143, 9448291050 ನ್ನು ಸಂಪರ್ಕಿಸಬಹುದು ಎಂದು ನಂಜನಗೂಡು ವಿಭಾಗ, ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.20– ಹೆಚ್.ಡಿ.ಕೋಟೆ ಉಪ ವಿಭಾಗ ವ್ಯಾಪ್ತಿಯ ನಿರ್ವಹಣಾ ಕಾಮಗಾರಿ ನಿಮಿತ್ತ ಜ.21 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾರಾಪುರ, ಕೆ.ಬೆಳ್ತೂರು, ಮನು ಗನಹಳ್ಳಿ, ಬಾಚೇಗೌಡನಹಳ್ಳಿ ಪಂಚಾಯತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಹುರೂಪಿ ನಾಟಕೋತ್ಸವ ಯಶಸ್ವಿ; ಲಕ್ಷ ಮಂದಿ ಪಾಲ್ಗೊಂಡು ದಾಖಲೆ

● ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾಹಿತಿ ● ಪ್ರದರ್ಶಿತ 22 ನಾಟಕಗಳಿಗೂ ಉತ್ತಮ ಪ್ರತಿಕ್ರಿಯೆ ● 2.75 ಲಕ್ಷದವರೆಗೆ ಆದಾಯ ಸಂಗ್ರಹ

ಮೈಸೂರು, ಜ.20(ಎಂಟಿವೈ)– ಮೈಸೂರಿನ ರಂಗಾಯಣದಲ್ಲಿ ಜ.14ರಿಂದ 19ರವರೆಗೆ 'ಬಿಡುಗಡೆ' ಆಶಯದೊಂದಿಗೆ ನಡೆದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಅಭೂತಪೂರ್ವ ಯಶಸ್ಸು ಕಂಡಿದ್ದು, ಒಂದು ಲಕ್ಷ ಪ್ರೇಕ್ಷಕರು ಈ ನಾಟಕೋತ್ಸವದಲ್ಲಿ ಪಾಲ್ಗೊಂಡಿದ್ದಾರೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದರು.

ರಂಗಾಯಣದ ಆವರಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಬಹುರೂಪಿ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ. ನಾಟಕೋತ್ಸವದಲ್ಲಿ ಪ್ರಸ್ತುತಪಡಿಸಿದ ಎಲ್ಲಾ ನಾಟಕಗಳನ್ನು ರಂಗಾಸಕ್ತರು ವೀಕ್ಷಿಸಿ ಸಂಭ್ರಮಿಸಿದ್ದಾರೆ. ಜನಪದ ಉತ್ಸವ, ಚಲನಚಿತ್ರೋತ್ಸವ, ಕರಕುಶಲ ವಸ್ತುಪ್ರದರ್ಶನ ಸೇರಿದಂತೆ ಎಲ್ಲಾ ಚಟುವಟಿಕೆಗಳಲ್ಲೂ ನಿರೀಕ್ಷೆಗೂ ಮೀರಿದ ಜನ ಸೇರಿದ್ದರು. ಪ್ರತಿದಿನ ಸಾವಿರಾರು ಮಂದಿ ಬಹುರೂಪಿಗೆ ಭೇಟಿ ನೀಡಿ, ಸಂಭ್ರಮಿಸಿದ್ದಾರೆ ಎಂದರು.



ಮೈಸೂರಿನ ರಂಗಾಯಣದ ರಂಗಚಾವಡಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿದರು.

1 ಲಕ್ಷ ಮಂದಿ ಭೇಟಿ: ಬಹುರೂಪಿ ನಾಟಕೋತ್ಸವದ ಎಲ್ಲಾ ಕಾರ್ಯಕ್ರಮವನ್ನು ಜನ ಮೆಚ್ಚಿದ್ದಾರೆ. ಬೀದಿ ನಾಟಕದ ಐದು ತಂಡ ಒಳಗೊಂಡಂತೆ ವಿವಿಧ ವೇದಿಕೆಯಲ್ಲಿ ಪ್ರದರ್ಶನಗೊಂಡ ನಾಟಕ ಹಾಗೂ ಜನಪದ ಕಲೆಗಳಿಂದ ಸುಮಾರು 1200ಕ್ಕೂ ಅಧಿಕ ಕಲಾವಿದರು ವಿವಿಧ ಪ್ರದರ್ಶನ ನೀಡಿದ್ದಾರೆ. ರಾಷ್ಟ್ರೀಯ ವಿಚಾರ ಸಂಕಿರಣವೂ ಜನರ ಗಮನ ಸೆಳೆದಿವೆ. ಈ ಮೂಲಕ ಬಹುರೂಪಿ ಆಶಯವಾದ ಬಿಡುಗಡೆಯ ಹುಡುಕಾಟ ಮಾಡಲಾಗಿದೆ. 6 ದಿನ ವಿವಿಧ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳು ಬಹುರೂಪಿಯಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಬಹುರೂಪಿಯಿಂದ 2.50–2.75 ಲಕ್ಷ ರೂ. ಆದಾಯ: ಈ ಬಾರಿಯ ಬಹುರೂಪಿ ನಾಟಕೋತ್ಸವದಲ್ಲಿ ತೆಲಂಗಾಣ, ಮುಂಬೈ, ಪಾಂಡಿಚೇರಿ, ಮಧ್ಯಪ್ರದೇಶ, ಕೇರಳ, ಅಸ್ಸಾಂ ರಾಜ್ಯಗಳು ಹಾಗೂ ಕನ್ನಡ ನಾಟಕಗಳು ಸೇರಿದಂತೆ ಒಟ್ಟು 22 ನಾಟಕಗಳಿಗೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೊದಲ ನಾಲ್ಕು ದಿನದ ಪ್ರದರ್ಶನಗಳು ಶೇ.80–90 ರಷ್ಟು ಭರ್ತಿಯಾಗಿದ್ದವು. ಕಡೆಯ ಎರಡು ದಿನ ಎಲ್ಲಾ ನಾಟಕಗಳು ಹೌಸ್‌ಫುಲ್. ಒಟ್ಟಾರೆ 7 ರಿಂದ 8 ಸಾವಿರ ಜನ ನಾಟಕ ವೀಕ್ಷಣೆ ಮಾಡಿದ್ದು, ಅಂದಾಜು 2.5ರಿಂದ 2.75 ಲಕ್ಷ ರೂ ಆದಾಯ ಸಂಗ್ರಹವಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಹಿರಿಯ ಕಲಾವಿದೆ ನಂದಿನಿ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವನಂಗಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಛೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಛೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರ್ಕೋ (ಹಿ)	4 ಪ್ರದರ್ಶನಗಳು
ಪ್ರಭಾ	
ಮದಗಜ ರಾಜ (ತ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಜ್ಯದಲ್ಲಿ ಹೆಚ್ಚಿದ ಗೋ ಹಿಂಸೆ–ಗೋ ಹತ್ಯೆ ಪ್ರಕರಣ: ತನಿಖೆಗೆ ರಾಜ್ಯ ಸರ್ಕಾರ ಆದೇಶ




ಬೆಂಗಳೂರು: ರಾಜ್ಯದಲ್ಲಿ ಗೋ ಹಿಂಸೆ ಹಾಗೂ ಗೋ ಹತ್ಯೆ ಪ್ರಕರಣಗಳು ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ ತನಿಖೆಗೆ ಆದೇಶಿಸಿದೆ.

ಚಾಮರಾಜಪೇಟೆ ಹಸು ಕೆಚ್ಚಲು ಕೊಯ್ದ ಘಟನೆ ಬೆನ್ನಲ್ಲೇ ಹೊನ್ನಾವರದಲ್ಲಿ ಹಸು ಕೊಂದಿರುವ ಘಟನೆ ವರದಿಯಾಗಿದ್ದು, ಎಲ್ಲೆಡೆ ತೀವ್ರ ವಿರೋಧ ಹಾಗೂ ಟೀಕೆಗಳು ವ್ಯಕ್ತವಾಗುತ್ತಿವೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ರಾಜ್ಯದಲ್ಲಿ ನಡೆಯುತ್ತಿರುವ ಗೋ ಹತ್ಯೆ ಹಾಗೂ ಗೋ ಹಿಂಸೆ ಪ್ರಕರಣಗಳಿಗೆ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ. ಈ ಘಟನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುವಂತೆ ಪೊಲೀಸರಿಗೆ ಮತ್ತೊಮ್ಮೆ ಸೂಚನೆ ನೀಡಿದ್ದೇನೆಂದು ಹೇಳಿದ್ದಾರೆ.


ಈ ರೀತಿಯ ಮನಸ್ಥಿತಿ ಇರುವವರನ್ನು ಮೊದಲು ಗುರುತಿಸಬೇಕು. ಕೃತ್ಯದ ಹಿಂದೆ ಬೇರೆ ಯಾರದ್ದಾದರೂ ಪ್ರಚೋದನೆ ಇದೆಯೇ ಅಥವಾ ವೈಯಕ್ತಿಕವಾಗಿ ಕೃತ್ಯ ಎಸಗುತ್ತಿದ್ದಾರೆಯೇ ಅಥವಾ ಸಂಘಟನೆಗಳಿವೆಯೇ ಎಂಬೆಲ್ಲಾ ವಿಚಾರಗಳನ್ನು ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆಂದು ತಿಳಿಸಿದ್ದಾರೆ.

ಸೆಂಟ್ರಲ್ ಜೈಲು ವಿಭಜನೆ: ಇದೇ ವೇಳೆ ಸೆಂಟ್ರಲ್ ಜೈಲು ವಿಭಜನೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹವನ್ನು ವಿಭಾಗಿಸುವ ಯಾವುದೇ ಪ್ರಸ್ತಾವನೆಗಳು ಸದ್ಯಕ್ಕೆ ಸರ್ಕಾರದ ಮುಂದಿಲ್ಲ. ಆದರೆ, ರಾಜ್ಯದ ಎಲ್ಲಾ ಜೈಲುಗಳಲ್ಲಿ ನಡೆಯುತ್ತಿರುವ ನಿಯಮ ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಲು ಕಠಿಣ ಕ್ರಮ ಜರುಗಿಸಲಾಗುವುದು. ಬಹಳ ವರ್ಷಗಳಿಂದಲೂ ಬಂಧೀಖಾನೆ ಇಲಾಖೆಗೆ ನೇಮಕಾತಿಗಳು ನಡೆದಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಸಿಬ್ಬಂದಿಗಳ ನೇಮಕಾತಿಗೆ ಅಗತ್ಯ ಪ್ರಸ್ತಾವನೆ ಸಲ್ಲಿಸಲಾಗಿದೆ. ನೇಮಕಾತಿ ಬಳಿಕ ವ್ಯವಸ್ಥೆ ಸುಧಾರಣೆಯಾಗಲಿದೆ ಎಂದು ತಿಳಿಸಿದ್ದಾರೆ.

ದರೋಡೆ ಪ್ರಕರಣ: ಬೀದರ್ ಎಟಿಎಂ ದರೋಡೆ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ಬೀದರ್‌ನಲ್ಲಿ ಎಟಿಎಂ ವಾಹನದ ಮೇಲೆ ದಾಳಿ ನಡೆಸಿ ಒಬ್ಬರನ್ನು ಹತ್ಯೆಗೈದು, ಮತ್ತೊಬ್ಬರನ್ನು ಗಾಯಗೊಳಿಸಿ 83 ಲಕ್ಷ ದರೋಡೆ ಮಾಡಿದ ಪ್ರಕರಣದಲ್ಲಿ ಮಾಹಿತಿಗಳನ್ನು ಕಲೆಹಾಕಲಾಗಿದೆ. ಶೀಘ್ರವಾಗಿ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಹೇಳಿದ್ದಾರೆ.

ಮೈಕ್ರೋ ಫೈನಾನ್ಸ್ ಹಾವಳಿ: ಮೈಕ್ರೋ ಫೈನಾನ್ಸ್ ದಬ್ಬಾಳಿಕೆಗೆ ಕಡಿವಾಣ ಹಾಕಲು ಕಾನೂನು ತರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಕಿರು ಸಾಲ ನೀಡಿ ಅದರ ವಸೂಲಿಗೆ ಕಿರುಕುಳ ನೀಡುತ್ತಿರುವವರಿಗೆ ಕಡಿವಾಣ ಹಾಕಲು ಪ್ರತ್ಯೇಕ ಕಾಯ್ದೆ ತರುವುದು ಹಣಕಾಸು ಇಲಾಖೆಯ ಜವಾಬ್ದಾರಿ. ದೂರುಗಳು ಬಂದರೆ ಕ್ರಮ ಕೈಗೊಳ್ಳುವುದಷ್ಟೇ ಪೊಲೀಸ್ ಇಲಾಖೆಯ ಕೆಲಸ ಎಂದು ಪ್ರತಿಕ್ರಿಯಿಸಿದ್ದಾರೆ.

ಆಕ್ಟರ್ ಡಾಲಿ ಧನಂಜಯ–ಡಾಕ್ಟರ್ ಧನ್ಯತ ವಿವಾಹದ ವಿಶೇಷ ಆಮಂತ್ರಣ ಪತ್ರಿಕೆ!




ಡಾಲಿ ಧನಂಜಯ – ಧನ್ಯತ

ಮೈಸೂರು, ಜ.20(ಎಸ್‌ಬಿಡಿ)– ಮೈಸೂರಲ್ಲಿ ಮುಂದಿನ ಫೆಬ್ರವರಿಯಲ್ಲಿ ನೆರವೇರಲಿರುವ **'ಆಕ್ಟರ್–ಡಾಕ್ಟರ್'** ಮದುವೆ'ಗೆ ತಯಾರಿ ಜೋರಾಗಿದೆ. ಹಸೆಮಣೆ ಏರುವ ಜೋಡಿ, ಗುರು–ಹಿರಿಯರು, ಸ್ನೇಹಿತರು, ನೆಂಟರಿಷ್ಟರನ್ನು ವಿಶೇಷ ಆಮಂತ್ರಣದೊಂದಿಗೆ ವಿಶೇಷವಾಗಿ ಸ್ವಾಗತಿಸುತ್ತಿದೆ.

ಹೌದು, ಇದು ನೀವೆಣಿಸಿದಂತೆಯೇ ಪ್ರತಿಭಾವಂತ ನಟನೆಂದೇ ಪರಿಗಣಿತ **ಡಾಲಿ ಧನಂಜಯ** ವಿವಾಹ ಸಡಗರದ ಸಂಗತಿ. ಹಾಸನ ಮೂಲದ ಮೈಸೂರು ಹುಡುಗ ಧನಂಜಯ, ರಂಗಭೂಮಿ ಮೂಲಕ ಸಿನಿಮಾ ರಂಗಕ್ಕೆ ಅಡಿ ಇಟ್ಟವರು. ವಿಭಿನ್ನ ಪಾತ್ರಗಳ ಮೂಲಕ ಚಿತ್ರರಂಗದಲ್ಲಿ ಮಿಂಚುತ್ತಿರುವ 'ಬಡೂರ್ ಮಕ್ಳು ಬೆಳೀಬೇಕ್ ಕಣ್ರಯ್ಯ' ಸ್ಲೋಗನ್ ಖ್ಯಾತಿಯ ಡಾಲಿ, ತಮ್ಮ ಮದುವೆಯ ಮಮತೆಯ ಕರೆಯೋಲೆಯನ್ನೂ ವಿಶೇಷವಾಗಿ ಮಾಡಿಸಿ, ಎಲ್ಲರ ಗಮನ ಸೆಳೆದಿದ್ದಾರೆ. ಸದ್ಯ ಅಪರೂಪವಾಗಿರುವ ಇನ್‌ಲ್ಯಾಂಡ್ ಲೆಟರ್ ಮಾದರಿ ಪತ್ರಿಕೆಯಲ್ಲಿ ಕೈಬರಹದ ಆಹ್ವಾನವನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮುದ್ರಿಸಿರುವುದು ಆಕರ್ಷಕವಾಗಿದೆ. ಆದರೆ ಅಂಚೆ ಮೂಲಕ ಕಳುಹಿಸದೆ ನೇರವಾಗಿ ನೀಡಿ, ಆತ್ಮೀಯವಾಗಿ ಪ್ರೀತಿಯಿಂದ ಮದುವೆಗೆ ಆಹ್ವಾನಿಸುತ್ತಿದ್ದಾರೆ.

ಮೈಸೂರಿನ ವಸ್ತು ಪ್ರದರ್ಶನ ಆವರಣದಲ್ಲಿ ಫೆಬ್ರವರಿ 15 ಮತ್ತು 16 ರಂದು ಡಾಲಿ ಧನಂಜಯ ಹಾಗೂ ಡಾ.ಧನ್ಯತಾ ವಿವಾಹ ಮಹೋತ್ಸವ ನಿಗಧಿಯಾಗಿದೆ. ಫೆ.15ರ ಸಂಜೆ 6ಕ್ಕೆ ಆರತಕ್ಷತೆ ಇದ್ದು, ಫೆ.16ರಂದು ಬೆಳಗ್ಗೆ 8.20ರಿಂದ 10 ಗಂಟೆವರೆಗಿನ ಮೀನ ಲಗ್ನದಲ್ಲಿ ಇವರಿಬ್ಬರೂ ಸತಿ–ಪತಿ ಆಗಲಿದ್ದಾರೆ. ಇನ್‌ಲ್ಯಾಂಡ್ ಲೆಟರ್ ಮಾದರಿಯ ಧನಂಜಯ–ಧನ್ಯತ ಮದುವೆ ಕರೆಯೋಲೆಯಲ್ಲಿರುವ ವಿಶೇಷ ರೀತಿಯ ಒಕ್ಕಣೆ ಹೀಗಿದೆ;

> **ಪ್ರೀತಿಯ ಬಂಧು ಮಿತ್ರರೇ,**
>
> ನಿಮ್ಮ ಪ್ರೀತಿಯ ಧನಂಜಯ ಹಾಗೂ ಧನ್ಯತ ಮಾಡುವ ನಮಸ್ಕಾರಗಳು. ನಾವು ಖುಷಿಯಾಗಿದ್ದೇವೆ. ನಮ್ಮೀ ವಿಷಯ ತಿಳಿದು ನೀವು ಸಂಭ್ರಮಿಸಿದ್ದು ನಮ್ಮ ಖುಷಿಯನ್ನು ಇಮ್ಮಡಿಗೊಳಿಸಿದೆ. ನಮ್ಮ ಮದುವೆ ಸಂಭ್ರಮವನ್ನು ನಿಮ್ಮೆಲ್ಲರ ಜೊತೆಗೂಡಿ ಆಚರಿಸಬೇಕು ಎಂಬ ಮಹದಾಸೆಯಿಂದ ಈ ಪತ್ರ ಬರೆಯುತ್ತಿದ್ದೇನೆ. ತಾವು ಎಲ್ಲಿದ್ದರೂ, ಜಗದ ಯಾವ ಮೂಲೆಯಲ್ಲಿದ್ದರೂ, ಕುಟುಂಬ ಸಮೇತರಾಗಿ ಬಂದು ನಮ್ಮ ಸಮಾಗಮಕ್ಕೆ ಆಶೀರ್ವಾದ ಮಾಡಬೇಕು. ಪ್ರೇಮದ ಭರವಸೆಯೇ ಬಾಳಿನ ಬೆಳಕು. ನಮ್ಮ ಪ್ರೀತಿ ದೀಪದ ಪ್ರಕಾಶಕ್ಕೆ ನೀವು ಸಾಕ್ಷಿಯಾಗಬೇಕು ಎಂಬುದು ನಮ್ಮ ಆಶಯ.
>
> ಮತ್ತೆಲ್ಲಾ ಕ್ಷೇಮವಷ್ಟೇ!
>
> **ನಿಮ್ಮನ್ನು ಸ್ವಾಗತಿಸುವ ನಿರೀಕ್ಷೆಯಲ್ಲಿ**
> **ಧನಂಜಯ–ಧನ್ಯತ**





'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ ಅವರಿಗೆ ಸೋಮವಾರ ಬನ್ನಿಮಂಟಪದ ಕಾರ್ಯಾಲಯದಲ್ಲಿ ನಟ ಡಾಲಿ ಧನಂಜಯ ತಮ್ಮ ಮದುವೆಯ ಆಮಂತ್ರಣ ಪತ್ರಿಕೆ ನೀಡಿ, ಆಹ್ವಾನಿಸಿದರು.

ದಿ. ಮೈಸೂರು ಕೋ–ಅಪರೇಟಿವ್ ಬ್ಯಾಂಕ್ (ನಿ.)

ಗಾಂಧಿಚೌಕ, ಮೈಸೂರು

2025-2030ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ

ದಿನಾಂಕ 19.1.2025 ರಂದು ನಡೆದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಚುನಾವಣೆಯಲ್ಲಿ ನನಗೆ ಮತ್ತು ನಮ್ಮ ತಂಡಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನನ್ನ ಪರವಾಗಿ ನಿಂತು ಚುನಾವಣೆಯಲ್ಲಿ ಸಹಕರಿಸಿದ ಮಾನ್ಯ ಮತದಾರ ಬಂಧುಗಳಿಗೆ ಹಾಗೂ ಹಿತೈಷಿಗಳಿಗೆ, ಸ್ನೇಹಿತರಿಗೆ ತುಂಬು ಹೃದಯದ ಧನ್ಯವಾದಗಳು



ಕೆ. ಉಮಾಶಂಕರ್
ಕೆಂಪೀರೇಗೌಡ
Mob: 9448222389

ಹಸಿರು ನಮ್ಮ ಉಸಿರು

ಜಮೀನು ಮಾರಾಟಕ್ಕಿದೆ

ಮೈಸೂರು ತಾ. ಜಯಪುರ ಹೋ. ಹತ್ತಿವಾಳು ಮುಖ್ಯರಸ್ತೆಯಲ್ಲಿ 9 ಗುಂಟೆ, ಹಾರೋಹಳ್ಳಿ ಮುಖ್ಯರಸ್ತೆಯಲ್ಲಿ 12 ಗುಂಟೆ, ಮಾದ್ದೂರಲ್ಲಿ 32 ಗುಂಟೆ ಮತ್ತು 25 ಗುಂಟೆ ದೂರ ಗ್ರಾಮದಲ್ಲಿ 19 ಗುಂಟೆ, 1 ಎಕರೆ 4 ಗುಂಟೆ ಮುಳ್ಳೂರಲ್ಲಿ 20 ಗುಂಟೆ, 3 ಎಕರೆ 7 ಗುಂಟೆ ಮೈಸೂರು ನಗರಕ್ಕೆ ತುಂಬ ಹತ್ತಿರ ಹಾಗೂ ಪೆರಿಫೆರಲ್ ರಿಂಗ್ ರಸ್ತೆ ಪಕ್ಕದಲ್ಲಿ ಮಾರಾಟಕ್ಕೆ ಇದೆ.

9945661696, 9742666049

ರಾಜ್ಯದ ವಿವಿಧೆಡೆ ಬ್ಯಾಂಕ್, ಎಟಿಎಂ ದರೋಡೆ ಪ್ರಕರಣ

ಮೈಸೂರಲ್ಲಿ ರಸ್ತೆಗಿಳಿದ ಪೊಲೀಸರು; ಎಚ್ಚರವಹಿಸಲು ಉದ್ಯಮಿಗಳು, ಸಾರ್ವಜನಿಕರಲ್ಲಿ ಜಾಗೃತಿ



ಅಶೋಕ ರಸ್ತೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಗಸ್ತು ನಡೆಸಲಾಯಿತು.



ನೆಹರು ವೃತ್ತದಲ್ಲಿ ವಾಹನ ತಪಾಸಣೆ ನಡೆಸುತ್ತಿರುವುದು.

ಮೈಸೂರು, ಜ.20(ಎಂಕೆ)– ಮಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಬ್ಯಾಂಕ್, ಎಟಿಎಂ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಮೈಸೂರು ನಗರದಾದ್ಯಂತ ನಾಕಾಬಂದಿ ಹಾಕಿ ಅನುಮಾನಾಸ್ಪದ ವಾಹನಗಳ ತಪಾಸಣೆ ಹಾಗೂ ಪ್ರಮುಖ ರಸ್ತೆಗಳಲ್ಲಿ ಗಸ್ತು ತಿರುಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಸೋಮವಾರ ಸಂಜೆ ನಗರದಾದ್ಯಂತ ನಾಕಾಬಂದಿ ಹಾಕಿ ಸಂಚಾರ ಹಾಗೂ ಕಾನೂನು ಸುವ್ಯವಸ್ಥೆ ಪೊಲೀಸರು ಅನುಮಾನಾಸ್ಪದ ವಾಹನಗಳ ತಪಾಸಣೆ ನಡೆಸಲಾಯಿತು. ಹಾಗೆಯೇ ಆಯಾ ಠಾಣಾ ವ್ಯಾಪ್ತಿಯಲ್ಲಿ ಗಸ್ತು ತಿರುಗಿ ಬ್ಯಾಂಕ್, ಎಟಿಎಂ, ಸಿಸಿ ಕ್ಯಾಮರಾಗಳ ಕಾರ್ಯನಿರ್ವಹಣೆ ಕುರಿತು ಪರಿಶೀಲನೆ ನಡೆಸಲಾಯಿತು.

ಕೆ.ಆರ್.ವೃತ್ತ, ನೆಹರು ವೃತ್ತ, ಹಾರ್ಡಿಂಜ್ ವೃತ್ತ, ಮೆಟ್ರೊಪೋಲ್ ವೃತ್ತ, ನಜರ್‌ಬಾದ್ ಪೊಲೀಸ್ ಠಾಣೆ ಎದುರು, ಅಶೋಕ ರಸ್ತೆ, ಧನ್ವಂತರಿ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಅನುಮಾನಾಸ್ಪದ ವಾಹನಗಳನ್ನು ತಡೆದು ತೀವ್ರ ತಪಾಸಣೆಗೆ ಒಳಪಡಿಸಲಾಯಿತು.

ಹಾಗೆಯೇ ಬ್ಯಾಂಕ್‌ಗಳು ಮತ್ತು ಜ್ಯುವೆಲರಿ ಮಳಿಗೆಗಳು ಹೆಚ್ಚಾಗಿರುವ ಅಶೋಕ ರಸ್ತೆ, ದೇವರಾಜ ಅರಸು ರಸ್ತೆ, ಕಾಳಿದಾಸ ರಸ್ತೆ ಸೇರಿದಂತೆ ಇನ್ನಿತರೆ ರಸ್ತೆಗಳಲ್ಲಿ ಗಸ್ತು ತಿರುಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಅಶೋಕ ರಸ್ತೆಯಲ್ಲಿ ಪಾದಚಾರಿಗಳು, ಜ್ಯುವೆಲರಿ ಮಳಿಗೆದಾರರನ್ನು ಮಾತನಾಡಿಸಿ, ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಹಾಗೂ ಅಹಿತಕರ ಘಟನೆ ನಡೆದರೆ ಕೂಡಲೇ ಮಾಹಿತಿ ನೀಡುವಂತೆ ಸೂಚಿಸಲಾಯಿತಲ್ಲದೆ ಎಚ್ಚರಿಕೆ ವಹಿಸುವಂತೆಯೂ ತಿಳಿಸಲಾಯಿತು.

ಪ್ರತಿದಿನ ತಪಾಸಣೆ, ಗಸ್ತು: ಮಂಗಳೂರು, ಬೀದರ್ ಸೇರಿದಂತೆ ರಾಜ್ಯದ ಹಲವೆಡೆ ನಡೆಯುತ್ತಿರುವ ಬ್ಯಾಂಕ್, ಎಟಿಎಂ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಮೈಸೂರು ನಗರದಾದ್ಯಂತ ವಾಹನಗಳ ತಪಾಸಣೆ ಹಾಗೂ ಬ್ಯಾಂಕ್, ಎಟಿಎಂ, ಜ್ಯುವೆಲರಿ ಶಾಪ್‌ಗಳಲ್ಲಿ ಭದ್ರತೆಗಾಗಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಅಶೋಕ ರಸ್ತೆ ಸೇರಿದಂತೆ ನಗರ ಪ್ರಮುಖ ರಸ್ತೆಗಳಲ್ಲಿ ಗಸ್ತು ನಡೆಸಿ, ಪ್ರತಿಕ್ರಿಯಿಸಿದ ಅವರು, ಜ್ಯುವೆಲರಿ ಶಾಪ್, ಬ್ಯಾಂಕ್‌ಗಳಲ್ಲಿ ಯಾವ ರೀತಿ ಸೆಕ್ಯೂರಿಟಿ ಸಿಸ್ಟಂ ಅಳವಡಿಸಿ ಕೊಂಡಿದ್ದಾರೆ ಎಂಬುದನ್ನು ಪರಿಶೀಲಿಸಲಾಯಿತು. ನಗರದಾದ್ಯಂತ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿ ಯಲ್ಲಿ ನಾಕಾಬಂದಿ ಹಾಕಿ ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ನಡೆಸಲಾಗುತ್ತಿದೆ. ಇನ್ನು ಮುಂದೆ ಪ್ರತಿನಿತ್ಯವೂ ವಾಹನಗಳ ತಪಾಸಣೆ ಹಾಗೂ ಪೊಲೀಸರ ಗಸ್ತು ಇರಲಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಪೊಲೀಸರು ಹೆಚ್ಚಾಗಿರುವಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಗಸ್ತಿನಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜು, ಎಸ್. ಜಾಹ್ನವಿ ಸೇರಿದಂತೆ ಎಸಿಪಿ ಹಾಗೂ ಆಯಾ ಠಾಣೆಯ ಇನ್ಸ್‌ಪೆಕ್ಟರ್‌ಗಳು ಭಾಗವಹಿಸಿದ್ದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನೂತನ ಅಧ್ಯಕ್ಷ ಎಂ.ನರಸಿಂಹಲುರಿಗೆ ಅಭಿನಂದನೆ



ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಚುನಾಯಿತರಾದ ಎಂ ನರಸಿಂಹಲು ಅವರನ್ನು ಮೈಸೂರಿನ ಪಾತಿ ಫೌಂಡೇಶನ್ ವತಿಯಿಂದ ಬೆಂಗಳೂರಿನ ಫಿಲಂ ಚೇಂಬರ್‌ನಲ್ಲಿ ಹೂಗುಚ್ಛ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಪಾತಿ ಫೌಂಡೇಶನ್ ಅಧ್ಯಕ್ಷರಾದ ಎಂ.ಡಿ.ಪಾರ್ಥಸಾರಥಿ, ಬಿಜೆಪಿ ಹಿರಿಯ ಮುಖಂಡರಾದ ಗೋಪಾಲ್‌ರಾವ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಹರೀಶ್‌ನಾಯ್ಡು, ಬಸವರಾಜ್, ಮಹಾದೇವ್, ಸಂತೋಷ್, ದೀಪಕ್ ಹಾಜರಿದ್ದರು

ಮಂಗಳೂರಿನ ಕೋಟೆಕಾರು ಬ್ಯಾಂಕ್ ದರೋಡೆ ಪ್ರಕರಣ: ಮೂವರು ಆರೋಪಿಗಳ ಬಂಧನ

ಮಂಗಳೂರು, ಜ.20– ಭಾರೀ ಸದ್ದು ಮಾಡಿದ್ದ ಉಲ್ಲಾಳದ ಕೋಟೆಕಾರು ಸಹಕಾರಿ ಬ್ಯಾಂಕ್ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಬ್ಯಾಂಕ್‌ನಲ್ಲಿ ಸುಮಾರು 10ರಿಂದ 12 ಕೋಟಿಯನ್ನು ದರೋಡೆ ಮಾಡಿದ ಬಳಿಕ ಆರೋಪಿಗಳು ತಿರುವನ್ವೇಲಿಗೆ ಪರಾರಿಯಾಗಿದ್ದರು. ಇದೀಗ ಮಂಗಳೂರು ಪೊಲೀಸರು ಕಾರ್ಯಚರಣೆ ನಡೆಸಿ ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಮಿಳುನಾಡಿನ ತಿರಿನೆಲ್ವೇನಿ ಮೂಲದ ಮುರುಗಂಡಿ ದೇವರ್, ಪ್ರಕಾಶ್‌ಅಲಿಯಾಸ್ ಜೋಶ್ವಾ, ಮಣಿವಣ್ಣನ್ ಬಂಧಿತರಾಗಿದ್ದು, ಇವರನ್ನು ತಮಿಳುನಾಡಿನ ವಿವಿಧ ಪ್ರದೇಶಗಳಲ್ಲಿ ಬಂಧಿಸಲಾಯಿತು ಎಂದು ಮಂಗಳೂರು ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ತಿಳಿಸಿದರು. ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ತಾಲೂಕು ಕೆ.ಸಿ.ರೋಡ್‌ನಲ್ಲಿರುವ ಕೋಟೆಕಾರು ಬ್ಯಾಂಕ್‌ನಲ್ಲಿ ಜ.17ರಂದು ದರೋಡೆ ಮಾಡಿದ್ದರು.

ತಮಿಳುನಾಡು ಮೂಲದವರಾದ ದರೋಡೆಕೋರರು ದರೋಡೆ ಮಾಡಲೆಂದೇ ಮಂಗಳೂರಿಗೆ ಬಂದಿದ್ದರು. ಮಹಾರಾಷ್ಟ್ರದ ಕಾರು ಬಳಸಿ ಬ್ಯಾಂಕ್ ದರೋಡೆ ಮಾಡಿದ ಬಳಿಕ ಕೇರಳ ಮೂಲಕ ತಮಿಳುನಾಡಿನ ತಿರುನೆಲ್ವೇಲಿಗೆ ಪರಾರಿಯಾಗಿದ್ದರು. ಬಂಧಿತರಿಂದ ಫಿಯಟ್ ಕಾರು, 2 ಗೋಣಿಚೀಲ, ತಲ್ವಾರ್, 2 ಪಿಸ್ತೂಲ್ ಜಪ್ತಿ ಮಾಡಿದ್ದೇವೆ ಎಂದರು.

ಮುಂಬೈಯಿಂದ ಮಾಹಿತಿ ಕಲೆ ಹಾಕಿ ತಮಿಳುನಾಡಿಗೆ ತೆರಳಿ ಆರೋಪಿಗಳನ್ನು ಬಂಧಿಸಿದ್ದೇವೆ. ಮುರುಗಂಡಿ ದೇವರ್ ಈ ಪ್ರಕರಣದ ಮುಖ್ಯ ಕಿಂಗ್‌ಪಿನ್ ಎಂದ ಅವರು, ದರೋಡೆಗೆ ಮಹಾರಾಷ್ಟ್ರ ಮೂಲದ ಫಿಯೆಟ್ ಕಾರ್ ಬಳಸಿದ್ದರು. ಗುಪ್ತಚರ ಇಲಾಖೆ ಈ ಪ್ರಕರಣ ಭೇದಿಸಲು ಸಹಾಯ ಮಾಡಿದೆ. ಸ್ಥಳೀಯರು ಈ ಪ್ರಕರಣದಲ್ಲಿ ಭಾಗಿಯಾಗಿರುವ ಶಂಕೆ ಇದೆ. ಸ್ಥಳೀಯರ ಬೆಂಬಲ ಇಲ್ಲದೇ ಈ ಕೃತ್ಯ ಮಾಡಲು ಸಾಧ್ಯವಿಲ್ಲ. ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತೇವೆ ಎಂದು ಮಾಹಿತಿ ನೀಡಿದರು.

2.5 BHK HOME INTERIORS @ ₹ 2.5 Lakh*

Home Space Mart

*T&C Apply

✆91089 23123

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರಾದ **ಅಂಜಲಿ** ರವರು ಈ ಷೆಡ್ಯೂಲ್ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯಲು ನಿರ್ಧರಿಸಿದ್ದು ಮಾರಾಟಗಾರರಾದ **ಶಿಲ್ಪಗೌಡ. ಎಸ್**, ರವರುಗಳಿಂದ ಕ್ರಯ ಪತ್ರವನ್ನು ಬರೆದುಕೊಡಲು ಒಪ್ಪಿರುತ್ತಾರೆ. ಈ ಸಂಬಂಧ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರುಗಳು ಇತರೆ ದಾಖಲಾತಿಗಳು ಕ್ಲೈಮ್‌ಗಳು ವ್ಯಾಜ್ಯಗಳು ಯಾವುದೇ ಹಕ್ಕು ಯಾರಿಗಾದರೂ ಇದ್ದರೇ ಸೂಕ್ತ ದಾಖಲಾತಿಗಳೊಂದಿಗೆ ಈ ಪ್ರಕಟಣೆ ಮಾಡಿದ 07 ದಿನದ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ತಿಳಿಯಪಡಿಸಲಾಗಿದೆ. ಈ ಅವಧಿ ಮುಗಿದ ನಂತರ ನಮ್ಮ ಕಕ್ಷಿದಾರರಿಗೆ ಕ್ರಯ ಪತ್ರ ಮಾಡಿಕೊಳ್ಳುತ್ತಾರೆ. ನಂತರದಲ್ಲಿ ಬಂದಂತಹ ಯಾವುದೇ ತಕರಾರುಗಳಿಗೆ ನಮ್ಮ ಕಕ್ಷಿದಾರರಿಗೆ ಅದು ಬದ್ಧ ಪಡಿಸುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮ, ನಿವೇಶನ ಸಂಖ್ಯೆ 172, ಪೂರ್ವ–ಪಶ್ಚಿಮ 12 ಮೀಟರ್, ಮತ್ತು ದಕ್ಷಿಣೋತ್ತರ 9.70 + 9.35/2 ಮೀಟರ್, ಒಟ್ಟು 114.30 ಮೀಟರ್, ಉನ್ನತಿ ಭಾರತಿ ಸಿಟಿ ಸರ್ವೆ ನಂ. 65/1, ಅಳತೆ 38 ಗುಂಟೆ, ಸರ್ವೆ ನಂ. 65/2, ರಲ್ಲಿ 1 ಎಕರೆ 20 ಗುಂಟೆ, ಸರ್ವೆ ನಂ. 65/3 ಅಳತೆ 19 ಗುಂಟೆ, ಸರ್ವೆ ನಂ. 66/1, ಒಟ್ಟು 2 ಎಕರೆ 32 ಗುಂಟೆ, ಸರ್ವೆ ನಂ. 66/4 ರಲ್ಲಿ ಅಳತೆ 27.5 ಗುಂಟೆ ಸರ್ವೆ ನಂ. 66/5 ರಲ್ಲಿ ಅಳತೆ 18 ಗುಂಟೆ, ಒಟ್ಟು ಅಳತೆ 9 ಎಕರೆ 35 ಗುಂಟೆ, ಬೋಗಾದಿ ಗ್ರಾಮ, ಸದರಿ ಸ್ವತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ: 12 ಮೀಟರ್ ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 171, ಉತ್ತರಕ್ಕೆ: 9 ಮೀಟರ್ ರಸ್ತೆ, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 173.

ದಿನಾಂಕ: 20–01–2025
ಸ್ಥಳ: ಮೈಸೂರು

ಎಂ.ಆರ್. ಸೂರ್ಯ ಕುಮಾರ್
ವಕೀಲರು
ನಂ. 148, 11ನೇ ಕ್ರಾಸ್, 12ನೇ ಮೈನ್,
ಸರಸ್ವತಿಪುರಂ, ಮೈಸೂರು-570 009
ಮೊ: 9845450011

ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರಾದ ಬೆಂಗಳೂರು ನಗರ, ಬೆಂಗಳೂರು ದಕ್ಷಿಣ, ಹೊಸಕೆರೆಹಳ್ಳಿ, ಕೃಷ್ಣಪ್ಪ ಬಡಾವಣೆ, 43ಚಿ ಕೊನೆ ಬಸ್ ನಿಲ್ದಾಣದ ಹತ್ತಿರ ಮನೆ ನಂ. 32ರಲ್ಲಿ ವಾಸವಾಗಿರುವ ದೀಪಕ್ ಕುಮಾರ್ ಎಂ.ಆರ್. ರವರ ಧರ್ಮಪತ್ನಿ ಹಾಗೂ ಲೇಟ್, ದೊಡ್ಡಯ್ಯ, ಎಂ.ಆರ್. ರವರ ಮಗಳಾದ ಸುಮಾರು 39 ವರ್ಷ ವಯಸ್ಸಿನ ಸೌಜನ್ಯ.ಎಂ.ಡಿ, ಮತ್ತು ಬೆಂಗಳೂರು ನಗರ, ಬೆಂಗಳೂರು ದಕ್ಷಿಣ, ಕೃಷ್ಣಪ್ಪ ಬಡಾವಣೆ, ಕೆರೆಪಾಳ್ಯ ಮುಖ್ಯ ರಸ್ತೆ, 1ನೇ ಅಡ್ಡರಸ್ತೆ, ಮನೆ ನಂ.32 ರಲ್ಲಿ ವಾಸವಾಗಿರುವ ಲೇಟ್. ದೊಡ್ಡಯ್ಯ, ಎಂ.ಆರ್. ರವರ ಮಗನಾದ ಸುಮಾರು 35 ವರ್ಷ ವಯಸ್ಸಿನ ರವಿ ಕಿರಣ್ ಎಂ.ಡಿ. ಇವರುಗಳ ಇರಾದೆ ಮೇರೆಗೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಕ್ರಮವೇನೆಂದರೆ, ಷೆಡ್ಯೂಲ್‌ನಲ್ಲಿ ನಮೂದಿರುವ ಸ್ವತ್ತನ್ನು, ನಮ್ಮ ಕಕ್ಷಿದಾರರುಗಳು ಸದರಿ ಸ್ವತ್ತಿನ ಮಾಲೀಕರಾದ ಮೈಸೂರು ತಾಲ್ಲೂಕು, ವರುಣ ಹೋಬಳಿ, ಸೋಮೇಶ್ವರಪುರ, ಮನೆ ನಂ. 11 ರಲ್ಲಿ ವಾಸವಾಗಿರುವ ಲೇಟ್, ಸ್ವಾಮಿ ರವರ ಧರ್ಮಪತ್ನಿಯಾದ ಸುಮಾರು 53 ವರ್ಷ ವಯಸ್ಸಿನ ಶ್ರೀಮತಿ. ಗಿರಿಜಮ್ಮ ಮತ್ತು ಇವರ ಮಗನಾದ ಸುಮಾರು 31 ವರ್ಷ ವಯಸ್ಸಿನ ಉಮೇಶ ಎಸ್., ಹಾಗೂ ಇವರ ಧರ್ಮಪತ್ನಿಯಾದ ಸುಮಾರು 23 ವರ್ಷ ವಯಸ್ಸಿನ ಬಿ.ಎಂ. ಅಂಬಿಕ ಮತ್ತು ಮೈಸೂರು ತಾಲ್ಲೂಕು, ವರುಣ ಹೋಬಳಿ, ಲಲಿತಾದ್ರಿಪುರ ಗ್ರಾಮದ ಮನೆ ನಂ. 326 ರಲ್ಲಿ ವಾಸವಾಗಿರುವ ಗಿರಿಜಮ್ಮ ರವರ ಮಗಳಾದ ಹಾಗೂ ಆರ್. ನಾಗರಾಜು ರವರ ಧರ್ಮಪತ್ನಿಯಾದ ಸುಮಾರು 32 ವರ್ಷ ವಯಸ್ಸಿನ ಮಣಿ ರವರುಗಳಿಂದ ಕ್ರಯಕ್ಕೆ ಪಡೆಯಲು ತೀರ್ಮಾನಿಸಿರುತ್ತಾರೆ. ಸದರಿ ಸ್ವತ್ತಿಗೆ ಮಾಲೀಕರಲ್ಲದೇ, ಹಕ್ಕು ಹಿತಾಸಕ್ತಿಯುಳ್ಳವರು ಮತ್ತು ಭಾಗಾಂಶವುಳ್ಳವರು ಯಾರಾದರು ಇದ್ದಲ್ಲಿ, ನನಗಾಗಲೀ ಅಥವಾ ನನ್ನ ಕಕ್ಷಿದಾರರಿಗಾಗಲೀ ಖುದ್ದಾಗಿ ಸೂಕ್ತ ದಾಖಲೆಗಳೊಡನೆ ಈ ಸಾರ್ವಜನಿಕ ಪ್ರಕಟಣೆ ಹೊರಡಿಸಿದ 7 ದಿನದೊಳಗೆ ತಿಳಿಸತಕ್ಕದ್ದು ಎಂದು ಈ ಮೂಲಕ ಪ್ರಕಟಣೆ, ನಂತರ ಬಂದ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ.

–: ಷೆಡ್ಯೂಲ್ ಸ್ವತ್ತಿನ ವಿವರ :–

ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಮೂಗೂರು ಹೋಬಳಿ, ಹ್ಯಾಕನೂರು ಗ್ರಾಮಕ್ಕೆ ಸೇರಿದ ಖುಷ್ಕಿ ಸರ್ವೆ ನಂ. 11/2 ರ ಒಟ್ಟು ವಿಸ್ತೀರ್ಣ 2–00 (ಎರಡು) ಎಕರೆ ಆಕಾರ 5.00 ರೂಪಾಯಿವುಳ್ಳ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಶಂಕ್ರಪ್ಪ ರವರ ಜಮೀನು ; ಪಶ್ಚಿಮಕ್ಕೆ: ಕಾಲುವೆ ಏರಿ ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ : ಶಂಕ್ರಪ್ಪ ರವರ ಜಮೀನು.

Sd/- B.C. Renuka Prasad, B.Sc., LL.B.
ADVOCATE, Roll No.1787/2009
#816, 10th Cross, Ramanuja Road
Date: 20-1-2025 MYSURU-570004

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

We Prioritize Growth
Job Post:
Electrical Engineer
Related to any Industry
Experience: 5 + years of experience (Male)
Education: Diploma / B.Tech
Job Location - Mysore
Contact: 9686600588

INDUSTRIAL / WAREHOUSE SHED FOR RENT
MEASURING - 4700 sq.ft and 2700 sq.ft with 50 HP Power at KRS Road Cross, Belagola Industrial Area.
Mob: 9986591019

St.Joseph's College of Teacher Education (B.Ed)
M.C. Road, Mandya - 571401

WANTED
Application with necessary certificates from eligible candidates for the following posts

Sl. No.	Post	Qlfn. (As per NCTE Norms)
1.	Assistant Professors of Pedagogy Education English - 01 History - 01 Biology - 01 Kannada - 01	M.A /M.Sc. M.Ed with 55% NET/KSET Ph.D in Education

Note : a) Apply on or before 28-01-2025
b) Interview date will be intimated, c) Attractive salary
For Further Details Contact : 08232-221095 / 9964438722
-Administrator

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ನಾಗಮಂಗಲ ಉಪ ವಿಭಾಗ, ನಾಗಮಂಗಲ
T.B.Extension, Nagamangala Pin code: 571 432,
Phone:08232-220630, Fax:08232-224921,
E-mail:acfnagamangala@gmail.com, dcfmandya@gmail.com
ಸಂ:ಸಅಸಂ:ಎನ್.ಎಂ.ಜಿ/ಟೆಂಡರ್/2024–25 ದಿ:16.01.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ) – 2ನೇ ಕರೆ

ಈ ಮೂಲಕ ಸಾರ್ವಜನಿಕರಿಗೆ ಮತ್ತು 2024–25ನೇ ಸಾಲಿನಲ್ಲಿ ನೊಂದಾವಣೆಯಾಗಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಈ ವಿಭಾಗದ ವಲಯಗಳಲ್ಲಿ ಮುಂಗಡ ಕಾಮಗಾರಿ ಮತ್ತು 8*12 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ವೆಬ್ ಸೈಟ್ http://kppp.karnataka.gov.in ರಲ್ಲಿ ಈ ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಟೆಂಡರ್ ವೇಳಾಪಟ್ಟಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ನಾಗಮಂಗಲ ಉಪ ವಿಭಾಗ, ನಾಗಮಂಗಲ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/565/2024–25

ಕೃಷಿ ಪ್ರವಾಸೋದ್ಯಮ-ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಹೊಸ ಆಯಾಮ ತರಬೇತಿ ಕಾರ್ಯಕ್ರಮ

ಮೈಸೂರು, ಜ.20– ಜೈಪುರದ ಚರಣಸಿಂಗ್‌ನಲ್ಲಿರುವ ರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆ (ಎನ್.ಐ.ಎ.ಎಂ), ರಾಜ್ಯ ಪ್ರವಾಸೋದ್ಯಮ ಇಲಾಖೆ ಮತ್ತು ಮೈಸೂರಿನ ವಿಶ್ವೇಶ್ವರಯ್ಯ ಅಭಿವೃದ್ಧಿ ಸಂಸ್ಥೆಗಳು ಒಟ್ಟಿಗೆ ಸೇರಿ, ಕೃಷಿ ಪ್ರವಾಸೋದ್ಯಮ–ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಹೊಸ ಆಯಾಮ' ಎಂಬ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್‌ನ ಎಸ್.ಪಿ.ಭಟ್ ಹಾಲ್ ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮ ಉದ್ಘಾಟನೆ ಮಾಡಿದ ಹೈದರಾಬಾದ್‌ನ ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆ (ನಿರ್ವಹಣೆ ಹಾಗೂ ವಿಶ್ಲೇಷಣೆ) ನಿರ್ದೇಶಕ ಡಾ. ಕೆ.ಸಿ. ಗುಮ್ಮಗೋಳ್ ಮಟ್, ಪ್ರವಾಸಿಗರಿಗೆ ಗ್ರಾಮೀಣ ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯವನ್ನು ಕೃಷಿ ಪ್ರವಾಸೋದ್ಯಮದ ಮೂಲಕ ಮಾಡಬಹುದು. ಇದು ಕೃಷಿ ಮತ್ತು ರೈತರ ಆದಾಯವನ್ನು ಹೆಚ್ಚಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಕೃಷಿ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುತ್ತದೆ. ಇದು ನಗರಗಳ ಜನರಿಗೆ ಕೃಷಿ ಚಟುವಟಿಕೆಯ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಮಾರುಕಟ್ಟೆ ವಿಸ್ತರಣೆಯೂ ಸಾಧ್ಯವಾಗುತ್ತದೆ. ಆ ಭಾಗದ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಗುತ್ತದೆ ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ ಮಾತನಾಡಿ, ಇಲಾಖೆಯಲ್ಲಿ ಇರುವ ಅನುಕೂಲತೆಗಳು, ಪಾಲಿಸಿ ಬಗ್ಗೆ ತಿಳಿಸಿ, ರೈತರು ಸ್ವಾವಲಂಬಿ ಆಗಿ ಆರ್ಥಿಕವಾಗಿ ಸಧೃಡ ಆಗಲು ಕೃಷಿ ಪ್ರವಾಸೋದ್ಯಮ ಒಂದು ಒಳ್ಳೆಯ ವಿಧಾನ ಎಂಬುದನ್ನು ಅಂಕಿ ಅಂಶಗಳ ಮೂಲಕ ತಿಳಿಸಿಕೊಟ್ಟಿದ್ದು, ಪ್ರವಾಸಿಗರಿಗೆ ಗ್ರಾಮೀಣ ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯವನ್ನು ಕೃಷಿ ಪ್ರವಾಸೋದ್ಯಮದ ಮೂಲಕ ಮಾಡಬಹುದು. ಇದು ಕೃಷಿ ಮತ್ತು ರೈತರ ಆದಾಯವನ್ನು ಹೆಚ್ಚಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಕೃಷಿ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುತ್ತದೆ. ಇದು ನಗರಗಳ ಜನರಿಗೆ ಕೃಷಿ ಚಟುವಟಿಕೆಯ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಮಾರುಕಟ್ಟೆ ವಿಸ್ತರಣೆಯೂ ಸಾಧ್ಯವಾಗುತ್ತದೆ. ಆ ಭಾಗದ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಗುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕ ಕುಮಾರ್.ಎಂ., ಡಿ.ಎನ್. ಹರ್ಷ ಸೇರಿದಂತೆ ಮೈಸೂರು, ಮಂಡ್ಯ, ಹಾಸನ, ಗದಗ, ಚಿತ್ರದುರ್ಗ ವಿಜಯನಗರ, ತುಮಕೂರು ಮುಂತಾದ ಕೆಲ ಜಿಲ್ಲೆಗಳ 30ಕ್ಕೂ ಆಸಕ್ತ ಆಯ್ಕೆಯಾದ ಕೃಷಿಕರು ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ
ಸ್ಕೌಟ್ ಭವನ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ – 571 201. ಕೊಡಗು ಜಿಲ್ಲೆ
ದೂರವಾಣಿ/ಫ್ಯಾಕ್ಸ್ : 08272–229074, 8762942976 (ಕ),
www.http.kodavaacadamy.karnataka.gov.in
ಇಮೇಲ್: kodava.acadamy@gmail.com
ಕ.ಕೊ.ಸಾ.ಅ/66/2024–2025 ದಿನಾಂಕ: 20–01–2025

ಟೆಂಡರ್ ಪ್ರಕಟಣೆ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯು 2024–2025ನೇ ಸಾಲಿನ ಕ್ರಿಯಾಯೋಜನೆಯ ಕ್ರಸಂ.9ರಲ್ಲಿ ಕಾಯ್ದಿರಿಸಿರುವ ಅನುದಾನದ ಮೇಲೆ ಅರ್ಹ ಆಯ್ದ ಕಲಾವಿದರಿಗೆ ದುಡಿ ಖರೀದಿ ಮಾಡಲು ಅರ್ಹ ಸಂಸ್ಥೆಗಳಿಂದ ಟೆಂಡರ್ ಕರೆಯಲಾಗಿದೆ. ದುಡಿ ನೀಡಲು ಇಚ್ಚಿಸುವ ಸಂಸ್ಥೆಯವರು ಈ ಕಛೇರಿಯಿಂದ ಟೆಂಡರ್ ನಮೂನೆಯನ್ನು ರೂ.150/– (ರೂಪಾಯಿ ನೂರ ಐವತ್ತು ಮಾತ್ರ) ಪಾವತಿಸಿ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28–01–2025ರ ಅಪರಾಹ್ನ 01–00 ಗಂಟೆಯಾಗಿರುತ್ತದೆ. ದಿನಾಂಕ : 30–01–2025ರಂದು ಬೆಳಿಗ್ಗೆ 11–00 ಗಂಟೆಗೆ ಈ ಕಛೇರಿಯಲ್ಲಿ ಟೆಂಡರ್ ತೆರೆಯಲಾಗುವುದು. ಇ.ಎಂ.ಡಿ. ಮೊತ್ತ ರೂ. 20,000/ – (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ವನ್ನು ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಸ್ಕೌಟ್ ಭವನ, ಮ್ಯಾನ್ಸ್ ಕಾಂಪೌಂಡ್ ಮಡಿಕೇರಿ ಇವರ ವಿಳಾಸಕ್ಕೆ ಡಿ.ಡಿ. ಪಡೆದು ಸಲ್ಲಿಸುವುದು.

ಷರತ್ತುಗಳು :

*. ದುಡಿಯು ಕಂಚಿನದಾಗಿದ್ದು 10 ಇಂಚು ಎತ್ತರ, 7 ಇಂಚು ಸುತ್ತಳತೆ ಉಳ್ಳದಾಗಿರತಕ್ಕದ್ದು, ಖಾಲಿ ದುಡಿಯು 1200 ಗ್ರಾಂನಿಂದ 1400 ಗ್ರಾಂಗಳಷ್ಟು ತೂಕದ್ದಾಗಿರತಕ್ಕದ್ದು, ದುಡಿಯು ಯಾವುದೇ ತರಹ ಜೋಡಣೆಯಿಂದಿರದೆ ಪೂರ್ತಿಯಾಗಿ ಒಂದೇ ಆಕಾರಕ್ಕೆ ಎರಕ ಒಯ್ದಿರತಕ್ಕದ್ದು, ದುಡಿಯು ಅಕಾಡೆಮಿ ನೀಡುವ ಮಾದರಿಯಿಂದಿದ್ದು ನಿಗದಿತ ಅವಧಿಯೊಳಗೆ ತಯಾರು ಮಾಡಿಕೊಡತಕ್ಕದ್ದು.

ಸಹಿ/– ರಿಜಿಸ್ಟ್ರಾರ್
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ